ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 02
ರೂ. 2.00

ಐಕ್ಯರಂಗ

8 ಜನವರಿ 1995



ಹತ್ತನೇ ವಿಧಾನಸಭೆ ಕಾರ್ಯಾರಂಭ - ಶ್ರಮಜೀವಿಗಳ ದನಿ ಕೇಳಬಹುದೇ?

ಕರ್ನಾಟಕದ ಮತದಾರರು ಆರಿಸಿ ಕಳಿಸಿದ ಹೊಸ ಪ್ರತಿನಿಧಿಗಳು ತಮ್ಮ ಕಾರ್ಯಾರಂಭ ಮಾಡಿದ್ದಾರೆ. ಜನತೆಯಿಂದ ಸ್ಪಷ್ಟ ಆದೇಶ ಪಡೆದ ಜನತಾದಳಸರಕಾರದ ಪರವಾಗಿ ರಾಜ್ಯಪಾಲರು ಮೊದಲ ಭಾಷಣ ಮಾಡಿದ್ದಾರೆ. ಹತ್ತುನಿಮಿಷಗಳ ಭಾಷಣದಲ್ಲಿ ಅದೂ ಹೊಸ ಸರಕಾರ ಅಧಿಕಾರ ವಹಿಸಿಕೊಂಡು ಕೆಲವೇ ದಿನಗಳಾಗಿರುವಾಗ ಈ ಸರಕಾರದ ನೀತಿ-ನಿಲುವುಗಳ ಪೂರ್ಣ ಚಿತ್ರ ಪಡೆಯುವ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ ಎಂಬ ತರ್ಕವಿದ್ದರೂ ಕೆಲವು ಒಲವುಗಳನ್ನಂತೂ ಗಮನಿಸಿದಿರಲು ಸಾಧ್ಯವಿಲ್ಲ.

ಸಹಕಾರಿ ವಲಯದಿಂದ ರೈತರು ಪಡೆದ ಕೃಷಿ ಸಾಲವನ್ನು ಮಾರ್ಚ್ 31 ರೊಳಗೆ ಪೂರ್ತಿ ಸಂದಾಯ ಮಾಡಿದರೆ ಬಡ್ಡಿ-ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಕಡುಬಡವರಿಗೆ ನೀಡಿದ ಹಸಿರು ಚೀಟಿಗಳಲ್ಲಿ ಅವರಿಗೆ ಕೈಗೆಟಕುವ ಬೆಲೆಯಲ್ಲಿ ಅಕ್ಕಿ ದೊರೆಯುವಂತೆ ಮಾಡಲು ಸಹಾಯಧನ ಒದಗಿಸುವ ಬಗ್ಗೆ "ಗಂಭೀರವಾಗಿ ಪರಿಶೀಲಿಸಲಾಗುವುದು". ಇದನ್ನು ಸಾಧಿಸಲು ಆಹಾರ ಧಾನ್ಯಗಳ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು "ಸೂಕ್ತ ರೀತಿಯಲ್ಲಿ" ಬಲಪಡಿಸುವ ಆಶ್ವಾಸನೆಯನ್ನೂ ನೀಡಲಾಗಿದೆ. ಆದರೆ 3.20 ರೂ.ಯಲ್ಲಿ ಅಕ್ಕಿ ಒದಗಿಸುವ ತನ್ನ ಚುನಾವಣಾ ಪ್ರಣಾಳಿಕೆಯ ಆಶ್ವಾಸನೆ ಬಗ್ಗೆ ಏನೂ ಹೇಳಿಲ್ಲ.

ಕೃಷ್ಣಾ ಕಾವೇರಿ ಜಲಾನಯನ ಯೋಜನೆಗೆ ನಿರ್ದಿಷ್ಟವಾಗಿ ಸಂಬಂಧಿಸಿದಂತೆ ರಾಜ್ಯ ಸರಕಾರ ಬಚಾವತ್ ಶೀರ್ಪಿನಲ್ಲಿ ನಿರೂಪಿಸಲಾಗಿರುವಂತೆ ಕ್ರಿ.ಶ. 2000 ರ ಹೊತ್ತಿಗೆ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ನೀರಾವರಿ ಬಾಂಡುಗಳ ಮೂಲಕ ಸಂಪನ್ಮೂಲ ಸಂಗ್ರಹಿಸಲು ಈ ಯೋಜನೆಯ ಅನುಕೂಲ ಪಡೆಯುವ ಸಂಬಂಧಪಟ್ಟ ಜಲಾನಯನ ಪ್ರದೇಶಗಳ ರೈತರು ಇದರಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರಯತ್ನಿಸಲಾಗುವುದು ಎಂಬುದು ಸರಕಾರದ ಇನ್ನೊಂದು ಆಶ್ವಾಸನೆ.

ಪಂಚಾಯತೀ ರಾಜ್ಯ ಶಾಸನದಲ್ಲಿ ಕಾಂಗ್ರೆ ಸರಕಾರ ಚುನಾಯಿತ ಪ್ರತಿನಿಧಿಗಳಿಂದ ಅಧಿಕಾರಗಳನ್ನು ಕಿತ್ತುಕೊಂಡು ಸರಕಾರೀ ಅಧಿಕಾರಿಗಳಿಗೆ ನೀಡಿರುವುದನ್ನು ಮತ್ತೆ ಸರಿಪಡಿಸಲು ತಿದ್ದುಪಡಿ ತರುವುದಾಗಿಯೂ ಸರಕಾರ ಸೂಚಿಸಿದೆ. ಮಹಿಳೆಯರಿಗೆ ವಿಧಾನಮಂಡಲದಲ್ಲಿ ಶೇ. 30 ಮೀಸಲಾತಿ ನೀಡುವ ಬಗ್ಗೆ ಜನತಾ ಪ್ರಾತಿನಿಧ್ಯ ಶಾಸನವನ್ನು ತಿದ್ದುಪಡಿ ಮಾಡಲು ಕೇಂದ್ರವನ್ನು ಕೇಳಲಾಗುವುದು.

"ನೀರು, ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯಗಳಿಗೆ ಬಳಕೆದಾರರು ತೆರಬೇಕಾದ ಶುಲ್ಕವನ್ನು ಶಾಸಕರೊಂದಿಗೆ ಸಮಾಲೋಚಿಸಿ ಹೆಚ್ಚು ವಾಸ್ತವಿಕವಾದ ದರಗಳನ್ನು ವಿಧಿಸಲು ಯತ್ನಿಸುತ್ತದೆ" ಎಂದು ಹೇಳಿರುವುದರ ಅರ್ಥ ಸದ್ಯದಲ್ಲಿ ನೀರು, ವಿದ್ಯುಚ್ಛಕ್ತಿ ದರಗಳ ಏರಿಕೆಯೆಂದೇ ಜನ ಭಾವಿಸುವಂತಾದರೆ ಆಶ್ಚರ್ಯವಿಲ್ಲ. ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ವಿತರಣೆಯಲ್ಲಿ ಖಾಸಗೀ ಬಂಡವಾಳಕ್ಕೆ ಪ್ರೋತ್ಸಾಹ ನೀಡಲಾಗುವುದು,ಆದರೆ ಅದರಲ್ಲಿ 'ಸಾರ್ವಜನಿಕ ಹಿತಾಸಕ್ತಿ'ಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ಕೊಡಲು ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಲಾಗುವುದು ಎಂದೂ ಸರಕಾರ ಹೇಳಿದೆ.

ಈ ಮಾತುಗಳನ್ನು ಜನ ಕಾಂಗ್ರೆ ಸರಕಾರದಿಂದಲೂ ಕೇಳಿದ್ದರು. "ವಾಸ್ತವಿಕ ದರ"ಗಳು, "ಸಾರ್ವಜನಿಕ ಹಿತಾಸಕ್ತಿ", "ಅನಗತ್ಯ ವೆಚ್ಚ" ಈ ಎಲ್ಲದಕ್ಕೆ ಕಾಂಗ್ರೆಸ್ಸಿನ ನೀತಿಗಳಲ್ಲಿ ಅದರದೇ ವಿಶೇಷ ಅರ್ಥವಿತ್ತು. ಅದೆಂದರೆ ನಮ್ಮ ಸಮಾಜದ ಮೇಲ್ವರ್ಗದ ಶೇ. 20 ದಷ್ಟು ಜನಗಳ, ಮಾರುಕಟ್ಟೆಯಲ್ಲಿ "ಖರೀದಿ ಸಾಮರ್ಥ್ಯ" ವಿರುವ ಜನಗಳ ದೃಷ್ಟಿ. ಇದನ್ನು ಕರ್ನಾಟಕದ ಮತ್ತು ಆಂಧ್ರಪ್ರದೇಶದ ಮತದಾರರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ ಎಂಬುದು ಜನತಾದಳ ಸರಕಾರದ ಗಮನದಲ್ಲೂ ಇರಬಹುದು.

ಮುಖ್ಯಮಂತ್ರಿಗಳು ದಿಲ್ಲಿಯಲ್ಲಿ ಪ್ರಧಾನ ಮಂತ್ರಿಗಳನ್ನು ಬೇಟಿಯಾದ ಸಂದರ್ಭದಲ್ಲಿ 'ಉದಾರೀಕರಣ'ದ ವಕೀಲಿ ಮಾಡುವ ಪತ್ರಿಕೆಗಳು ಶ್ರೀಮಾನ್ ದೇವೇಗೌಡರು ಕಾಂಗ್ರೆಸ ಹೊಸ ಆರ್ಥಿಕ ನೀತಿಗಳಿಗೆ ವಿರೋಧವಾಗಿಲ್ಲ ಎಂದು ಬಿಂಬಿಸಲು ಪ್ರಯತ್ನಿಸಿವೆ. ಆದರೆ ಕೃಷಿ ಸಬ್ಸಿಡಿಯ ಬಗ್ಗೆ ಅವರ ನಿಲುವು 'ಹೊಸ ಆರ್ಥಿಕ ನೀತಿ'ಗಳ ಮೂಲಭೂತ ತತ್ವಕ್ಕೆ ವಿರೋಧವಾದದ್ದೆಂಬುದನ್ನು ಮರೆಯಲು ಸಾಧ್ಯವೇ? ಅದೇನೇ ಇರಲಿ, ಕರ್ನಾಟಕದ ಮತದಾರರು ಮುಖ್ಯವಾಗಿ ಶ್ರಮಜೀವಿಗಳು ಜನತಾದಳ ಸರಕಾರದ ಈ ಮೊದಲ ನೀತಿ-ನಿರೂಪಣೆಯಲ್ಲಿ ಇನ್ನೂ ಹೆಚ್ಚು ಸ್ಪಷ್ಟತೆಯನ್ನು ನಿರೀಕ್ಷಿಸಿದ್ದರು. -ಮುಖ್ಯವಾಗಿ ತಮ್ಮ ದೈನಂದಿನ ಬದುಕನ್ನು ಬಾಧಿಸುತ್ತಿರುವ ಹೊಸ ಆರ್ಥಿಕ ನೀತಿಗಳು, ಮತ್ತಿತರ ಸಮಸ್ಯೆಗಳ ಮೇಲೆ. ಉದಾಹರಣೆಗೆ ಬಡ ಕೃಷಿಕೂಲಿಕಾರರ, ಅಸಂಘಟಿತ ಕಾರ್ಮಿಕರ ಕನಿಷ್ಠ ಕೂಲಿಯ ಬಗ್ಗೆ, ಅವರ ಸಾಮಾಜಿಕ ಸೌಲಭ್ಯಗಳ ಬಗ್ಗೆ ಶಿಕ್ಷಣದ ವ್ಯಾಪಾರೀಕರಣದ ತಡೆಯ ಬಗ್ಗೆ ಪ್ರಸ್ತಾಪ ಮಾಡಲು ಕೂಡಾ ಸಮಯದ ಅಭಾವ ಕಾರಣವಾಗಿರಲು ಸಾಧ್ಯವಿಲ್ಲವಲ್ಲ!

"ಜನಸಾಮಾನ್ಯರಿಗೆ ಸ್ಪಂದಿಸುವ ಪ್ರಾಮಾಣಿಕ, ಪಾರದರ್ಶಕ ಹಾಗೂ ದಕ್ಷ ಆಡಳಿತ" ನೀಡುವ ಭರವಸೆಯನ್ನು ಜನತಾದಳ ಸರಕಾರ ನೀಡಿದೆ. ಕಾಂಗ್ರೆಸ್(ಐ)ನ ನೀತಿಗಳಿಂದಾಗಿ ಅವರ ಇಂತಹ ಯಾವ ಮಾತನ್ನೂ ನಂಬಲು ಸಿದ್ಧರಿಲ್ಲದ ಪರಿಸ್ಥಿತಿಯಲ್ಲಿ ಕರ್ನಾಟಕದ ಜನತೆ ಪರ್ಯಾಯವಾಗಿ ತಮಗೆ ಅಧಿಕಾರ ನೀಡಿದ್ದಾರೆಂಬುದನ್ನು ಜನತಾದಳದ ಮುಖಂಡರು ಮರೆಯದಿರಲಿ. ಅವರಿಗೆ ಬೇಕೋ ಬೇಡವೋ ರಾಜ್ಯದ ಜನತಾದಳ ಕೇಂದ್ರದ ಹೊಸ ಆರ್ಥಿಕ ನೀತಿಗಳ ಅನುಷ್ಠಾನದ ವಿರುದ್ಧ, ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಗಾಗಿ, ಪ್ರಜಾಪ್ರಭುತ್ವವಾದಿಗಳ, ಪ್ರಗತಿಪರರ ಹೋರಾಟದಲ್ಲಿ ಪಾಲ್ಗೊಳ್ಳಲೇಬೇಕಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬುದನ್ನು ಅವರು ಮರೆಯಲು ಸಾಧ್ಯವಿಲ್ಲ.

ಡಿಜಿ ಡಿಬಿಡಿ

ರಾಯರ ಬಳಿ ಬಡವರಿಗೆ ಸಮಯವೇ ಇಲ್ಲ. ಅಕ್ಕಿ ಬೇಕು ಎಂದವರಿಗೆ ಕೆಲ್ಲೋಗ್ಸ್ ಕಾರ್ನ್‌ಫ್ಲೇಕ್‌ಗಳನ್ನು ಬೇಕೇ ಎನ್ನುತ್ತಾರೆ. ಶುದ್ಧ ಕುಡಿಯುವ ನೀರು ಬೇಕೆನ್ನುವವರಿಗೆ ಪೆಪ್ಸಿ ಕುಡಿಯಿರಿ ಎನ್ನುತ್ತಾರೆ. ಅಗ್ಗದ ವಿದ್ಯುಚ್ಛಕ್ತಿ ಬಯಸುವವರಿಗೆ ಎನ್ರೋನ್, ಹಿಂದೂಜಾಗಳತ್ತ ತೋರಿಸುತ್ತಾರೆ.

– ಭರತ್ ಭೂಷಣ್

'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಅಂಕಣಕಾರ

ಸಾಮ್ರಾಜ್ಯಶಾಹಿಗಳ ವಿರುದ್ಧ ಶ್ರೀಲಂಕಾದಲ್ಲಿ ಆಕ್ರೋಶ: ಶ್ರೀಲಂಕಾದಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿಗಳ ದನಿ 'ವಾಯ್ಸ್ ಆಫ್ ಅಮೇರಿಕಾ' ಕೇಂದ್ರದ ಸ್ಥಾಪನೆಗೆ ವಿರೋಧಿಸಲು ನಡೆದ ಒಂದು ಮತ ಪ್ರದರ್ಶನದ ದೃಶ್ಯ



ಇಸ್ರೋ ಬೇಹುಗಾರಿಕೆ ಹಗರಣ

ನಮ್ಮ ಬಾಹ್ಯಾಕಾಶ ಕಾರ್ಯಕ್ರಮವನ್ನು ಬುಡಮೇಲು ಮಾಡುವ ಪ್ರಯತ್ನವಿರಬಹುದೇ?

ಬೇರೊಂದು ದೇಶಕ್ಕಾಗಿ ಬೇಹುಗಾರಿಕೆ ಮಾಡುತ್ತಿದ್ದರು ಎಂಬ ಕಾರಣಕ್ಕಾಗಿ ಕೆಲವು ವಿಜ್ಞಾನಿಗಳ ಬಂಧನ ಒಂದು ಗಂಭೀರ ಸಂಗತಿ ಎಂಬುದರಲ್ಲಿ ಆಶ್ಚರ್ಯವಿಲ್ಲ. ಆದರೆ ನಿಜವಾದ ಅಪರಾಧಿಗಳು ಯಾರು ಎಂದು ತಿಳಿಯಲು ಇದರ ಮೂಲಕ್ಕೆ ಹೋಗುವುದು ಅಷ್ಟೇ ಅಗತ್ಯ. ಈ ವಿಷಯದಲ್ಲಿ ಪತ್ರಿಕಾ ಊಹಾಪೋಹಗಳಿಗೆ ಮಾರು ಹೋಗಬಾರದು. ಯಾವುದೇ ಒಳ್ಳೆಯ ಪತ್ತೇದಾರನು ಮೊದಲು ನೋಡುವ ವಿಷಯ ಈ ಬೇಹುಗಾರಿಕೆಯ ಗುರಿಯೇನಿರಬಹುದು ಎಂಬುದು. ವಾಣಿಜ್ಯ ಲಾಭಕ್ಕಾಗಿ ಭಾರತದ ಬಾಹ್ಯಾಕಾಶ ತಂತ್ರಜ್ಞಾನವನ್ನು ಯಾರಾದರೂ ಬಯಸುತ್ತಿದ್ದರೋ ಅಥವಾ ನಮ್ಮ ಬಾಹ್ಯಾಕಾಶ ಸಂಶೋಧನೆಯನ್ನು ಬುಡಮೇಲು ಮಾಡಲೆಂದೋ ಅಥವಾ ಕೇವಲ ಭಾರತದ ಬಾಹ್ಯಾಕಾಶ ತಂತ್ರಜ್ಞಾನ ಯಾವ ಮಟ್ಟದಲ್ಲಿದೆ ಎಂದು ತಿಳಿಯಲೋ?

ಮಾಲ್ಡೀವಿಯಾದ ಇಬ್ಬರು ಮಹಿಳೆಯರಿಗೆ ಈ ರಹಸ್ಯಗಳನ್ನು ಹೊರಗೆಳೆಯಲು ಕೆಲಸ ಕೊಟ್ಟವರಾರು? ಮಾಲ್ಡೀವಿಯಾ ಮಾಡಿರಲಿಕ್ಕಿಲ್ಲ. ಪಾಕಿಸ್ತಾನದ ಹೆಸರು ಬಂದಿದೆ. ಆದರೆ ಅದರ ಗುರಿಗಳನ್ನು ಪರಿಶೀಲಿಸಿದಾಗ ಕೆಲವು ಸಮಸ್ಯೆಗಳು ಬರುತ್ತವೆ. ತಿರುವನಂತಪುರದಲ್ಲಿ ತಯಾರಿಸುತ್ತಿರುವ ಬಾಹ್ಯಾಕಾಶ ಯಂತ್ರಗಳನ್ನು ಉಡಾವಣೆ ಮಾಡುವ ವಾಹನಗಳಿಂದ ಪಾಕಿಸ್ತಾನಕ್ಕೆ ಹೆದರಿಕೆಯೇನೂ ಇಲ್ಲ. ಅವರಿಗೆ ತಿಳಿಯಬೇಕಾದ್ದು ಅಗ್ನಿ ಹಾಗೂ ಪೃಥ್ವಿ ಕ್ಷಿಪಣಿಗಳ ಬಗ್ಗೆ. ಆದರೆ ಇವುಗಳ ವಿನ್ಯಾಸ ಬೇರೆ ಕತೆ ಆಗುತ್ತಿದೆ. ನಿಜ ಬೇರೆ ಯಾವುದೇ ಬೇಹುಗಾರಿಕೆ ಸಂಸ್ಥೆಯಂತೆ ಪಾಕಿಸ್ತಾನ ಗುಪ್ತಚರ ಇಲಾಖೆ ಕೂಡಾ ಭಾರತದ ತಂತ್ರಜ್ಞಾನ ಯಾವ ಮಟ್ಟದಲ್ಲಿದೆ ಎಂದು ತಿಳಿದುಕೊಳ್ಳ ಬಯಸಬಹುದು. ಆದರೆ ಅದೊಂದು ಆದ್ಯತೆಯ ಕ್ಷೇತ್ರವಾಗುವ ಸಂಭವವಿಲ್ಲ.

ಹೌದು, ಭಾರತದ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ವಿರೋಧವನ್ನು ಸಾರಿರುವ ಒಂದು ದೇಶವಿದೆ. ಅದೆಂದರೆ ಅಮೇರಿಕಾ. ಭಾರತದ ಈ ಕಾರ್ಯಕ್ರಮವನ್ನು ದೂರಗಾಮಿ ಕ್ಷಿಪಣಿಗಳನ್ನು ತಯಾರಿಸಲು ಬಳಸಬಹುದು, ಇದು ತನ್ನ ಹಿತಾಸಕ್ತಿಗೆ ಮಾರಕ ಎಂದು ಅದರ ನಂಬಿಕೆ. ಈ ನಂಬಿಕೆಯಿಂದಲೇ ೧೯೯೨ ರಲ್ಲಿ ಅದು ಭಾರತಕ್ಕೆ ಕ್ರಯೋಜನಿಕ್ ರಾಕೆಟ್ ಇಂಜಿನ್ ನೀಡದಂತೆ ರಶ್ಯಾದ ಮೇಲೆ ಒತ್ತಡ ಹಾಕಿತ್ತು. ವಾಸ್ತವವಾಗಿ ಈ ಇಂಜಿನನ್ನೂ ಕ್ಷಿಪಣಿಗಳಲ್ಲಿ ಬಳಸುವುದು ಕಷ್ಟ. ಭಾರತದ ಬಾಹ್ಯಾಕಾಶ ಕಾರ್ಯಕ್ರಮವನ್ನು ಬಿಡಬೇಕು ಎಂದು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಅಮೇರಿಕ ಹಲವು ಬಾರಿ ವಾದ ಹೂಡಿದೆ. ಇದಲ್ಲದೆ ಇನ್ನೂ ಏನೆಲ್ಲಾ ತೆರೆಮರೆಯ ತಂತ್ರಗಳನ್ನು ಬಳಸಲಾಗಿರಬಹುದು. ಈ ಬೇಹುಗಾರಿಕೆ ಹಗರಣ ಅಂತಹುದೇ ಒಂದು ಪ್ರಯತ್ನವಾಗಿರಲೂಬಹುದು. ಸಿ.ಐ.ಎ. ಪರವಾಗಿ ಪಾಕಿಸ್ತಾನ ಐ.ಎಸ್.ಐ. "ಕಾಂಟ್ರಾಕ್ಟ್ ಮೇರೆಗೆ" ಈ ಹಗರಣವನ್ನು, ಹುಟ್ಟು ಹಾಕಿರಲೂಬಹುದು. ಬೇಹುಗಾರಿಕೆ ಪ್ರಪಂಚದಲ್ಲಿ ಇಂತಹ ವಂಚನೆಗಳು ಅಪರೂಪವೇನಲ್ಲ. ಈ ಎರಡು ಬೇಹುಗಾರಿಕೆ ಸಂಸ್ಥೆಗಳ ನಡುವೆ ನಿಕಟ ಸಂಪರ್ಕ ಇದೆ ಎಂದು ಮೊದಲಿನಿಂದಲೂ ತಿಳಿರುವ ಸಂಗತಿ.


ತಿರುವನಂತಪುರದ ದ್ರವ ಚಾಲನ ಕೇಂದ್ರ (Liquid Propulsion Centre)ದ ನಂಬಿ ನಾರಾಯಣ್ ಮತ್ತು ಇತರ ಪ್ರಮುಖ ವ್ಯಕ್ತಿಗಳ ಬಂಧನ ಹಾಗೂ ಅವರ ಹೆಸರು ಕೆಡಿಸಿದ್ದು ನಮ್ಮ ಕ್ರಯೋಜನಿಕ್ ಕಾರ್ಯಕ್ರಮಕ್ಕೆ ಕೆಟ್ಟ ಹೆಸರು ನೀಡುವ ಪ್ರಯತ್ನವೂ ಆಗಿರಬಹುದೇ ಎಂದು ಈಗಲೇ ಹೇಳಲಾಗದು. ನಂಬಿ ನಾರಾಯಣನ್ ಫ್ರಾನ್ಸಿನಿಂದ ದ್ರವ ಚಾಲಿತ ವೈಕಿಂಗ್/ವಿಕಾಸ ಇಂಜಿನ್ ಪಡೆಯುವಲ್ಲಿ ನೆರವಾದ ಪ್ರಮುಖ ವ್ಯಕ್ತಿ. ಅಲ್ಲದೆ ರಶ್ಯಾದಿಂದ ಕ್ರಯೊಜೆನಿಕ್ ತಂತ್ರಜ್ಞಾನ ಪಡೆಯುವಲ್ಲಿಯೂ ಪ್ರಮುಖ ಪಾತ್ರವಹಿಸಿದ ವ್ಯಕ್ತಿ.

ಬೇಹುಗಾರಿಕೆ ಸಂಸ್ಥೆಗಳಿಗೆ ತಮ್ಮ ಕೆಲಸ ಸಾಧಿಸುವುದು ಮುಖ್ಯವೇ ಹೊರತು ಅದಕ್ಕೆ ಬಳಸುವ ಸಾಧನಗಳಲ್ಲ, ಆದ್ದರಿಂದ ಅವು ಏನು ಮಾಡಲೂ ತಯಾರು. ಆದ್ದರಿಂದ ಇಸ್ರೋ ಸಿಬ್ಬಂದಿ ವಿರುದ್ಧ ಬೊಬ್ಬೆ ಎಬ್ಬಿಸುವಾಗ ನಾವು ನಮ್ಮ ಬಾಹ್ಯಾಕಾಶ ಕಾರ್ಯಕ್ರಮವನ್ನು ನಾಶಮಾಡಬಯಸುವವರ ಬಲೆಗೆ ಬೀಳುವಂತಾಗಬಾರದು.

ಇಸ್ರೋ (ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ) ಸಾಕಷ್ಟು ಮುಕ್ತವಾಗಿರುವ ಸಂಸ್ಥೆ. ಪತ್ರಕರ್ತರು, ವಿದೇಶೀ ಪರಿಣತರು ಅದರ ಸೌಲಭ್ಯಗಳನ್ನು ಬಳಸಲು ಅವಕಾಶವಿದೆ. ಅದರ ಕಾರ್ಯಕ್ರಮಗಳ ವಿವರಗಳನ್ನು ತಿಳಿಯಲು ಸಾಕಷ್ಟು ಅಧಿಕೃತ ಪ್ರಕಟಣೆಗಳೇ ಇವೆ. ಪರೀಕ್ಷೆಗಳ, ಉಪಕರಣಗಳ ಫೋಟೋಗಳೂ ಎಲ್ಲರಿಗೂ ಸಿಗುತ್ತವೆ. ಆದ್ದರಿಂದ ಅಲ್ಲಿ ಇರುವ 'ರಹಸ್ಯ' ಬಹಳ ಕಡಿಮೆ. ಆದರೂ ಈ ಮುಕ್ತತೆಯನ್ನು ದುರುಪಯೋಗವನ್ನು ಶತ್ರುಗಳು ಮಾಡಿಕೊಳ್ಳಬಹುದು, ವಿವರವಾದ ಮಾಹಿತಿಗಳನ್ನು ಬುಡಮೇಲು ಕೃತ್ಯಗಳಿಗೆ ಬಳಸಲೂ ಸಾಧ್ಯ.

ಏನೇ ಆಗಲಿ, ಇಸ್ರೋದಂತಹ ಸಂಘಟನೆಗಳಲ್ಲಿ, ಸರಕಾರದಲ್ಲಿ ಇಂತಹ ತಪ್ಪುಗಳನ್ನು ಮಾಡುವವರಿಗೆ ಅವಕಾಶವಿರಬಾರದು. ಲೈಂಗಿಕತೆ ಮತ್ತು ಲಂಚ ಬೇಹುಗಾರಿಕೆಯ ಸಾಮಾನ್ಯ ಸಾಧನಗಳು. ವ್ಯಕ್ತಿಗಳನ್ನು ಬ್ಲಾಕ್‌ಮೇಲ್ ಮಾಡಲು ಕೂಡಾ ಇವೇ ಸಾಧನಗಳನ್ನು ಬಳಸಲಾಗುತ್ತದೆ ತಾನೇ. ಭ್ರಷ್ಟಾಚಾರ ತುಂಬಿದ ವಾತಾವರಣದಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂದು ಕೆಲವರು ಭಾವಿಸುತ್ತಾರೆ. ರಾಜಕಾರಣಿಗಳು, ಪೋಲೀಸರು, ಅಧಿಕಾರಿಗಳು ಭೋಗ ಜೀವನ ನಡೆಸಬಹುದಾದರೆ ಉಳಿದವರೂ ಅದೇ ದಾರಿ ಹಿಡಿಯಬಯಸುವುದಿಲ್ಲವೇ? ಆದರೆ ಸೂಕ್ಷ್ಮ ಸ್ಥಾನಗಳಲ್ಲಿ ಇರುವವರು ಇವಕ್ಕೆಲ್ಲಾ ಮಿತಿಗಳಿವೆ ಎಂಬುದನ್ನು ಅರಿಯುವಷ್ಟು ಪ್ರೌಢರಿರಬೇಕು. ಸಿಕ್ಕಿಬಿದ್ದಿದ್ದೇವೆ ಎಂದನಿಸಿದರೆ ಅವರು ತಕ್ಷಣ ಸೂಕ್ತ ಅಧಿಕಾರಿಗಳಿಗೆ ತಿಳಿಸಬೇಕಾಗಿತ್ತು. ಒಂದು ದುರ್ಬಲ ಗಳಿಗೆಯಲ್ಲಿ ಮಾಡಿದ ತಪ್ಪಿಗೆ ಬೈಗುಳ ಕೇಳುವುದು ದೇಶದ್ರೋಹಿ ಎನಿಸುವುದಕ್ಕಿಂತ ಮೇಲಲ್ಲವೇ?

(ಐ.ಎನ್.ಎಸ್.)



(ಕಳೆದ ಸಂಚಿಕೆಯಿಂದ)

12ನೇ ಮಹಾಧಿವೇಶನ ಮತ್ತು ಆನಂತರ ಪ್ರಮುಖ ರಾಜಕೀಯ ಶಕ್ತಿಯಾಗಿ ಸಿಪಿಐ(ಎಂ)

ವಿಜಯವಾಡ ಅಧಿವೇಶನ ನಂತರದ ನಾಲ್ಕು ವರ್ಷಗಳ ಅನುಭವವನ್ನು 12ನೇ ಅಧಿವೇಶನ ಪರಿಶೀಲಿಸಿತು. ಆಳುವ ಕಾಂಗ್ರೆಸ್(ಐ) ಪಕ್ಷ ಪ್ರಭಾವವನ್ನು ಕಳೆದುಕೊಂಡರೂ ರಾಜೀವ್ ಗಾಂಧಿ ನೇತೃತ್ವದಲ್ಲಿ ಅದು ಜನವಿಭಾಗದಲ್ಲಿ ಆಶಾವಾದವನ್ನು ಹುಟ್ಟಿಸಿತು. ಏನೋ ಹೊಸತು ಸಂಭವಿಸುತ್ತಿತ್ತು. ಪಂಜಾಬ್ ಮತ್ತು ಅಸ್ಸಾಂ ಒಪ್ಪಂದಗಳು ಹಾಗೂ ಸ್ವಚ್ಛ ಆಡಳಿತದ ಬಗ್ಗೆ ನೀಡಿದ ಆಶ್ವಾಸನೆಗಳನ್ನು ಗಮನಿಸಿ ಕಾಂಗ್ರೆಸ್(ಐ) ಯಾವುದೋ ಹೊಸ ಹಾದಿಯನ್ನು ತುಳಿಯುತ್ತಿದೆ ಎಂದು ಜನರು ಭಾವಿಸಿದರು. ಕಾಂಗ್ರೆಸ್(ಐ) ಸರ್ವಾಧಿಕಾರದತ್ತ ಧಾವಿಸಲು ಯತ್ನಿಸುತ್ತಿತ್ತು ಇದು ವ್ಯವಸ್ಥೆಯ ರಾಜಕೀಯ ಬಿಕ್ಕಟ್ಟನ್ನು ಪ್ರತಿಬಿಂಬಿಸಿತ್ತು..

ಇದೇ ಹೊತ್ತಿಗೆ ಸಾಮ್ರಾಜ್ಯಶಾಹಿಯಲ್ಲಿನ ವೈರುಧ್ಯವೂ ತೀಕ್ಷ್ಣಗೊಂಡಿತು. ಭಾರತವನ್ನು ಛಿದ್ರಗೊಳಿಸುವ ಕುತಂತ್ರ ಗುಟ್ಟಾಗಿಯೇನೂ ಉಳಿಯಲಿಲ್ಲ, ಆದರೆ ಆಳುವ ಪಕ್ಷವಾಗಲೀ, ಬಂಡವಾಳಶಾಹಿ ಪ್ರತಿಪಕ್ಷಗಳಾಗಲಿ ಈ ಅಪಾಯದ ವಾಸ್ತವತೆಯನ್ನು ಅರಿಯಲಿಲ್ಲ ಅಥವಾ ಅದರ ಬಗ್ಗೆ ಜನರಿಗೆ ಎಚ್ಚರಿಕೆ ನೀಡಲಿಲ್ಲ. ಧಾರ್ಮಿಕ ಮೂಲಭೂತವಾದದ ಸವಾಲು ಹೆಚ್ಚಿತು. ಮಾತ್ರವಲ್ಲದೆ ಮೀಸಲಾತಿ ವಿಷಯದಲ್ಲಿ ಕಾರ್ಮಿಕ ಜನರೂ ಪರಸ್ಪರ ಬಡಿದಾಡುವ ಬಣಗಳಾಗಿ ವಿಭಾಗಗೊಂಡರು. ಕಾರ್ಮಿಕ ವರ್ಗ ಮತ್ತು ಶೋಷಿತ ಜನರ ಏಕತೆಯನ್ನು ಉಳಿಸಿಕೊಳ್ಳುವ ಸಮಸ್ಯೆ ತೀವ್ರವಾಯಿತು. ಕೇಂದ್ರ ರಾಜ್ಯ ಸಂಬಂಧಗಳ ಪ್ರಶ್ನೆಯಲ್ಲಿ ಆಳುವ ಮತ್ತು ಬಂಡವಾಳಶಾಹಿ ಪ್ರತಿಪಕ್ಷಗಳ ನಡುವಿನ ವೈರುಧ್ಯಗಳು ತೀಕ್ಷ್ಣಗೊಂಡವು. ರಾಷ್ಟ್ರೀಯ ಏಕತೆಯನ್ನು ರಕ್ಷಿಸುವುದಕ್ಕೆ ಪಕ್ಷಗಳ ಅಧಿವೇಶನ ಹೆಚ್ಚಿನ ಒತ್ತು ನೀಡಿತು.

ಕಾಂ. ರಜನಿ ಪಾಮೆ ದತ್ ಅವರ ಅಭಿಪ್ರಾಯಗಳು ಸರಿಯೆಂಬುದು ಈ ಅವಧಿಯಲ್ಲಿ ಸ್ಪಷ್ಟಪಟ್ಟಿತು. ಪಕ್ಷ ಒಮ್ಮೆ ಭಾರತೀಯ ಜನತೆಯ ವಿಶ್ವಾಸ ಮತ್ತು ಬೆಂಬಲ ಗಳಿಸಿತೆಂದರೆ ಜಗತ್ತಿನೆಲ್ಲೆಡೆಯ ಕಮ್ಯುನಿಸ್ಟ್ ಪಕ್ಷಗಳು ನಮ್ಮೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸಲು ಆಸಕ್ತಿ ತೋರಿಸುತ್ತವೆ ಎಂದು ಸಿಪಿಐ(ಎಂ) ಸ್ಥಾಪನೆ ವೇಳೆ ರಜನಿ ಪಾಮೆ ದತ್ ಹೇಳಿದ್ದರು. ಅಂದಿನಿಂದಲೂ ನಾವು ದೇಶದ ಪ್ರಮುಖ ಎಡಶಕ್ತಿಯಾಗಿ ಹೊರಹೊಮ್ಮಿದ್ದೇವೆ. ಹಾಗೂ ಅನೇಕ ವಿದೇಶೀ ಕಮ್ಯುನಿಸ್ಟ್ ಪಕ್ಷಗಳು ನಮ್ಮೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡಿವೆ.

ಜಾಗತಿಕ ರಂಗದಲ್ಲಿ ಎಂಬತ್ತರ ದಶಕದ ಮಧ್ಯಭಾಗದಲ್ಲಿ ಕ್ಷಿಪ್ರ ವಿದ್ಯಮಾನಗಳು ಸಂಭವಿಸಿದವು. ಆನಂತರದ ಅವಧಿಯಲ್ಲಿ ಇನ್ನೂ ಕ್ಷಿಪ್ರವಾದ ಬದಲಾವಣೆಗಳು ನಡೆದವು. ಅಣುಯುದ್ಧದ ದುರಂತವನ್ನು ತಡೆಯಲು ಸೋವಿಯತ್ ಒಕ್ಕೂಟ ಸತತ ಯತ್ನಗಳನ್ನು ನಡೆಸಿತು. ಯುರೋಪ್ ನಿಂದ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ತೆಗೆದು ಹಾಕುವ ಬಗ್ಗೆ ಅದು 1987 ಫೆಬ್ರುವರಿಯಲ್ಲಿ ಪ್ರಸ್ತಾವಗಳನ್ನು ಮುಂದಿಟ್ಟಿತು. ಏಷ್ಯಾ-ಪೆಸಿಫಿಕ್ ವಲಯದಲ್ಲಿನ ಶಾಂತಿ ಹಾಗೂ ಸುಭದ್ರತೆಗೂ ಈ ಪ್ರಸ್ತಾವ ಮಹತ್ವದ್ದಾಗಿತ್ತು. ವಿಶ್ವಸಂಸ್ಥೆ 'ಅಂತಾರಾಷ್ಟ್ರೀಯ ಶಾಂತಿ ವರ್ಷ' ಎಂದು ಘೋಷಿಸಿದ್ದ 1986ರಲ್ಲಿ ಸೋವಿಯತ್ ಒಕ್ಕೂಟದ ಏಕಪಕ್ಷೀಯ ನಿರ್ಬಂಧದ ವಿಷಯವೇ ಪ್ರಧಾನವಾಗಿ ಚರ್ಚೆಯ ವಸ್ತುವಾಗಿತ್ತು. ಆದರೆ ಅಮೇರಿಕ ಹೊಸ ಪ್ರಯೋಗಗಳನ್ನು ನಡೆಸುತ್ತಲೇ ಇತ್ತು ಹಾಗೂ 'ತಾರಾ ಸಮರ' ಯೋಜನೆಯನ್ನು ಮುಂದುವರಿಸಿತು. ಆನಂತರ, ಯುರೋಪ್‌ನಿಂದ ಎಲ್ಲಾ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ತೆಗೆದು ಹಾಕುವ ಬಗ್ಗೆ ಸೋವಿಯತ್ ಒಕ್ಕೂಟ ಮತ್ತು ಅಮೇರಿಕ ನಡುವೆ ಒಪ್ಪಂದವೇರ್ಪಟ್ಟಿತು. ಅಣ್ವಸ್ತ್ರಗಳ ಒಟ್ಟು ಪ್ರಮಾಣದ ಶೇಕಡ 4 ರಿಂದ 5 ರಷ್ಟಕ್ಕೆ ಮಾತ್ರ ಇದು ಸಂಬಂಧಪಟ್ಟಿದ್ದರೂ ನಮ್ಮ ಪಕ್ಷ ಈ ಒಡಂಬಡಿಕೆಯನ್ನು ಸ್ವಾಗತಿಸಿತು. ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳು ಸತತವಾಗಿ ಅನುಸರಿಸಿದ ಶಾಂತಿ ನೀತಿ ಹಾಗೂ ಜಗತ್ತಿನಾದ್ಯಂತ ನಡೆದ ವಿಶ್ವಶಾಂತಿ ಚಳುವಳಿಯಿಂದಾಗಿ ಅಂತರ್‍ರಾಷ್ಟ್ರೀಯವಾಗಿ ಅಮೇರಿಕ ಪ್ರತ್ಯೇಕಗೊಂಡಿತು. ಸಮಾಜವಾದಿ ಮತ್ತು ಇತರ ಶಾಂತಿಪ್ರಿಯ ದೇಶಗಳನ್ನು ಬ್ಲಾಕ್ ಮೇಲ್ ಮಾಡುವ ಪ್ರಯತ್ನಗಳನ್ನು ಅಮೇರಿಕ ಕೈಬಿಟ್ಟರೂ ಸಂಧಾನಕ್ಕೆ ಬರುವ ಒತ್ತಡ ಅದು ಒಳಗಾಯಿತು.

ಶಾಂತಿಪ್ರಿಯ ಶಕ್ತಿಗಳ ಪರವಾಗಿ ಶಕ್ತಿಗಳ ಧ್ರುವೀಕರಣವಾಗಿದ್ದರಿಂದ ಸ್ಥಳೀಯ ಸಂಘರ್ಷಗಳನ್ನು ಇತ್ಯರ್ಥಪಡಿಸಲಿಕ್ಕೆ ಹಲವು ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಯಿತು. ಅಫ್ಘಾನಿಸ್ತಾನದ ಬಗ್ಗೆ ಜಿನೇವಾ ಒಪ್ಪಂದ, ಎಂಟು ವರ್ಷಗಳಿಂದ ನಡೆಯುತ್ತಿದ್ದ ಇರಾನ್-ಇರಾಕ್ ಸಮರಕ್ಕೆ ವಿರಾಮ, ಸ್ವತಂತ್ರ ನಮೀಬಿಯಾ ಕುರಿತ ಒಪ್ಪಂದ ಇವು ಕೆಲವು ಉದಾಹರಣೆಗಳಾಗಿವೆ.

ಸೋವಿಯತ್ ಒಕ್ಕೂಟದಲ್ಲಿನ ಕ್ಷಿಪ್ರ ವಿದ್ಯಮಾನಗಳು, ಅದರಲ್ಲೂ ವಿಶೇಷವಾಗಿ ಆ ದೇಶದ ಸಾಮಾಜಿಕ-ಆರ್ಥಿಕ ಜೀವನದಲ್ಲಿನ ಪೆರಾಸ್ಟ್ರೋಯ್ಕಾ ಕಾರ್ಯಕ್ರಮ ಇಡೀ ಜಗತ್ತಿನ ಮಾನವ ಕುಲದ, ಮುಖ್ಯವಾಗಿ ಜಾಗತಿಕ ಕಮ್ಯುನಿಸ್ಟ್ ಆಂದೋಲನದ ಗಮನ ಸೆಳೆಯಿತು. ನಮ್ಮ ಪಕ್ಷ ಸೋವಿಯತ್ ವಿದ್ಯಮಾನಗಳತ್ತ ಗಮನಹರಿಸಿತು. ಅದರಲ್ಲಿ ಒಳಗೊಂಡಿರುವ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸೈದ್ಧಾಂತಿಕ ವಿಚಾರಗಳನ್ನು ಚರ್ಚಿಸಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿತು. 1987 ನವೆಂಬರ್ ನಲ್ಲಿ ಮಾಸ್ಕೋದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ನಿಯೋಗವೊಂದು ಭಾಗವಹಿಸಿತು. ಈ ಸಮಾರಂಭದಲ್ಲಿ ಸಿ.ಪಿ.ಎಸ್.ಯು. ಪ್ರಧಾನ ಕಾರ್ಯದರ್ಶಿ ಮಿಖಾಯಿಲ್ ಗೊರ್ಬಚೆವ್ ಒಂದು ವರದಿಯನ್ನು ಮಂಡಿಸಿದರು. ಜಾಗತಿಕ ಪರಿಸ್ಥಿತಿ ಕುರಿತ ಸಿಪಿಎಸ್ ಯು ಕೇಂದ್ರ ಸಮಿತಿಯ ಅಭಿಪ್ರಾಯ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಕಾರ್ಯಭಾರವನ್ನು ಆ ವರದಿ ಸರಿಯಾಗಿ ಅರ್ಥೈಸದೆ ಹಾದಿತಪ್ಪಿತು ಎಂದು ನಮ್ಮ ಪಕ್ಷದ ನಿಯೋಗ ವಿಶ್ಲೇಷಿಸಿತು. ಪರಿಸ್ಥಿತಿ ಬಗ್ಗೆ ನಮ್ಮ ಒಪ್ಪಿಗೆ ಇಲ್ಲದಿರುವುದನ್ನು ನಮ್ಮ ನಿಯೋಗ ಸಿಪಿಎಸ್‌ಯುಗೆ ತಿಳಿಸಿತು. ಈ ವಿಷಯಗಳ ಬಗ್ಗೆ ನಮ್ಮೊಂದಿಗೆ ಚರ್ಚಿಸಲು ಅದು ಸಮ್ಮತಿಸಿತು. ವಿಯೆಟ್ನಾಂ, ಚೀನಾ, ಜಪಾನ್, ಅಮೇರಿಕ ಮತ್ತು ಕ್ಯೂಬಾ ಕಮ್ಯುನಿಸ್ಟ್ ಪಕ್ಷಗಳಿಗೂ ಗೋರ್ಬಚೆವ್ ವರದಿ ಬಗ್ಗೆ ನಮ್ಮ ಪಕ್ಷದ ನಿಲುವನ್ನು ವಿವರಿಸಲಾಯಿತು. ಸ್ವಲ್ಪ ದಿನಗಳ ನಂತರ ನಮ್ಮ ಪಕ್ಷದ ನಿಯೋಗವೊಂದು ಮಾಸ್ಕೋಗೆ ಭೇಟಿ ನೀಡಿ ಈ ವಿಷಯದ ಬಗ್ಗೆ ಸಿಪಿಎಸ್‌ಯು ಪ್ರತಿನಿಧಿಗಳೊಂದಿಗೆ ಚರ್ಚಿಸಿತು. ಆದರೆ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ.

೧೯೮೮ ಮೇ ತಿಂಗಳಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ 'ನಿರ್ದಿಷ್ಟ ಸೈದ್ಧಾಂತಿಕ ಪ್ರಶ್ನೆಗಳು' ಎಂಬ ಶೀರ್ಷಿಕೆಯಡಿ ವಿವರವಾದ ಗೊತ್ತುವಳಿಯೊಂದನ್ನು ಅಂಗೀಕರಿಸಿತು. 70ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಗೊರ್ಬಚೆವ್ ಮಂಡಿಸಿದ ವರದಿ ಮೇಲಿನ ವಿಶ್ಲೇಷಣೆ ಅದರಲ್ಲಿ ಅಡಕವಾಗಿತ್ತು. ಪಕ್ಷದ ಆಂತರಿಕ ಚರ್ಚೆಗಾಗಿ ಆ ಗೊತ್ತುವಳಿಯನ್ನು ಪ್ರಸಾರಮಾಡಲಾಯಿತು.

(ಮುಂದುವರಿಯುವುದು)

ಕರ್ನಾಟಕ ವಿಧಾನಸಭಾ ಚುನಾವಣೆಗಳು-94

ಹಿಂದಿನ ಸಂಚಿಕೆಯಲ್ಲಿ ಉತ್ತರ ಕರ್ನಾಟಕದ ಕರಾವಳಿ ಹಾಗೂ ಮಲೆನಾಡಿನ ಜಿಲ್ಲೆಗಳ ಅಂಕಿ ಅಂಶಗಳನ್ನು ನೋಡಿರುವಿರಿ. ಈ ಬಾರಿ ಇನ್ನೂ ಆರು ಜಿಲ್ಲೆಗಳ ವಿವರ



ಬಳ್ಳಾರಿ

1989ರಲ್ಲಿ ಕಾಂಗ್ರೆಸ್ (ಐ) 8 ಸ್ಥಾನಗಳನ್ನು ಹಾಗೂ ಉಳಿದ ಒಂದು ಸ್ಥಾನವವನ್ನು ಜನತಾದಳ ಪಡೆದಿತ್ತು. ಈ ಬಾರಿ ಕಾಂಗ್ರೆಸ್(ಐ) ಸಂಖ್ಯೆ 3ಕ್ಕಿಳಿದಿದೆ. ಆದರೆ ಜನತಾದಳ ಸ್ಥಾನ 1 ರಿಂದ 3 ಕ್ಕೇರಿದೆಯಷ್ಟೆ. ಉಳಿದವುಗಳಲ್ಲಿ ಒಂದು ಬಿಜೆಪಿಗೆ, ಎರಡು ಪಕ್ಷೇತರರಿಗೆ ಹೋಗಿದೆ. ಕೆ.ಸಿ.ಪಿ. ಮಾತ್ರವಲ್ಲ ದಳ ಹಾಗೂ ಬಿಜೆಪಿ ಕೂಡಾ 5ನೇ ಸ್ಥಾನಕ್ಕೆ ಹೋಗಿರುವುದೂ, ಬಿಜೆಪಿ ಕೆಲವಡೆ ಕೆಸಿಪಿಯಂತೆ 6 ಕಡೆ ಠೇವಣಿ ನಷ್ಟಮಾಡಿಕೊಂಡಿರುವುದು ಗಮನಾರ್ಹ.

ಬಲಾಬಲ	ಕಾಂಗ್ರೆಸ್(ಐ)	ಕೆ.ಸಿ.ಪಿ.	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	3	-	3	1
2ನೇ ಸ್ಥಾನಗಳು	6	1	1	-
3ನೇ ಸ್ಥಾನ	-	4	3	1
4ನೇ ಸ್ಥಾನ	-	3	1	4
5ನೇ ಸ್ಥಾನ	-	1	1	3
ಠೇವಣಿ ನಷ್ಟ	5	6	1	6
ಗೆಲುವಿನ ಅಂತರ				
1000ಕ್ಕಿಂತ ಕಮ್ಮಿ	-	-	-	-
1-2 ಸಾವಿರ	-	-	-	-
2-5 ಸಾವಿರ	2	-	-	-
5-10 ಸಾವಿರ	-	-	-	-
10-20 ಸಾವಿರ	-	-	2	1
20 ಸಾವಿರಕ್ಕಿಂತ ಹೆಚ್ಚು	1	-	1	-
ಮತಗಳ ಶೇಕಡಾ				
1989ರಲ್ಲಿ	46.97	-	40.23	0.04
1994ರಲ್ಲಿ	28.94	10.93	26.42	11.82

1989ರಲ್ಲಿ ಜನತಾ ಪಾರ್ಟಿ ಶೇ. 5.8.ಮತ ಪಡೆದಿತ್ತು. ಹೀಗೆ ಜನತಾದಳದ ಒಟ್ಟು ಮತಗಳಿಕೆ ಇಳಿಮುಖವಾಗಿರುವುದು ಸ್ಪಷ್ಟ. ಆದರೂ ಕಾಂಗ್ರೆ ಜನಗಳ ಕಾಂಗ್ರೆ ವಿರೋಧದಿಂದಾಗಿ ಅದರ ಸ್ಥಾನದಲ್ಲಿ ಹೆಚ್ಚಳವಾಗಿದೆ.

ಚಿತ್ರದುರ್ಗ

1989ರಲ್ಲಿ ಕಾಂಗ್ರೆಸ್(ಐ) 9ಸ್ಥಾನ ಗಿಟ್ಟಿಸಿದ್ದರೆ ಜನತಾದಳ ಹಾಗೂ ಪಕ್ಷೇತರರು ಒಂದೊಂದು ಸ್ಥಾನ ಪಡೆದಿದ್ದರು. ಈ ಬಾರಿದಳದ ಸ್ಥಾನಗಳ ಸಂಖ್ಯೆ ೫ಕ್ಕೇರಿದೆ. ಕಾಂಗ್ರೆನದು 2 ಕ್ಕಿಳಿದಿದೆ. ಒಂದು ಬಿಜೆಪಿ, ಕೆಸಿಪಿಗಳಿಗೂ ಒಂದೊಂದು ಸ್ಥಾನ ಪಡೆಯಲು ಸಾಧ್ಯವಾಗಿದೆ. ಇಬ್ಬರು ಪಕ್ಷೇತರರೂ ಆರಿಸಿಬಂದಿದ್ದಾರೆ. ನಾಲ್ಕು ಪ್ರಮುಖ ಪಕ್ಷಗಳು ಹಲವೆಡೆ ಠೇವಣಿಗಳನ್ನು ಕಳೆದುಕೊಂಡಿರುವುದೂ ಗಮನಾರ್ಹ.

ಬಲಾಬಲ	ಕಾಂಗ್ರೆಸ್(ಐ)	ಕೆಸಿಪಿ	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	2	1	5	1
2ನೇ ಸ್ಥಾನ	5	-	1	3
3ನೇ ಸ್ಥಾನ	2	3	-	4
4ನೇ ಸ್ಥಾನ	2	5	3	1
ಠೇವಣಿ ನಷ್ಟ	2	8	4	4
ಗೆಲುವಿನ ಅಂತರ				
1000ಕ್ಕಿಂತ ಕಮ್ಮಿ	-	-	1	-
1-2ಸಾವಿರ	1	-	1	1
2-5ಸಾವಿರ	-	1	-	1
5-10ಸಾವಿರ	-	-	1	-
10-20 ಸಾವಿರ	-	-	3	-
20 ಸಾವಿರಕ್ಕೂ ಹೆಚ್ಚು	-	-	-	1

ಮತಗಳ ಶೇಕಡಾ				
1989ರಲ್ಲಿ	40.02	-	26.62	1.7
1994ರಲ್ಲಿ	23.96	12.60	22.39	19.5

ಇದಲ್ಲದೆ 1989ರಲ್ಲಿ ಜನತಾಪಕ್ಷ 16.6 ಶೇ. ಮತ ಪಡೆದಿತ್ತು. ಅಂದರೆ ಈಗಿನ ಜನತಾದಳಕ್ಕೆ 11ಶೇ. ದಷ್ಟು ಮತಗಳಲ್ಲಿ ಕಡಿತ

ತುಮಕೂರು

ಕಾಂಗ್ರೆಸ್‌ನ ೧೩ ಸ್ಥಾನಗಳು ಈ ಬಾರಿ 3 ಕ್ಕಿಳಿದಿವೆ. 1989 ರಲ್ಲಿ ಒಂದೇ ಸ್ಥಾನ ಪಡೆದಿದ್ದ ಜನತಾದಳ 6 ಸ್ಥಾನಗಳನ್ನು ಪಡೆದರೂ ಶೇಕಡಾ ಮತಗಳಿಕೆಯ ಪ್ರಮಾಣ ಗಮನಾರ್ಹವಾಗಿ ಹೆಚ್ಚಿಲ್ಲ. ಕಾಂಗ್ರೆ ಮತಗಳಿಕೆ ಪ್ರಮಾಣ ಗಮನಾರ್ಹವಾಗಿ ಇಳಿದಿದೆ. ಠೇವಣಿ ನಷ್ಟದಲ್ಲಿ ಕೆಸಿಪಿಗಿಂತಲೂ ಬಿಜೆಪಿ ಮುಂದೆ!

ಬಲಾಬಲ	ಕಾಂಗ್ರೆಸ್(ಐ)	ಕೆ.ಸಿ.ಪಿ.	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	3	1	6	2
2ನೇ ಸ್ಥಾನ	7	-	3	2
3ನೇ ಸ್ಥಾನ	2	1	4	5
4ನೇ ಸ್ಥಾನ	15	4	-	5
ಠೇವಣಿ ನಷ್ಟ	1	8	1	9
ಗೆಲುವಿನ ಅಂತರ				
1000ಕ್ಕಿಂತ ಕಮ್ಮಿ	-	-	-	-
1-2 ಸಾವಿರ	1	-	-	-
2-5 ಸಾವಿರ	-	-	2	-
5-10 ಸಾವಿರ	2	-	1	1
10-20 ಸಾವಿರ	-	-	3	1
ಮತಗಳ ಶೇಕಡಾ				
1989ರಲ್ಲಿ	44.0	-	23.7	3.4
1994ರಲ್ಲಿ	28.0	6.5	29.0	15.0

1989ರಲ್ಲಿ ಜನತಾ ಪಕ್ಷ ಎಂಬುದನ್ನು ಶೇ. 20.8 ಮತಗಳಿಸಿತ್ತು. ಗಮನಿಸಿದರೆ ಜನತಾದಳ ಮತಗಳಿಕೆ ಕಮ್ಮಿಯಾಗಿದೆ.

ಕೋಲಾರ

1989ಕ್ಕೆ ಹೋಲಿಸಿಧರೆ ಕಾಂಗ್ರೆ ಜನತಾದಳ ಸ್ಥಾನಗಳು ಅದಲು ಬದಲಾಗಿದೆ. ಕಾಂಗ್ರೆನ 9 ಸ್ಥಾನ ಈಗ 1 ಕ್ಕಿಳಿದಿದೆ. ಜನತಾದಳದ 1 ಸ್ಥಾನ 8 ಕ್ಕೇರಿದೆ. ಈ ಜಿಲ್ಲೆಯಲ್ಲಿ ಉಳಿದ ಸ್ಥಾನಗಳನ್ನು ಸಿಪಿಐ(ಎಂ), ಬಿ.ಆರ್.ಪಿ. ಹಾಗೂ ಒಬ್ಬ ಬಂಡಾಯ ಅಭ್ಯರ್ಥಿ ಗೆದ್ದಿದ್ದಾರೆ. ಕೆ.ಸಿ.ಪಿ. ಎಲ್ಲಾ ಸ್ಥಾನಗಳಲ್ಲಿ ಠೇವಣಿ ಕಳಕೊಂಡರೆ ಬಿಜೆಪಿ 10 ಸ್ಥಾನಗಳಲ್ಲಿ ಕಳಕೊಂಡಿದೆ.

ಬಲಾಬಲ	ಕಾಂಗ್ರೆಸ್(ಐ)	ಕೆ.ಸಿ.ಪಿ.	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	1	-	8	-
2ನೇ ಸ್ಥಾನ	6	-	2	1
3ನೇ ಸ್ಥಾನ	3	-	1	6
4ನೇ ಸ್ಥಾನ	-	7	-	5
5ನೇ ಸ್ಥಾನ	2	1	-	1
ಠೇವಣಿ ನಷ್ಟ	3	12	-	10
ಗೆಲುವಿನ ಅಂತರ				
ಸಾವಿರಕ್ಕಿಂತ ಕಡಿಮೆ	-	-	1	-
1-2 ಸಾವಿರ	-	-	-	-
2-5 ಸಾವಿರ	-	-	-	-
5-10 ಸಾವಿರ	-	-	4	-
10-20 ಸಾವಿರ	1	-	1	-
20 ಸಾವಿರಕ್ಕಿಂತ ಹೆಚ್ಚು	-	-	1	-
ಶೇಕಡಾವಾರು				
1989ರಲ್ಲಿ	42.81	-	22.13	0.6
1994ರಲ್ಲಿ	29.69	2.28	37.80	6.7

ಜನತಾಪಕ್ಷ 1989ರಲ್ಲಿ 14.48 ಶೇ. ಮತಗಳಿಸಿತ್ತು. ಆದ್ದರಿಂದ ಜನತಾದಳದ ಮತದಲ್ಲಿ ಗಣನೀಯ ಹೆಚ್ಚಳವಾಗಿಲ್ಲ, ಆದರೆ ಕಾಂಗ್ರೆ ಮತಗಳಲ್ಲಿ ಗಣನೀಯ ಕಡಿತವಾಗಿದೆ.

ಮಂಡ್ಯ

ಇಲ್ಲೂ ಕಾಂಗ್ರೆ ಜನತಾದಳ ಸ್ಥಾನಗಳು ಅದಲು ಬದಲಾಗಿವೆ. ಕಳೆದ ಬಾರಿ ೮ ಸ್ಥಾನ ಪಡೆದಿದ್ದ ಕಾಂಗ್ರೆಗೆ ಈ ಬಾರಿ ಸೊನ್ನೆ, ಸೊನ್ನೆಯಿದ್ದ ಜನತಾದಳಕ್ಕೆ ೭ ರೈತ ಸಂಘ ಹಾಗೂ ಪಕ್ಷೇತರರು ಉಳಿದೆರಡು ಸ್ಥಾನಗಳನ್ನು ಗೆದ್ದಿದ್ದಾರೆ. ಜನತಾದಳ ಗೆಲುವಿನ ಅಂತರವೂ ೫ ಕಡೆ ೨೦ ಸಾವಿರಕ್ಕಿಂತ ಹೆಚ್ಚು. ಅಂದರೆ ಜನತಾದಳ ಭಾರೀ ಜಯಗಳಿಸಿದೆ. ಬಿಜೆಪಿ ೭ ಕಡೆ ಠೇವಣಿಕಳಕೊಳ್ಳುವಂತಾಗಿದೆ.

ಬಲಾಬಲ	ಕಾಂಗ್ರೆಸ್(ಐ)	ಕೆಸಿಪಿ	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	-	-	7	-
2ನೇ ಸ್ಥಾನ	5	-	1	2
3ನೇ ಸ್ಥಾನ	2	1	1	-
4ನೇ ಸ್ಥಾನ	1	2	-	2
5ನೇ ಸ್ಥಾನ	1	1	-	4
ಠೇವಣಿ ನಷ್ಟ	1	9	-	7
ಗೆಲುವಿನ ಅಂತರ				
1000ಕ್ಕಿಂತ ಕಡಿಮೆ	-	-	-	-
1-2 ಸಾವಿರ	-	-	-	-
2-5 ಸಾವಿರ	-	-	1	-
5-10ಸಾವಿರ	-	-	1	-
10-20 ಸಾವಿರ	-	-	-	-
20 ಸಾವಿರಕ್ಕೂ ಹೆಚ್ಚು	7	-	5	-
ಶೇಕಡಾವಾರು				
1989ರಲ್ಲಿ	39.61	-	12.14	0.4
1994ರಲ್ಲಿ	20.89	2.0	43.53	7.8

ಜನತಾಪಕ್ಷ 1989ರಲ್ಲಿ ಶೇ. 24.9 ಮತ ಪಡೆದಿತ್ತು. ಇದನ್ನು ಗಮನಿಸಿದರೆ ಜನತಾದಳದ ಮತಗಳಿಕೆ ಶೇ. ೫ ರಷ್ಟು ಹೆಚ್ಚಿದೆ. ಆದರೆ 7 ಸ್ಥಾನಗಳನ್ನೂ ಪಡೆಯುವಂತಾಗಿದೆ.

ಮೈಸೂರು

ಕಳೆದ ಬಾರಿ ೧೪ ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆ ಎಲ್ಲವನ್ನೂ ಕಳಕೊಂಡಿದೆ. ನಾಲ್ಕು ಕಡೆ ಠೇವಣಿಗಳನ್ನೂ ಕಳಕೊಂಡಿದೆ. ಬಿಜೆಪಿ ೪ ಸ್ಥಾನಗಳನ್ನು ಗೆದ್ದರೂ ಉಳಿದ ಒಂದೆಡೆ ಬಿಟ್ಟು ಮತ್ತೆಲ್ಲಾ ಕಡೆ ಠೇವಣಿ ಕಳಕೊಂಡಿದೆ.

ಬಲಾಬಲ	ಕಾಂಗ್ರೆಸ್(ಐ)	ಕೆಸಿಪಿ	ಜನತಾದಳ	ಬಿಜೆಪಿ
ಗೆದ್ದ ಸ್ಥಾನಗಳು	-	-	11	4
2ನೇ ಸ್ಥಾನ	11	-	1	2
3ನೇ ಸ್ಥಾನ	2	3	4	5
4ನೇ ಸ್ಥಾನ	3	4	-	3
ಠೇವಣಿ ನಷ್ಟ	4	15	-	11
ಗೆಲುವಿನ ಅಂತರ				
1000ಕ್ಕಿಂತ ಕಡಿಮೆ	-	-	-	-
1-2 ಸಾವಿರ	-	-	2	1
2-5 ಸಾವಿರ	-	-	1	1
5-10ಸಾವಿರ	-	-	1	1
10-20 ಸಾವಿರ	-	-	3	-
20 ಸಾವಿರಕ್ಕೂ ಹೆಚ್ಚು	-	-	4	-
ಶೇಕಡಾವಾರು				
1989ರಲ್ಲಿ	48.91	-	26.61	3.24
1994ರಲ್ಲಿ	27.04	5.28	43.94	14.52

ಜನತಾಪಕ್ಷ 1989ರಲ್ಲಿ ಶೇ. 13.48 ಮತ ಪಡೆದಿತ್ತು. ಆದ್ದರಿಂದ ಜನತಾದಳದ ಮತಗಳಿಕೆ ಅದರ ಸ್ಥಾನಗಳಿಕೆಗೆ ಅನುಗುಣವಾಗಿ ಹೆಚ್ಚಿಲ್ಲ. ಆದರೆ ಕಾಂಗ್ರೆನ ಮತಗಳಿಕೆ ಗಮನಾರ್ಹವಾಗಿ ಇಳಿದಿದೆ. ಅದರ ಬಹುಪಾಲು ಬಿಜೆಪಿಗೆ ಹೋದಂತಿದೆ.

ರಾಮದುರ್ಗದ ಮಹಿಳಾ ಬೀಡಿ ಕಾರ್ಮಿಕರ ಧೀರ ಹೋರಾಟ ಸಾಗಿದೆ

ನಿಪ್ಪಾಣಿಯ ಕುರುಬೆಟ್ಟಿ ಬಂಧುಗಳ ವಿಲಾಸ ಬೀಡಿ ಕಾರ್ಖಾನೆ ರಾಮದುರ್ಗದಲ್ಲಿ ಆರಂಭವಾಗಿ ಸುಮಾರು 13-14 ವರ್ಷಗಳಾದವು. ಇಲ್ಲಿ ಸುಮಾರು 180 ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನವರೆಗೆ ಅಂದರೆ 1992 ರವರೆಗೆ ಇಲ್ಲಿ ಸರಕಾರ ಸಿದ್ಧಪಡಿಸಿದ ಕನಿಷ್ಟ ಕೂಲಿ, ಸರಿಯಾದ ದಾಖಲಾತಿ, ಬೋನಸ್, ಗ್ರಾಚ್ಯುಟಿ ಇತ್ಯಾದಿ ಕಾನೂನು ಬದ್ಧ ಸೌಲಭ್ಯಗಳನ್ನು ಕಾಲಕಸವಾಗಿ ಮಾಡಲಾಗಿತ್ತು.

ಒಟ್ಟು 180 ಕಾರ್ಮಿಕರಲ್ಲಿ ಕೇವಲ 35 ಜನರಿಗೆ ಮಾತ್ರ ಕಾಯಂ ಹಾಜರಾತಿ ಪುಸ್ತಕ ಒದಗಿಸಿ ಪ್ರಾವಿಡೆಂಟ್ ಫಂಡ್ ಅನ್ವಯಿಸಲಾಗಿತ್ತು. ಉಳಿದೆಲ್ಲ ಕಾರ್ಮಿಕರ ಸರ್ವಿಸ್ ಸುಮಾರು 10-12 ವರ್ಷಗಳಾಗಿದ್ದರೂ ೫೯ ದಿನಗಳ ಹಾಜರಾತಿ ಪುಸ್ತಕ ಕೊಟ್ಟು ಪ್ರಾವಿಡೆಂಟ್ ಫಂಡ್ ಅನ್ವಯವಾಗದಿರುವಂತೆ ನೋಡಿಕೊಳ್ಳಲಾಗುತ್ತಿತ್ತು. ಏಕೆಂದರೆ 60 ದಿನಗಳು ಕೆಲಸ ಮಾಡಿದರೆ ಪ್ರಾವಿಡೆಂಟ್ ಫಂಡ್ ಜಾರಿಯಾಗುತ್ತದೆ.

1992ರಲ್ಲಿ ಸಂಘ ರಚನೆಯಾದ ನಂತರ ಈ ಎಲ್ಲ ಸಮಸ್ಯೆಗಳ ಬಗ್ಗೆ ಹಂತ ಹಂತವಾಗಿ ಕ್ರಮ ವಹಿಸುವಂತೆ ಆಡಳಿತ ವರ್ಗಕ್ಕೆ ವಿನಂತಿಸಲಾಗಿತ್ತು. ಕಾರ್ಮಿಕ ಸಂಘ ರಚಿಸಿದ್ದನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುವ ಬದಲು ಆಡಳಿತ ವರ್ಗದ ಸೇಡಿನ ಭಾವನೆಯಿಂದ ಕಾರ್ಖಾನೆ ಮುಚ್ಚುವ ಬೆದರಿಕೆ ಒಡ್ಡಿ ಜುಲೈ 5, 1992ರಂದು ಸಂಘಕ್ಕೆ ಪತ್ರ ಬರೆಯಿತು. ದಬ್ಬಾಳಿಕೆಯ ಪ್ರಥಮ ಹೆಜ್ಜೆಯಾಗಿ ಜುಲೈ 25, 1992ರಂದು 13 ಜನ ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಯಿತು.

ಸತತ ಒತ್ತಾಯ ಹಾಗೂ ಪ್ರತಿಭಟನೆ ನಂತರ ಕನಿಷ್ಠ ಕೂಲಿ, ಬೋನಸ್, ಹಾಜರಾತಿ ಪುಸ್ತಕ ರದ್ದತಿ ಇತ್ಯಾದಿ ಪಡೆಯಲು ಸಾಧ್ಯವಾಯಿತು. ಫ್ಯಾಕ್ಟರಿ ಪ್ರಾರಂಭವಾಗಿ 14 ವರ್ಷಗಳ ನಂತರ ಪ್ರಪ್ರಥಮ ಸಲ ಹಣದ ರೂಪದಲ್ಲಿ ಬೋನಸ್ ಪಡೆಯಲು ಸಾಧ್ಯವಾಯಿತು. (ಅದಕ್ಕೂ ಮೊದಲು ಕಾನೂನು ರೀತ್ಯಾ ಬೋನಸ್ ಕೊಡುವ ಬದಲು ಲೋಟ, ತಟ್ಟೆ, ಬ್ಲಾಜವೀಸ್ ಇತ್ಯಾದಿ ಕೊಡಲಾಗುತ್ತಿತ್ತು)

ಸುಮಾರು ವರ್ಷಗಳಿಂದ ಕಾರ್ಮಿಕರಿಗೆ ಮೋಸ

ಪುಟ 6 ನೋಡಿ



ಕಾಂಗ್ರೆಸ್ ಸರಕಾರ ಎತ್ತಸಾಗಿದೆ ಎಂಬ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ವಿಶ್ಲೇಷಣೆ

ಜನಗಳ ಕ್ರೋಧದ ಬೆಂಕಿ ಕಾಂಗ್ರೆಸ್(ಐ)ನ್ನು ಸುಡಲಿದೆ

-ಸುರ್ಜಿತ್

ನಾಯಿ ಬಾಲ ಡೊಂಕೇ. ಈ ಗಾದೆಯ ಬಗ್ಗೆ ಯಾರಿಗಾದರೂ ಸಂಶಯವೇನಾದರೂ ಇದಿದ್ದರೆ ನರಸಿಂಹರಾವ್ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಅದನ್ನು ಅಲುಗಾಡಿಸುತ್ತಿರುವ ಹಲವಾರು ಹಗರಣಗಳಲ್ಲಿ ತಪ್ಪಿತಸ್ಥರೆಂದು ಕಂಡು ಬಂದವರನ್ನು ರಕ್ಷಿಸುವ ಕಾಂಗ್ರೆಸ್ ನ ವ್ಯರ್ಥ ಪ್ರಯತ್ನಗಳನ್ನು ಕಂಡ ಮೇಲಂತೂ ಮನವರಿಕೆಯಾಗಬೇಕು. ಬೇರಿನ್ನೇನು ಹೇಳೋಣ? ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಸಂಪೂರ್ಣ ಸೋಲಿನ ನಂತರವಾದರೂ ಮುಖ ವುಳಿಸಿಕೊಳ್ಳಲು ಏನಾದರೂ ಮಾಡಬಹುದೆಂದು ಕೂಡಾ ಈ ಆಳುವ ಪಕ್ಷದಿಂದ ನಿರೀಕ್ಷಿಸುವಂತಿಲ್ಲ! ***ಕಾಂಗ್ರೆಸ್ ಮುಖಂಡರೆಂದರೇ ಭ್ರಷ್ಟಾಚಾರ ಎಂಬ ಮಾತಿನಲ್ಲಿ ಈಗ ಯಾರಿಗೂ ಸಂಶಯವುಳಿಯಬೇಕಾಗಿಲ್ಲ,***

ಸಂಸತ್ತಿನ ಚಳಿಗಾಲದ ಅಧಿವೇಶನವಿಡೀ ಕಾಂಗ್ರೆಸ್ ಪಕ್ಷ ಸಾರ್ವಜನಿಕ ನಿಧಿಗಳ ಲೂಟಿಯ, ವಂಚನೆಯ ಆರೋಪ ಹೊತ್ತ ಮಂತ್ರಿಗಳನ್ನು ರಕ್ಷಿಸುವ ಪ್ರಯತ್ನದಲ್ಲೇ ಕಳೆಯಿತು.

ಮೊದಲನೆಯದಾಗಿ ಸಕ್ಕರೆ ಹಗರಣ. ಜ್ಞಾನಪ್ರಕಾಶ ಸಮಿತಿಗೆ ಕಂಡು ಬಂದ ಅಂಶಗಳನ್ನು ಪ್ರಕಟಿಸುವುದಿಲ್ಲವೆಂದು ಮೊಂಡುತನ ತೋರಿದ ಸರಕಾರ ಕೊನೆಗೂ ಅದನ್ನು ಪ್ರತಿಯೊಂದು ಸಂಸತ್ ಸದಸ್ಯರಿಗೆ ಕೊಡದಿದ್ದರೂ ಸಂಸತ್ತಿನ ಗ್ರಂಥಾಲಯದಲ್ಲಿ ಇಡುವಂತೆ ಮಾಡುವಲ್ಲಿ ವಿರೋಧ ಪಕ್ಷಗಳು ಯಶಸ್ವಿಯಾದವು. ಸರಕಾರ ಹಿಂದೇಟು ಹಾಕಲು ಕಾರಣಗಳಿದ್ದವು. ಆಹಾರ ಮಂತ್ರಿ ಕಲ್ಪನಾಥ್ ರಾಯ್ ಮೇಲಿನ ಆರೋಪವನ್ನು ಖಂಡಿಸುತ್ತಾ ಕಾಂಗ್ರೆ ಸದಸ್ಯ ಮಣಿಶಂಕರ್ ಅಯ್ಯರ್ ಹೇಳಿದ ಮಾತುಗಳಿಂದಲೇ ಇದು ಸ್ಪಷ್ಟವಾಗುತ್ತದೆ. ***ಕಲ್ಪನಾಥ್ ರಾಯ್ ರವರನ್ನು ಸಮರ್ಥಿಸುತ್ತಾ ಈ ಸಕ್ಕರೆ ಹಗರಣ ಗಿರಾಕಿ ಮಾಲಕರಿಗೆ ಲಾಭ ದೋಚುವ ಸನ್ನಿವೇಶ ನಿರ್ಮಿಸುವಲ್ಲಿ ಇತರ ಮಂತ್ರಿಗಳ ಕೈವಾಡವೂ ಇತ್ತೆಂದು ಅಯ್ಯರ್ ರವರ ಸಮರ್ಥನೆಯಿಂದ ಸ್ಪಷ್ಟವಾಯಿತು.*** ಕಲ್ಪನಾಥ್ ರಾಯ್ ರಂತೂ ತಮ್ಮನ್ನು ಮಂತ್ರಿಮಂಡಲದಿಂದ ತೆಗೆಯಲು ಸಾಧ್ಯವೇ ಇಲ್ಲ ಎಂದು ಹೇಳಿಕೊಂಡು ತಿರುಗಾಡುತ್ತಿದ್ದರು. ಅಯ್ಯರ್ ಮತ್ತು ರಾಯ್‌ರ ಮಾತುಗಳೇ ಈ ಹಗರಣದ ಜವಾಬ್ದಾರಿ ಪ್ರಧಾನಮಂತ್ರಿಗಳ ಮೇಲೂ ಇವೆ ಎಂಬುದನ್ನೂ ಸೂಚಿಸುತ್ತದೆ.

ಆದರೆ ಜವಾಬ್ದಾರಿ ಹೊತ್ತು ಹೊರಹೋದವರು ಎ.ಕೆ. ಆಂಟನಿ. ಪ್ರಧಾನ ಮಂತ್ರಿ ಕಛೇರಿಯಲ್ಲಿನ ರಾಜ್ಯ ಮಂತ್ರಿ ಭುವನೇಶ್ ಚತುರ್ವೇದಿ ಸಂಸತ್ತಿನಲ್ಲಿ ಪ್ರಶ್ನೆಗೆ ಉತ್ತರ

ಕಾಂಗ್ರೆಸ್ ಮುಖಂಡರೆಂದರೇ ಭ್ರಷ್ಟಾಚಾರ ಎಂಬ ಮಾತಿನಲ್ಲಿ ಈಗ ಯಾರಿಗೂ ಸಂಶಯವುಳಿಯಬೇಕಾಗಿಲ್ಲ.

ಕೊಡುತ್ತಾ ಕಲ್ಪನಾಥ್ ರಾಯ್ ರವರಲ್ಲಿ ಏನೂ ತಪ್ಪು ಕಾಣಲಿಲ್ಲ, ಆದರೆ ಆಂಟನಿ ಬರಲಿದ್ದ ಸಕ್ಕರೆ ಅಭಾವದ ಬಗ್ಗೆ ಪ್ರಧಾನಮಂತ್ರಿಗಳಿಗೆ ಎಚ್ಚರ ಕೊಡಲಿಲ್ಲ ಎಂದು ಹೇಳಿದರು. ಆದರೆ ಆಂಟನಿ ತಮ್ಮ ಆತ್ಮಸಾಕ್ಷಿ ಶುದ್ಧವಾಗಿದೆ, ಪ್ರಧಾನ ಮಂತ್ರಿಗಳ ಕಚೇರಿಗೆ ಸಕ್ಕರೆ ಅಭಾವ ಬರಬಹುದೆಂದು ಬಹಳ ಸಲ ಕಾಗದ ಬರೆದಿದ್ದೆ ಎಂದರು. ಹೀಗಿರುವಾಗ ಆಂಟನಿ ಮಂತ್ರಿಮಂಡಲದಲ್ಲಿ ಮುಂದುವರಿಯುವುದು ಹೇಗೆ ಸಾಧ್ಯವಿತ್ತು?

ಅತ್ತ ಜ್ಞಾನಪ್ರಕಾಶ ಸಮಿತಿ ಬೆಳಕಿಗೆ ತಂದ ಅಂಶಗಳ ವ್ಯಾಪ್ತಿಯ ಬಗ್ಗೆ ದೇಶ ಆತಂಕಪಡುತ್ತಿದ್ದಾಗಲೇ ಶೇರು ಹಗರಣ ಕುರಿತಾದ "ಪರಿಷ್ಕೃತ ಕ್ರಿಯಾ ವರದಿ" ಎಂಬ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಹಿಂದಿನ ಅಧಿವೇಶನದಲ್ಲಿ ಜೆ.ಪಿ.ಸಿ. ವರದಿಯ ದೋಷಾರೋಪಣೆ ಹೊತ್ತ ಮಂತ್ರಿಗಳು, ಅಧಿಕಾರಿಗಳು, ವಿದೇಶೀ ಬ್ಯಾಂಕುಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ವಿರೋಧ ಪಕ್ಷಗಳ ಒತ್ತಾಯವನ್ನು ನಿರ್ಲಕ್ಷಿಸಲು ಪ್ರಯತ್ನಿಸಿದಾಗ ಸರಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಲು ವಿರೋಧ ಪಕ್ಷಗಳು ಸಂಸತ್ತಿನ ಕಲಾಪಗಳು ನಡೆಯದಂತೆ ಮಾಡಿದವು. ಸಂಸತನ್ನು ಬಹಿಷ್ಕರಿಸಿದವು. ಕೊನೆಗೆ ಲೋಕಸಭಾಧ್ಯಕ್ಷರ ಮುತುವರ್ಜಿಯಿಂದ ಸರಕಾರ ಒಂದು ಪರಿಷ್ಕೃತ ಕ್ರಿಯಾವರದಿ ಮಂಡಿಸುವುದಾಗಿ ಹೇಳಿದ ಮೇಲೆ ವಿರೋಧ ಪಕ್ಷಗಳು ತಮ್ಮ ಬಹಿಷ್ಕಾರ ನಿಲ್ಲಿಸಿದವು. ಅಂದರೆ ಈ ಸರಕಾರ ಶೇರು ಹಗರಣದಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವುದಾಗಿ ಒಪ್ಪಿಕೊಂಡುದರ ಸಂಕೇತವಾಗಿತ್ತದು.

ಆದರೆ ***ಕಾಂಗ್ರೆಸ್ ಸರಕಾರದ ಯಾವುದೇ ಮಾತು ನಂಬಲರ್ಹವಲ್ಲ ಎಂದು ಚಳಿಗಾಲದ ಅಧಿವೇಶನದಲ್ಲಿ ಮತ್ತೊಮ್ಮೆ ಸಾಬೀತಾಯಿತು. ಸಾರ್ವಜನಿಕ ಜವಾಬ್ದಾರಿಯ ಪ್ರಜ್ಞೆಯಿರುವ ಯಾವುದೇ ಸರಕಾರ ಇಷ್ಟು ನಾಚಿಕೆಗೇಡಿಯಾಗಿ ವರ್ತಿಸಲು ಸಾಧ್ಯವಿಲ್ಲ, ಕಾಂಗ್ರೆನಿಂದ ಇಂತಹ ಹೊಣೆಗಾರಿಕೆಯನ್ನು ಬಹುಶಃ ನಿರೀಕ್ಷಿಸುವಂತೆಯೇ ಇಲ್ಲ.***

ಶೇರು ಹಗರಣ ಮೊದಲು ಬೆಳಕಿಗೆ ಬಂದಾಗ ನರಸಿಂಹರಾಯರು ಏನು ಹೇಳಿದ್ದರೆಂದು ಅವರಿಗೆ ನೆನಪಿಸಬೇಕಾಗಿದೆ. ತಪ್ಪಿತಸ್ಥರೆಂದು ಕಂಡು ಬಂದ ಯಾರನ್ನೂ ಬಿಡುವುದಿಲ್ಲ ಎಂದು ಸಂಸತ್ತಿನ ಹೊರಗೂ, ಒಳಗೂ ಅವರು ಸಾರಿದ್ದರು. ಹಿಂದಿನ ಕಾಂಗ್ರೆ ಮುಖಂಡ ರಾಜೀವ್ ಗಾಂಧಿಯವರ ಹೆಸರು ಬೋಫೋರ್ಸ್ ಹಗರಣದಲ್ಲಿ ಕಳಂಕಿತಗೊಂಡಿದ್ದ ಆಗಿನ ಹಿನ್ನೆಲೆಯಲ್ಲಿ ಜನ ಹೊಸ ಪ್ರಧಾನಿಗಳ ಈ ಹೇಳಿಕೆಯನ್ನು ಮೆಚ್ಚಿಕೊಂಡಿದ್ದರು. ಭಾರತದಲ್ಲೂ ಇನ್ನು ಮುಂದೆ ಬೇರೆ ಕೆಲವು ದೇಶಗಳಲ್ಲಿ ನಡೆದಿರುವಂತೆ ಹಗರಣದಲ್ಲಿ ಸಿಲುಕಿಕೊಂಡ ಮಂತ್ರಿಗಳು, ಉಚ್ಚ ಪದವಿಗಳಲ್ಲಿನ ಜನರು ಅಧಿಕಾರ ಬಿಡುವಂತಹ ವ್ಯವಸ್ಥೆ ಬರಬಹುದು ಎಂದು ಭಾವಿಸಿದರು. ಆದರೆ ಈ ನಿರೀಕ್ಷೆ ನುಚ್ಚು ನೂರಾಗಿದೆ.

ಭ್ರಷ್ಟಾಚಾರದ ಪಿಡುಗು
ಅತ್ಯುಚ್ಚ ವಲಯಗಳನ್ನು ತಲುಪಿದೆಯೆಂಬುದು
ಜನಗಳಿಗೆ ಅನಿಸಿದ್ದು ಬೋಫೋರ್ಸ್ ಹಗರಣದ
ಸುದ್ದಿ ಬಯಲಾದಾಗ. ಆದರೂ ಇಷ್ಟೊಂದು ಹಗರ
ಣಗಳಿಂದ ಮುತ್ತಿಕೊಂಡ ಸರಕಾರ ನೀಡಿರುವ
ಶ್ರೇಯಸ್ಸು ನರಸಿಂಹರಾಯರಿಗೆ ಸಲ್ಲಬೇಕು!

ಭಾರತದಲ್ಲಿ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾ[ರ] ಬೇರು ಬಿಟ್ಟಿದೆ. ಜನ ಇವನ್ನು ತಮ್ಮ ಕಣ್ಣ ಮುಂದೆಯೇ ನೋಡುತ್ತಿದ್ದಾರೆ. ಒಂದು ರೇಷನ್ ಕಾರ್ಡ್ ಪಡೆಯಲಾಗಲೀ, ನೀರು ಪೂರೈಕೆ ಸಿಗಲಾಗಲೀ, ಇನ್ನಾವುದೇ ಕೆಲಸ ಆಗಬೇಕಾದರೂ ಸಂಬಂಧ ಪಟ್ಟ ಅಧಿಕಾರಿಗಳ ಕೈಬೆಚ್ಚ[ಗೆ] ಮಾಡದೆ ಸಾಧ್ಯವಿಲ್ಲ ಎಂಬುದು ಜನಗಳ ಸ್ವಂತ ಅನುಭವ. ಅಧಿಕಾರಿಗಳ ಬಗ್ಗೆ ಜನಗಳಿಗೆ ಇರುವ ತಿರಸ್ಕಾರದಿಂದಲೇ ಇದು ಎಂತಹ ದೊಡ್ಡ ಸಮಸ್ಯೆ ಎಂದು ಅರಿತುಕೊಳ್ಳಬಹುದು. ಯಾವುದೇ ಅಧಿಕಾರಿ ಭ್ರಷ್ಟ ಹೌದೇ ಅಲ್ಲವೇ ಎಂಬುದಕ್ಕೆ ಪುರಾವೇ ಕೇಳುವ ಬದಲು ಆತ ಪ್ರಮಾಣಿಕನೇ ಎಂದು ಪುರಾವೆ ಕೇಳುವ ಸ್ಥಿತಿ ಒದಗಿದೆ.

ಆದರೆ ಈ ***ಭ್ರಷ್ಟಾಚಾರದ ಪಿಡುಗು ಅತ್ಯುಚ್ಚ ವಲಯಗಳನ್ನು ತಲುಪಿದೆಯೆಂಬುದು ಜನಗಳಿಗೆ ಅನಿಸಿದ್ದು ಬೋಫೋರ್ಸ್ ಹಗರಣದ ಸುದ್ದಿ ಬಯಲಾದಾಗ. ಆದರೂ ಇಷ್ಟೊಂದು ಹಗರಣಗಳಿಂದ ಮುತ್ತಿಕೊಂಡ ಸರಕಾರ ನೀಡಿರುವ ಶ್ರೇಯಸ್ಸು ನರಸಿಂಹರಾಯರಿಗೆ ಸಲ್ಲಬೇಕು!***

ಹೀಗಿರುವಾಗ ತಮ್ಮ ಮಂತ್ರಿಮಂಡಲದ ಸಹಯೋಗಿಗಳನ್ನು ಎದುರಿಸುವ ಮುಖವೂ ಅವರಿಗಿಲ್ಲವಾಗಿದೆ. ಡಿಸೆಂಬರ್ ೧೯ ರಂದು ನಡೆಯಬೇಕಾಗಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಅವರು ರದ್ದು ಮಾಡಿದರು.

ಕಾಂಗ್ರೆಸ್(ಐ) ಜನರ ಸೇವೆಗೆ ಬದ್ಧವಾಗಿಲ್ಲ ಎಂಬುದು ಸಂಸತ್ತಿನಲ್ಲಿ ನಡೆದ ಚರ್ಚೆಯಿಂದಲೇ ಗೊತ್ತಾಗುತ್ತದೆ. ಕಾಂ[ಗ್ರೆಸ್] ಸದಸ್ಯರು ಅಸಮರ್ಥನೀಯವಾದುದನ್ನು ಸಮರ್ಥಿಸಿಕೊಳ್ಳಲು ಸ್ಪರ್ಧೆಗಿಳಿದಂತಿತ್ತು! ***ಮೇಲಿಂದ ಕೆಳಗೆ ಭ್ರಷ್ಟ ಜನಗಳು ಕಾಂಗ್ರೆಸನ್ನು ನಡೆಸುತ್ತಿರುವಂತಿದೆ. ಈ ಬಗ್ಗೆ ನಾಚಿ[ಕೆ] ಪಶ್ಚಾತ್ತಾಪದ ಭಾವನೆಯೂ ಅವರಲ್ಲಿ ಇದ್ದಂತಿಲ್ಲ,***

ಫೆಬ್ರುವರಿ ಚುನಾವಣೆಗಳನ್ನು ಕಾಂಗ್ರೆಸ್ ಹೇಗೆ ಎದುರಿಸ ಬಯಸುತ್ತಿದೆ? ಕೆಲವು ದಿನಗಳ ಹಿಂದೆ-ಜನ ಉಣ್ಣಿಸಿದ ಸೋಲಿನಿಂದ ಪಾಠ ಕಲಿಯಲು ಅವರು ಸಿದ್ಧರಿದ್ದಂತಿಲ್ಲ. ಆಂಧ್ರ, ಕರ್ನಾಟಕಗಳಂತೆ ಫೆಬ್ರವರಿಯಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳ ಜನರೂ ಕಾಂಗ್ರೆಸ್(ಐ)ನ್ನು ತ...

ಇತ್ತೀಚೆಗೆ 3ನೇ ವಿಶ್ವ ಪುರಾತತ್ವ ಸಮ್ಮೇಳನ ಭಾರತದ ರಾಜಧಾನಿ ನವದೆಹಲಿಯಲ್ಲಿ ನಡೆಯಿತು. ಈ ಸಮ್ಮೇಳನದ ಸಂಘಟಕರಲ್ಲಿದ್ದ ಸಂಘ ಪರಿವಾರದ ಒಲವಿನ ಪುರಾತತ್ವ ಶಾಸ್ತ್ರಜ್ಞರ ಆಟ ಬಯಲಾದ ಬಗ್ಗೆ ಒಂದು ವರದಿ

ಈ ಬಾರಿ ಪುರಾತತ್ವ ರಂಗದಲ್ಲಿ ಸಂಘ ಪರಿವಾರದ ಮೋಸ ಬಯಲಾಯಿತು

(ಐ.ಎನ್.ಎನ್.)

ಪುರಾತತ್ವ ಶಾಸ್ತ್ರ ಒಂದು ವಿಜ್ಞಾನ. ಆದರೆ ಇತರ ಸಮಾಜಶಾಸ್ತ್ರಗಳಂತೆ ರಾಜಕೀಯ ಪಕ್ಷಪಾತ ಒಳನುಗ್ಗಲು ಅವಕಾಶವೂ ಅದರಲ್ಲಿದೆ. ಚಾರಿತ್ರಿಕ ಕಾರಣಗಳಿಂದಾಗಿ ಭಾರತದ ಪುರಾತತ್ವ ಶಾಸ್ತ್ರಜ್ಞರು ಪುನರುತ್ಥಾನವಾದಿ ಮತ್ತು ಸಂಕುಚಿತ ಪ್ರವೃತ್ತಿಗಳ ಪ್ರಭಾವಕ್ಕೂ ಒಳಗಾಗಿದ್ದರಿಂದ ಆರ್.ಎಸ್.ಎಸ್.ನ ಸೈದ್ಧಾಂತಿಕ ಹಾಗೂ ರಾಜಕೀಯ ಪ್ರಭಾವ ಹಲವರ ಮೇಲಿದೆ.

ಅಯೋಧ್ಯೆಯಲ್ಲಿ ಮುಸ್ಲಿಂ ಪ್ರಾರ್ಥನಾ ಸ್ಥಳದ ಧ್ವಂಸ, ಅದರ ಮೊದಲಿನ ಸಂಘಪರಿವಾರದ ಅಪಪ್ರಚಾರದ ವೇಳೆ ಭಾರತೀಯ ಪುರಾತತ್ವ ಶಾಸ್ತ್ರದ ಬಳಕೆ ಅತ್ಯಂತ ಕರಾಳರೂಪದಲ್ಲಿ ಎದುರಿಗೆ ಬಂತು. ಆದರೆ ನವದೆಹಲಿಯಲ್ಲಿ ನಡೆದ ೩ನೇ ವಿಶ್ವ ಪುರಾತತ್ವ ಶಾಸ್ತ್ರ ಸಮ್ಮೇಳನದಲ್ಲಿ ಸಂಘಪರಿವಾರ ನಿರ್ಣಾಯಕ ಸೋಲು ಅನುಭವಿಸಬೇಕಾಗಿ ಬಂತು. ಕೆಲವು ಪ್ರಗತಿಪರ ಇತಿಹಾಸಕಾರರ ಹಾಗೂ ಪುರಾತತ್ವ ಶಾಸ್ತ್ರಜ್ಞರ ಒಂದು ಗುಂಪಿನ ಅವಿರತ ಶ್ರಮದಿಂದ ಇದು ಸಾಧ್ಯವಾಯಿತು. ಇದರಿಂದ ಭಾರತದಲ್ಲಿ ಪುರಾತತ್ವ ಶಾಸ್ತ್ರದಲ್ಲಿ ಒಂದು ಮಹತ್ವದ ಘಟ್ಟ ತಲುಪಿದಂತಾಗಿದೆ ಎಂದು ಹೇಳಲಾಗುತ್ತಿದೆ.

ಚರ್ಚೆ ನಡೆಯದಂತೆ ಸಂಘಪರಿವಾರದ ಶತಪ್ರಯತ್ನ

ಅಯೋಧ್ಯೆಯ ಬಗ್ಗೆ ಸಂಘ ಪರಿವಾರದ ರಾಜಕೀಯ ಪ್ರಚಾರದ ಕೇಳಿಬಂದ ಎರಡು ಪುರಾತತ್ವ ಶಾಸ್ತ್ರಜ್ಞರ ಹೆಸರುಗಳು ಓದುಗರಿಗೆ ನೆನಪಿರಬಹುದು- ಬಿ.ಬಿ. ಲಾಲ್ ಮತ್ತು ಎಸ್.ಪಿ. ಗುಪ್ತಾ. ಇವರಿಬ್ಬರೂ 3ನೇ ವಿಶ್ವ ಪುರಾತತ್ವ ಸಮ್ಮೇಳನದ ಭಾರತೀಯ ಸಂಘಟನಾ ಸಮಿತಿಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು. ಬಿ.ಬಿ. ಲಾಲ್ ಸಂಘಟನಾ ಸಮಿತಿಯ ಅಧ್ಯಕ್ಷರಾಗಿದ್ದರೆ, ಎಸ್.ಪಿ. ಗುಪ್ತಾ ಸಂಪರ್ಕ ಕಾರ್ಯದರ್ಶಿಯೆನಿಸಿಕೊಂಡಿದ್ದರು. ಈ ಗುಪ್ತಾ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯಿದ್ದಲ್ಲಿ ರಾಮ ದೇವಸ್ಥಾನ ಇತ್ತೆಂದು ಸಂಘಪರಿವಾರದ ವಾದಕ್ಕೆ ಪುರಾತತ್ವಶಾಸ್ತ್ರದ ಆಧಾರವಿದೆಯೆಂದು ಹೇಳಿಕೊಂಡು ತಿರುಗುತ್ತಿದ್ದವರು. ಬಿ.ಬಿ. ಲಾಲ್ ಹಾಗೆ ಹೇಳದೆ ಹಿನ್ನೆಲೆಯಲ್ಲಿ ಮೌನವಾಗಿದ್ದುಕೊಂಡು ಗುಪ್ತಾರಿಗೆ ಪುರಾತತ್ವ "ಪುರಾವೆ"ಗಳನ್ನು ಒದಗಿಸಿದ್ದವರು. ಎಸ್.ಪಿ. ಗುಪ್ತಾ ಸಂಘಪರಿವಾರದ ಪ್ರಚಾರದ ಬಂದೂಕವಾಗಿದ್ದರೆ ಲಾಲ್ ಅದಕ್ಕೆ ಮದ್ದುಗುಂಡು ತುಂಬಿದವರು. 3ನೇ ವಿಶ್ವಸಮ್ಮೇಳನದಲ್ಲಿ ಈ ಇಬ್ಬರು ಪುರಾತತ್ವ ಶಾಸ್ತ್ರಜ್ಞರ ನಡತೆ ಹಾಗೂ ನೈತಿಕತೆ ಬಗ್ಗೆ ಚರ್ಚೆಯಾಗಬೇಕು ಎಂಬ ಬಗ್ಗೆ ನೋಟಿಸನ್ನು ಈ ವರ್ಷದ ಆರಂಭದಲ್ಲೇ ಆರ್.ಎಸ್. ಶರ್ಮಾ, ಇರ್ಫಾನ್ ಹಬೀಬ್ ಹಾಗೂ ಕೆ.ಎಲ್. ಶ್ರೀಮಾಲಿ ಗಳಂತಹ ಪ್ರಸಿದ್ಧ ಇತಿಹಾಸಕಾರರು ಕೊಟ್ಟಿದ್ದರು. ತಮ್ಮ ರಾಜಕೀಯ ಪಾತ್ರ ಬಯಲಾಗುತ್ತದೆಯೆಂಬ ಭಯದಿಂದ ಲಾಲ್ ಹಾಗೂ ಗುಪ್ತಾ ೩ನೇ ವಿಶ್ವ ಸಮ್ಮೇಳನದಲ್ಲಿ ಅಯೋಧ್ಯೆ ವಿಷಯ ಚರ್ಚೆಗೆ ಬರದಂತೆ ತಡೆಯಲು ಶತಪ್ರಯತ್ನ ನಡೆಸಿದರು.

ಮಾನವ ಸಂಪನ್ಮೂಲ ಮಂತ್ರಿ ಅರ್ಜುನ್‌ಸಿಂಗ್‌ರವರು ಕರೆದ ನವಂಬರ್ 6ರಂದು ಒಂದು ಸಭೆಯಲ್ಲಿ ಅಯೋಧ್ಯಾ ವಿಷಯವನ್ನು ಚರ್ಚೆಯಿಂದ ಹೊರಗಿಡಲು ಸರ್ವಸಮ್ಮತ ಒಪ್ಪಂದವಾಗಿದೆ ಎಂದು ಲಾಲ್ ಹೇಳಿದರು. ಇದು ಸುಳ್ಳೆಂದು ಬೇಗನೇ ತಿಳಿಯಿತು. ಏಕೆಂದರೆ ಆ ಸಭೆಯಲ್ಲಿ ಭಾಗವಹಿಸಿದ್ದ ಇನ್ನೊಬ್ಬ ಇತಿಹಾಸಕಾರ ಇರ್ಫಾನ್ ಹಬೀಬ್ ಚಾರಿತ್ರಿಕ ಕಟ್ಟಡಗಳನ್ನು ರಕ್ಷಿಸುವ, ಧಾರ್ಮಿಕ ಹಾಗೂ ಜನಾಂಗಿಯ ಸಂಕುಚಿತವಾದಕ್ಕೆ ಬಲಿಯಾಗದೆ ತನ್ನ ವೈಜ್ಞಾನಿಕ ಸಮಗ್ರತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಪುರಾತತ್ವಶಾಸ್ತ್ರಜ್ಞನ ಮೇಲಿದೆಯೇ ಇಲ್ಲವೇ ಎಂಬುದನ್ನು ಚರ್ಚೆಯಿಂದ ಹೊರತು ಪಡಿಸಬಹುದೇ ಎಂದು ಲಾಲ್‌ರನ್ನು ನೇರವಾಗಿ ಕೇಳಿದ್ದರು. ಆ ಸಭೆಯಲ್ಲಿ ಭಾಗವಹಿಸಿದ್ದ ಇತರರೂ ಇರ್ಫಾನ್ ಹಬೀಬ್‌ರವರ ತರ್ಕವನ್ನು ಸ್ವೀಕರಿಸಿ ವಿಶ್ವ ಸಮ್ಮೇಳನದಲ್ಲಿ ಶೈಕ್ಷಣಿಕ ಚರ್ಚೆಯ ಮೇಲೆ ಮನಬಂದಂತೆ ಮಿತಿ ಹಾಕಲು ಸಾಧ್ಯವಿಲ್ಲ ಎಂದರು.

ಮತ್ತೊಂದು ಹತಾಶ ಪ್ರಯತ್ನ

ಆಗ ಲಾಲ್ ಮತ್ತು ಗುಪ್ತಾ ಅಯೋಧ್ಯಾ ಚರ್ಚೆಯಾಗದಂತೆ ನೋಡಿಕೊಳ್ಳಲು ಇನ್ನೊಂದು ಉಪಾಯ ಕಂಡುಕೊಂಡರು. ವಿಶ್ವ ಪುರಾತತ್ವ ಸಮ್ಮೇಳನದ ಸಾರ್ವತ್ರಿಕ ಅಧ್ಯಕ್ಷ ಆಸ್ಟ್ರೇಲಿಯಾದ ಪುರಾತತ್ವಜ್ಞ ಜಾಕ್ ಗೋಲ್ಸನ್ ಮೇಲೆ ಒತ್ತಡ ಹಾಕಿ ಅಯೋಧ್ಯೆಯ ಬಗ್ಗೆ ಚರ್ಚೆಯನ್ನು ನಿಷೇಧಿಸುವ ಒಂದು ಸುತ್ತೋಲೆಯನ್ನು ಎಲ್ಲಾ ಪ್ರತಿನಿಧಿಗಳಿಗೆ ಕಳಿಸುವಂತೆ ಮಾಡಿದರು. ಅಯೋಧ್ಯೆಯಂತಹ ಒಂದು ಭಾವೋದ್ರೇಕದ, ಕೋಮು ದೃಷ್ಟಿಯಿಂದ ಸೂಕ್ಷ್ಮವಾದ ಪ್ರಶ್ನೆಯನ್ನು ಎತ್ತುವುದರೊಂದಿಗೆ ಉಂಟಾಗುವ ಪರಿಣಾಮಗಳನ್ನು ಎದುರಿಸಲು ವಿಶ್ವಪುರಾತತ್ವ ಸಮ್ಮೇಳನದ ಕಾರ್ಯಕಾರಿ ಸಮಿತಿಗೆ ಸಾಧ್ಯವಾಗಲಿಕ್ಕಿಲ್ಲ ಎಂಬುದು ಆ ಸುತ್ತೋಲೆಯಲ್ಲಿ ನೀಡಿದ ಕಾರಣ.

ಶೈಕ್ಷಣಿಕ ಚರ್ಚೆಯ ಮೇಲಿನ ಈ ನಿರ್ಬಂಧವನ್ನು ಬಲವಾಗಿ ವಿರೋಧಿಸಿ ವಿಶೇಷಜ್ಞರ ಒಂದು ಗುಂಪು ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದ ಅಧ್ಯಯನ ಸಂಘ (ಎ.ಎಸ್.ಹೆಚ್.ಎ.) ಎಂಬ ಹೊಸ ಸಂಸ್ಥೆಯೊಂದನ್ನು ರಚಿಸಿಕೊಂಡು ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು; ಸರಕಾರ ಈ ರೀತಿ ಚರ್ಚೆಯ ಮೇಲೆ ನಿರ್ಬಂಧ ಹಾಕಿದೆಯೇ ಎಂಬ ಬಗ್ಗೆ ಸ್ಪಷ್ಟನೆಯನ್ನೂ ಕೇಳಿದರು. ಈ ನಿರ್ಣಯ ಸಂಪೂರ್ಣವಾಗಿ ವಿಶ್ವ ಪುರಾತತ್ವ ಸಮ್ಮೇಳನದ ಕಾರ್ಯಕಾರಿ ಸಮಿತಿಯ (ಗುಪ್ತಾ ಮತ್ತು ಲಾಲ್ ಈ ಸಮಿತಿಯ ಸದಸ್ಯರು) ನಿರ್ಣಯವಷ್ಟೇ ಎಂದು ಅರ್ಜುನ್ ಸಿಂಗ್ ಸ್ಪಷ್ಟನೆ ನೀಡಿದರು. ಇಂತಹ ನಿರ್ಬಂಧ ಸೂಕ್ತವಲ್ಲ ಎಂದು ವೈಯುಕ್ತಿಕವಾಗಿ ತಾನು ಭಾವಿಸಿದರೂ ಸರಕಾರ ಇದರಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದೂ ಅವರು ಹೇಳಿದರು.

ಆದರೆ ಪ್ರಗತಿಪರ ಇತಿಹಾಸಕಾರರ ಮೇಲೆ ನಿರ್ಬಂಧ ಹಾಕಿಯೇ ತೀರಬೇಕೆಂದು ನಿರ್ಧರಿಸಿದ್ದ ಸಂಘಪರಿವಾರ ಈಗಲೂ ತನ್ನ ಆಟ ನಿಲ್ಲಿಸಲು ಸಿದ್ಧವಿರಲಿಲ್ಲ. ದಿಲ್ಲಿಯ ... ಮುಖ್ಯಮಂತ್ರಿ ಈ ಸಮ್ಮೇಳನದ ಪ್ರತಿನಿಧಿಗಳಿಗೊಂದು ಉಪಹಾರ ಸಮಾರಂಭ ಏರ್ಪಡಿಸಿದರು. ಅಲ್ಲಿ ಬಾಬ್ರಿ ಮಸೀದಿಯಿದ್ದಲ್ಲಿ ದೇವಸ್ಥಾನವಿತ್ತು ಎಂಬುದಕ್ಕೆ ಸುಳ್ಳು ಪುರಾತತ್ವ "ಪುರಾವೆ" ನೀಡಿದ ಲೇಖನವಿದ್ದ ಆರ್.ಎಸ್.ಎಸ್. ಮುಖವಾಣಿ 'ಆರ್ಗನೈಸರ್'ನ ಪ್ರತಿಗಳನ್ನು ಹಂಚಲಾಯಿತು. ಮರುದಿನ ಆರ್.ಎಸ್.ಎಸ್. -ಪ್ರೇರಿತ "ಇತಿಹಾಸಕಾರ ವೇದಿಕೆ" ಒಂದು ಪತ್ರಿಕಾ ಸಮ್ಮೇಳನ ನಡೆಸಿತು. ಅಯೋಧ್ಯೆಯ ಬಗ್ಗೆ ಚರ್ಚೆ ನಡೆಸಲು ಸರಕಾರ ಅತಾರ್ಕಿಕ ಮಿತಿ ಹಾಕುತ್ತದೆ ಎಂದು ಅಲ್ಲಿ ಅಪಾದಿಸಲಾಯಿತು.

ಈ ಸುಳ್ಳು ಮಾಹಿತಿ ಪ್ರಚಾರ ಕಂಡು ಮಾನವ ಸಂಪನ್ಮೂಲ ಸಚಿವಾಲಯ ಲಾಲ್‌ರನ್ನು ಕರೆದು ನಿಜ ಸಂಗತಿ ತಿಳಿಸಿ ಎಂದು ಒತ್ತಾಯ ಮಾಡಿತು. ಫಲಿತಾಂಶವೆಂದರೆ 3ನೇ ವಿಶ್ವ ಪುರಾತತ್ವ ಸಮ್ಮೇಳನದಲ್ಲಿ ಅಯೋಧ್ಯಾ ವಿಷಯದ ಬಗ್ಗೆ ಚರ್ಚೆ ನಡೆಸಬಾರದೆಂದು ಸರಕಾರ ಯಾವುದೇ ಒತ್ತಡ ಹೇರಿದೆ ಎಂಬ ಆಪಾದನೆ ನಿರಾಧಾರವಾದದ್ದು ಎಂದು ಲಾಲ್ ಹೇಳಿಕೆ ನೀಡಲೇಬೇಕಾಗಿ ಬಂತು ಅವರಿಗೆ ಇದೊಂದು ದೊಡ್ಡ ಅವಮಾನವಾಗಿತ್ತು.



ಕಾಂಗ್ರೆಸ್(ಐ) ಜನರ ಸೇವೆಗೆ ಬದ್ಧವಾಗಿಲ್ಲ ಎಂಬುದು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸ್ಪಷ್ಟವಾಗಿದೆ. ಆ ಅಧಿವೇಶನ ಮುಂದೂಡಲ್ಪಟ್ಟಿದೆ. ಇನ್ನು ಮುಂದೆ ಈ ಜನ-ವಿರೋಧಿ ಭ್ರಷ್ಟ ಸರಕಾರದ ವಿರುದ್ಧ ಸಮರ ಬೀದಿಗಳಲ್ಲಿ ಮುಂದುವರಿಯುತ್ತದೆ. ಆಂಧ್ರ, ಕರ್ನಾಟಕ ಸಿಕ್ಕಿಂ, ಸ್ವಲ್ಪ ಮಟ್ಟಿಗೆ ಗೋವಾದ ಜನಗಳು ಕಾಂಗ್ರೆಗೆ ಶಿಕ್ಷೆ ನೀಡಿದ್ದಾರೆ. ಫೆಬ್ರವರಿ ಚುನಾವಣೆಗಳ ಫಲಿತಾಂಶವೂ ಭಿನ್ನವಾಗಲಿಕ್ಕಿಲ್ಲ ಎನ್ನುತ್ತಾರೆ ಕಾಂ. ಹರ್‌ಕಿಷನ್ ಸಿಂಗ್ ಸುರ್ಜೀತ್.

ತೆಗೆದುಕೊಳ್ಳುತ್ತಾರೆ.

ಚಳಿಗಾಲದ ಅಧಿವೇಶನ ಮುಂದೂಡಲ್ಪಟ್ಟಿದೆ. ಆದರೊಂದಿಗೆ ಈಗ ...ವನ್ನು ಬೀದಿಗಳಲ್ಲಿ ಮುಂದುವರಿಸಬೇಕಾಗಿದೆ. ನರಸಿಂಹರಾವ್‌ಗಳು, ...ಶಂಕರ್ ಅಯ್ಯರ್ ಗಳು ಸಂಸತ್ತಿನಲ್ಲಿ ತಪ್ಪಿತಸ್ಥರನ್ನು ರಕ್ಷಿಸಲು ನೀಡಿದ ...ಗಳನ್ನು ಜನ ಒಪ್ಪುವುದಿಲ್ಲ. ಹೇಗೆ ಪ್ರಜಾಪ್ರಭುತ್ವ ಮೌಲ್ಯಗಳು ಕಳೆಗುಂದು ... ಮಂತ್ರಿಗಳ ಹೊಣೆಗೇಡಿತನ ಹೆಚ್ಚುತ್ತಿದೆ, ಇಡೀ ವ್ಯವಸ್ಥೆಯೇ ತಿರಸ್ಕಾರಕ್ಕೊ ...ಸುತ್ತಿದೆ ಎಂಬುದು ಈ ಪ್ರಕ್ಷೋಭೆಯ ಕೇಂದ್ರ ಬಿಂದುವಾಗಲಿದೆ. ...ಸ್‌ನಲ್ಲಿದ್ದು ಈಗಲೂ ಸ್ವಾತಂತ್ರ್ಯ ಹೋರಾಟದ ಆದರ್ಶಗಳಿಗೆ ಬದ್ಧರಾಗಿರುವ ... ಮಂದಿ ಆ ಪಕ್ಷವನ್ನು ಕೆಟ್ಟ ರೀತಿಯಲ್ಲಿ ನಡೆಸುತ್ತಿರುವವ ದೂರ ...ರುಬೇಕಾದಂತಹ ಪರಿಸ್ಥಿತಿ ಬರುತ್ತಿದೆ.

ಕೊನೆಯದಾಗಿ ಆಳುವವರು ಎಂತವರು, ಏನಾಗಿದ್ದಾರೆ ಎಂಬ ಬಗ್ಗೆ ತೀರ್ಪು ...ವವರು ಜನರೇ. ಆಂಧ್ರ, ಕರ್ನಾಟಕಗಳಲ್ಲಿ ಸ್ವಲ್ಪ ಮಟ್ಟಿಗೆ ಸಿಕ್ಕಿಂ, ...ವಾಗಳಲ್ಲೂ ಕಾಂಗ್ರೆಸ್ ಶಿಕ್ಷೆ ಅನುಭವಿಸಿತು. ಫೆಬ್ರವರಿ ಚುನಾವಣೆಗಳ ...ತಾಂಶವೂ ಭಿನ್ನವಾಗಲಿಕ್ಕಿಲ್ಲ.

ಈಗ ಸಂಘಪರಿವಾರದ ಮೋಸ ...ಲಾಯಿತು. ಈ ನಡುವೆ ಆರ್.ಎಸ್. ...ರ್ಮ ಹಾಗೂ ಇರ್ಫಾನ್ ಹಬೀಬ್ ...ತ್ವದಲ್ಲಿ ಪ್ರಗತಿಪರ ಇತಿಹಾಸಗಾ... ಗುಂಪೊಂದು ಸಮ್ಮೇಳನದ ಪ್ಲೀನರಿ ...ವೇಶನದಲ್ಲಿ ಚರ್ಚಿಸಲೆಂದು ಒಂದು ...ಯವನ್ನು ಅಧ್ಯಕ್ಷರಿಗೆ ಸಲ್ಲಿಸಿತು. ...ಲ್ಲಿ ಅಯೋಧ್ಯೆಯ ಬಗ್ಗೆ ಹೇಳದೆ ...ರ್ಣಯ "ಪುರಾತತ್ವ ಶಾಸ್ತ್ರದೊ... ಜನಾಂಗೀಯ, ಧಾರ್ಮಿಕ ಅಥವಾ ...ೀಯ ಸಂಕುಚಿತ ಹೇಳಿಕೆಗಳನ್ನು ...ವುದನ್ನು ಯಾವುದೇ ಕಾರ... ಒಪ್ಪಿಕೊಳ್ಳಬಾರದು" ಎಂದು ...ತು. "ಇಂತಹ ಸಂಕುಚಿತ ಹೇಳಿ...ನ್ನು ಸಮರ್ಥಿಸಿಕೊಳ್ಳಲು ಸುಳ್ಳು ...ವೆಗಳನ್ನು ಸೃಷ್ಟಿಸುವುದನ್ನು, ಚಾರಿ... ಕಟ್ಟಡಗಳನ್ನು ನಾಶಮಾಡುವು...' ಈ ನಿರ್ಣಯ ಖಂಡಿಸಿತು.

ಇಬ್ಬರು ಬ್ರಿಟಿಷ್ ಪುರಾತತ್ವ ಶಾಸ್ತ್ರ... ಪ್ರತ್ಯೇಕವಾಗಿ ಸಲ್ಲಿಸಿದ ಇನ್ನೊಂದು ...ಯವೂ ಈ ಮೇಲಿನ ನಿಲುವನ್ನು ...ರ್ಥಿಸಿತು. "ಯಾವುದೇ ಪುರಾತತ್ವ ... ಸಾಂಸ್ಕೃತಿಕ ಸ್ಮಾರಕಗಳನ್ನು ಸಂಕು... ಹಾಗೂ ಜನಾಂಗೀಯ ಕಾರಣಗ... ಧ್ವಂಸ ಮಾಡುವುದನ್ನು ಒಪ್ಪಲು ...ಲ್ಲ, ಅದನ್ನು ಯಾವುದೇ ಹಿಂಜ...ಲ್ಲದೆ ಖಂಡಿಸಬೇಕು" ಎಂದು ...ರ್ಣಯವೂ ಹೇಳಿತು.

ಪೂರ್ಣ ಪರಾಭವ

...ಸಮ್ಮೇಳನದ ಪ್ಲೀನಂ ಅಧಿವೇಶನ ಮುಂದೂಡಲಾಯಿತು. ಆದರೆ ...ಗೂ ಡಿಸೆಂಬರ್ 11ರಂದು ಅದನ್ನು ...ಜೇಕಾಗಿ ಬಂದಾಗ ಬಹು ಪ್ರತಿನಿಧಿಗಳು ಈ ಎರಡೂ ನಿರ್ಣಯಗಳಿಗೆ ಒಪ್ಪಿಗೆ ಸೂಚಿಸುವುದು ಕಂಡು ಬಂತು. ಈಗ ತಾವು ಪೂರ್ಣ ಮೂಲೆಗೊತ್ತಲ್ಪಟ್ಟಿರುವುದನ್ನು ಕಂಡ ಆರ್.ಎಸ್.ಎಸ್. ಪಡೆ ತನ್ನ ಅತೀ ಕೆಟ್ಟ ವಿಚ್ಛಿದ್ರಕಾರಿ ತಂತ್ರ ಬಳಸಲಾರಂಬಿಸಿತು. ಮೈಕ್ರೋಫೋನ್ ಸ್ಪೀಕರುಗಳ ವ್ಯವಸ್ಥೆಯನ್ನು ಕಡಿದು ಹಾಕಿ ಗೊಂದಲವುಂಟಾಗುವಂತೆ ಮಾಡಲಾಯಿತು. ಲಾಲ್‌ಸ್ವಲ್ಪ ಹೊತ್ತು ಈ ಗಲಭೆಯನ್ನು ನೋಡುತ್ತಾ ಕುಳಿತಿದ್ದು ನಂತರ ನಿರ್ಣಯಗಳು ಪಾಸಾಗಿವೆ ಎಂದು ಘೋಷಿಸುವ ಬದಲು ತನ್ನ ಮನಬಂದಂತೆ ಅಧಿವೇಶನವನ್ನು ಮುಂದೂಡಿದರು. ಒಂದು ವಾರದ ತೀವ್ರ ವಿವಾದಗಳ ನಂತರ 3ನೇ ವಿಶ್ವ ಪುರಾತತ್ವ ಸಮ್ಮೇಳನ ಇದ್ದಕ್ಕಿದ್ದಂತೆ, ಅತ್ಯಂತ ಕೆಟ್ಟ ರೀತಿಯಲ್ಲಿ ಕೊನೆಗೊಂಡಿತು.

ನಂತರ ವಿಶ್ವ ಪುರಾತತ್ವ ಸಮ್ಮೇಳನದ ಕಾರ್ಯಕಾರಿ ಸಮಿತಿ ಸಭೆ ಸೇರಿತು. ಲಾಲ್ ಅದರಲ್ಲಿ ಭಾಗವಹಿಸಲಿಲ್ಲ, ಗುಪ್ತಾ ಭಾಗವಹಿಸಿದ್ದರು. ಸಮಿತಿ ಲಾಲ್‌ರವರ ವರ್ತನೆ ಸರಿಯಾದ್ದಲ್ಲ ಎಂದು ದಾಖಲು ಮಾಡಿತು. ಮೇಲೆ ಹೇಳಿದ ಎರಡೂ ನಿರ್ಣಯಗಳಿಗೆ ಸ್ವೀಕೃತಿ ನೀಡಿತು. ಈ ನಿರ್ಣಯಗಳಿಗೆ ಅಸಮ್ಮತಿ ಸೂಚಿಸಿದ ಏಕೈಕ ಕಾರ್ಯಕಾರಿ ಸಮಿತಿ ಸದಸ್ಯ ಎಂದರೆ ಗುಪ್ತಾ ಮಾತ್ರ. ಪುರಾತತ್ವ ವೃತ್ತಿಯಲ್ಲಿ ಶೈಕ್ಷಣಿಕ ಶಿಸ್ತನ್ನು ಹಾಳುಗೆಡಹಿರುವ ಬಗ್ಗೆ, ಅದರಲ್ಲೂ ಅಯೋಧ್ಯಾ ವಿವಾದದ ಹಿನ್ನೆಲೆಯಲ್ಲಿ ಅದು ನಡೆದಿರುವ ಬಗ್ಗೆ ವಿಶೇಷ ಅಧ್ಯಯನವೊಂದನ್ನು ನಡೆಸಲೂ ಕಾರ್ಯಕಾರಿ ಸಮಿತಿ ನಿರ್ಧರಿಸಿತು. ಈ ರೀತಿ ಸಂಘ ಪರಿವಾರದ ಪರಾಭವ ಪೂರ್ಣಗೊಂಡಂತಾಯಿತು.

ಕೊನೆಗೂ ಸಕ್ಕರೆ ತಿಂದವರು ನೀರು ಕುಡಿದದ್ದು(?)

ಆಹಾರ ಮಂತ್ರಿ ಕಲ್ಪನಾಥ್ ರಾಯ್ ಕೊನೆಗೂ ರಾಜೀನಾಮೆ ನೀಡಿದರು ಸಕ್ಕರೆಯಂಥ ಅತ್ಯಾವಶ್ಯಕ ಆಹಾರ ಸಾಮಗ್ರಿ ದಿನ ನಿತ್ಯವೂ ಉಪಯೋಗಿಸಲ್ಪಡುವಂತಹದ್ದು ದಿನಬೆಳಗಾದರೆ ಜನ ಕುಡಿವ ಚಹ, ಕಾಫಿ, ಹಾಲುಗಳಲ್ಲಿ ಸಕ್ಕರೆ ಇರಲೇ ಬೇಕು. ಇಂತಹ ವಸ್ತು ಅಗತ್ಯ ಪ್ರಮಾಣದಲ್ಲಿ ಮಾರುಕಟ್ಟೆಗಳಲ್ಲಿ ಲಭ್ಯವಿರಬೇಕು. ಬೆಲೆಯೂ ಸಾಮಾನ್ಯ ಜನರ ಕೈಗೆ ನಿಲುಕುವಂತೆ ಇರಬೇಕು.

ಕಳೆದ ವರ್ಷ ಕೇಂದ್ರ ಸರ್ಕಾರದ ಉದಾರೀಕರಣದ ನೀತಿಯಿಂದಾಗಿ ಸಕ್ಕರೆ ಉತ್ಪಾದನೆಯು ಪ್ರಮಾಣದಲ್ಲಿ ಏರುಪೇರಾಯಿತು. ಸಕ್ಕರೆ ಅಭಾವ ತಲೆದೋರುತ್ತದೆಂಬ ಸೂಚನೆ ಸ್ಪಷ್ಟವಾಗಿ ದೊರೆತಿತ್ತು. ಕೇಂದ್ರ ಸರ್ಕಾರದ ನಾಗರೀಕ ಪೂರೈಕೆ ಮಂತ್ರಾಲಯ ಮತ್ತು ಇತರ ಕೆಲವರು ಇಂತಹ ಪರಿಸ್ಥಿತಿಯನ್ನು ಎದುರಿಸಲು ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದರು. ಆದರೆ ಅದೇ ಸಮಯದಲ್ಲಿ ಸಕ್ಕರೆ ಲಾಬಿಯೂ ಚುರುಕಾಗಿ ಒಮ್ಮೆಲೇ ಅಪಾರ ಲಾಭ ಗಳಿಸುವ ಪಿತೂರಿ ಹೂಡಿತು. ಇದಕ್ಕೆ ಕೇಂದ್ರ ಸರ್ಕಾರದ ಕುಮ್ಮಕ್ಕು ಇತ್ತೆಂಬುದಂತೂ ಈಗ ಸ್ಪಷ್ಟ.

ಸಕ್ಕರೆ ಆಮದು ಮಾಡಿಕೊಳ್ಳುವ ನಿರ್ಧಾರ ಕೈಗೊಳ್ಳಲಿಲ್ಲ. ಇದೇ ಸಂದರ್ಭ ನೋಡಿ ಕಾಳಸಂತೆಕೋರರು ಅಕ್ರಮ ದಾಸ್ತಾನು ಮಾಡಿದರು. ದೇಶದೊಳಗೆ ಸಕ್ಕರೆ ಬೆಲೆ ಗಗನಕ್ಕೇರಿತು. ಅಂತರರಾಷ್ಟ್ರೀಯ ಮಾರುಕಟ್ಟೆಗೆ ಭಾರತದ ಈ ಬೆಳವಣಿಗೆಗಳು ಗೊತ್ತಾಗುತ್ತಿದ್ದವು. ಅವೂ ಸಕ್ಕರೆ ಬೆಲೆ ಏರಿಸಿದವು. ಅತಿ ಕಡಿಮೆ ಬೆಲೆಗೆ ಸಕ್ಕರೆ ಆಮದು ಮಾಡಿಕೊಳ್ಳಬಹುದಾಗಿದ್ದ ಸ್ಥಿತಿ ತಿರುವು ಮುರುವಾಯಿತು. ಪರಿಣಾಮ ದೇಶದ ಜನ ಸಾಮಾನ್ಯರು ಸಕ್ಕರೆಯಿಲ್ಲದ ಕಹಿ ಕಾಫಿ ಕುಡಿಯಬೇಕಾಯಿತು. ತಿಮಿ... ಗಳು ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ಹಾಕಿದರು.

ಸಂಸತ್ತಿನಲ್ಲಿ ಎಡರಂಗ ರಾಷ್ಟ್ರೀಯರಂಗ ಸದಸ್ಯರು ಗಲಾಟೆ ಮಾಡಿದರು. ಆದರೆ ಮರ್ಯಾದೆಗೆಟ್ಟ ನರಸಿಂಹ ರಾಯರ ಸರ್ಕಾರ ತಮ್ಮದೇನೂ ತಪ್ಪಿಲ್ಲ ಎಂದು ಪಠ ಹಿಡಿಯಿತು. ಆನಂತರ ಒತ್ತಡದಿಂದ ತಪ್ಪಿಸಿಕೊಳ್ಳಲು ಗ್ಯಾನ್ ಪ್ರಕಾಶ್ ಎಂಬುವರಿಂದ ಈ ಬಗ್ಗೆ ತನಿಖೆ ನಡೆಸಲಾಯಿತು. ಅವರ ವರದಿಯೂ ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸಿತು.

ಆದರೂ ಮಂತ್ರಿಗಳ್ಯಾರೂ ರಾಜೀನಾಮೆ ನೀಡಲಿಲ್ಲ, ಆದರೆ ಕಾಂಗ್ರೆಸೊಳಗೇ ತಳಮಳ ಶುರುವಾಯಿತು. ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳ ಮಂತ್ರಾಲಯದ ಮಂತ್ರಿ ಭುವನೇಶ್ ಚತುರ್ವೇದಿ ಹೇಳಿಕೆ ನೀಡುವಾಗ ಎ.ಕೆ. ಆಂಟನಿ ಎಂಬ ನಾಗರೀಕ ಪೂರೈಕೆ ಸಚಿವರ ಹೆಸರು ಎತ್ತಿದರು. ಆಂಟನಿ ರಾಜೀನಾಮೆ ನೀಡಿದರು. ಕೊನೆಗೆ ಕೇಂದ್ರ ಆಹಾರ ಮಂತ್ರಿ ಕಲ್ಪನಾಥ ರಾಯ್ ಸಹ ರಾಜೀನಾಮೆ ನೀಡಬೇಕಾಯಿತು. ಆದರೆ ಪ್ರಧಾನ ಮಂತ್ರಿ ನರಸಿಂಹರಾಯರು?

ಸಕ್ಕರೆಯನ್ನಂತೂ ಪ್ರಧಾನ ಮಂತ್ರಿಗಳು ಸಾಕಷ್ಟು ತಿಂದಿದ್ದಾರೆ. ನೀರು ಯಾವಾಗ ಕುಡಿದಾರೊ?

"ಭ್ರಷ್ಟಾಚಾರ ಮಾಡಲಿಕ್ಕಲ್ಲದೆ ಇನ್ನೇನಕ್ಕೆ ಮಂತ್ರಿಗಳಾಗುವುದು?"

ಕೇಂದ್ರ ಆರೋಗ್ಯ ಮಂತ್ರಿ ಬಿ. ಶಂಕರಾನಂದ ಮತ್ತು ರಾಮೇಶ್ವರ್ ಠಾಕೂರ್ ಸಹ ರಾಜೀನಾಮೆ ನೀಡಿದ್ದಾರೆ. ಇದಕ್ಕಾಗಿ ವಿರೋಧ ಪಕ್ಷಗಳು ಬೆವರನ್ನು ನೀರಿನಂತೆ ಇಳಿಸಬೇಕಾಯಿತು. ಷೇರು ಹಗರಣದಲ್ಲಿ ತಪ್ಪಿತಸ್ಥರೆಂದು ಜಂಟಿ ಸಂಸದೀಯ ಸಮಿತಿ ಇವರುಗಳನ್ನು ಹೆಸರಿಸಿತು. ಆದರೆ ಇಬ್ಬರೂ ಭಂಡತನದಿಂದ "ಭ್ರಷ್ಟಾಚಾರ ಮಾಡಲಿಕ್ಕಲ್ಲದೆ ಇನ್ನೇನಕ್ಕೆ ಮಂತ್ರಿಗಳಾಗುವುದು?" ಎಂದು ಕೇಳುವಂತಿತ್ತು ಈ ಮಂತ್ರಿಗಳ ನಡವಳಿಕೆ. ಕೊನೆಗೂ ರಾಜೀನಾಮೆ ನೀಡಬೇಕಾಯಿತು. 'ಭ್ರಷ್ಟಾಚಾರವನ್ನು ಬಿಟ್ಟು ಮಾಡಬೇಕಾದ ಕೆಲಸಗಳು ಬಹಳ ಇವೆ. ಆದ್ದರಿಂದ ನೀವು ಕುರ್ಚಿ ಬಿಡಿ' ಎಂದು ಜನತೆ ಇವರಿಗೆ ತಲೆಯ ಮೇಲೆ ಹೊಡೆದು ಹೇಳಬೇಕಾಯಿತು.

ಆದಿರಲಿ ಷೇರು ಹಗರಣದಲ್ಲಿ ಇನ್ನೂ ಹೆಚ್ಚಿನ ಪಾಲುದಾರರಿದ್ದಾರೆ. ಜಂಟಿ ಸಂಸದೀಯ ಸಮಿತಿ ಕೇಂದ್ರ ಹಣಕಾಸು ಮಂತ್ರಿ ಮನಮೋಹನ್ ಸಿಂಗರನ್ನೂ ಹೆಸರಿಸಿದೆ. ಇವರು ನೇರವಾಗಿ ಭಾಗಿಯಾಗದಿರಬಹುದಾದರೂ ಪರೋಕ್ಷವಾಗಿ ಅವರಿಗೆ ಜವಾಬ್ದಾರಿ ಇದೆ.

ಹರ್ಷದ್ ಮೆಹ್ತಾನಿಂದ ಒಂದು ಕೋಟಿ ರೂಪಾಯಿ ನಗದು ಪಡೆದರೆಂಬ ಆರೋಪ ಹೊತ್ತಿರುವ ಪ್ರಧಾನ ಮಂತ್ರಿ ನರಸಿಂಹರಾಯರೇ ಇದ್ದಾರೆ. ಇವರೆಲ್ಲ ಯಾವಾಗ ಮನೆಗೆ ಹೋಗುವುದು?


ರಾತ್ರಿ ಕಳುವವರು ಹಗಲು ಕಳುವಂತೆ ಮಾಡುವುದೇ ಉದಾರೀಕರಣ

ಕಳ್ಳರು ರಾತ್ರಿ ಕಳವು ಮಾಡುತ್ತಾರೆ. ಆದರೆ ಅದೇ ಕಳುವನು ಹಗಲು ಮಾಡಿ ಎಂದರೆ? ಈಗ ಹಾಗೇ ಆಗುತ್ತಿರುವುದು. ಉದಾರೀಕರಣದ ಪರಿಣಾಮವಾಗೇ ಷೇರು ಹಗರಣ ಆಯಿತು. ಬ್ಯಾಂಕುಗಳಲ್ಲಿ ಚೆಕ್ಕುಗಳ ಮೋಸ ಇತ್ಯಾದಿ ನಡೆದೇ ಇದೆ. ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಮೋಸಗಳಾಗುತ್ತಿವೆ.

ಈ ಮುಂಬಯಿಯ ಬ್ಯಾಂಕೊಂದರಲ್ಲಿ ೭೦ ಲಕ್ಷ ರೂಪಾಯಿಗಳನ್ನು ತೆಗೆಯುತ್ತಿದ್ದ ಒಬ್ಬ ಗೌರವಾನ್ವಿತ ವ್ಯಕ್ತಿಯೊಬ್ಬನನ್ನು ಬಂಧಿಸಲಾಯಿತು. ಈತ ಮೋಸಗಾರರ ಜಾಲವೊಂದಕ್ಕೆ ಕೆಲಸ ಮಾಡುತ್ತಿದ್ದ ಎಂಬುದು ಈಗ ಗೊತ್ತಾಗಿದೆ. ಎಷ್ಟು ಕೋಟಿ ರೂಪಾಯಿಗಳನ್ನು ಮೋಸ ಮಾಡಲಾಗಿದೆ ಎಂಬುದು ಇನ್ನೂ ಸ್ಪಷ್ಟವಾಗಿದೆ.

ಉದಾರೀಕರಣ ಬರೀ ಲಾಭದ ಮೇಲೆ ಒತ್ತು ನೀಡುವಂತಹದ್ದು. ಹಣಕ್ಕಾಗಿ ಏನು ಮಾಡಲೂ ಸಿದ್ಧರಿರುವವರು ಈಗ ಚುರುಕಾಗುತ್ತಿದ್ದಾರೆ. ಅವರಿಗೆ ಅನುಕೂಲಕರವಾದ ಸರ್ಕಾರದ ನೀತಿಯೂ ಇದೆ. ಆದ್ದರಿಂದಲೇ ಇಂತಹ ಮೋಸದ ಹಗರಣಗಳೂ ಹೆಚ್ಚಾಗುತ್ತಿವೆ.

ದೇಶೀ ವಿಮಾ ವಲಯದ ಮೇಲೆ



-ಜಿ.ಎಸ್.ಮಣಿ

ಹಾರತೊಡಗಿರುವ ಅಮೇರಿಕನ್ ಹದ್ದುಗಳು

ಆರ್.ಎನ್. ಮಲ್ಹೋತ್ರಾ ಸಮಿತಿ ವರದಿಯನ್ನು ಸರ್ಕಾರ ಒಪ್ಪಿಕೊಂಡು ದೇಶದ ವಿಮಾ ವಲಯವನ್ನು ಖಾಸಗಿಯವರಿಗೆ ತೆರೆಯುವ ನಿರ್ಧಾರ ಮಾಡಿದ ಮೇಲೆ ಅಮೇರಿಕದ ವಿಮಾ ಕಂಪೆನಿಗಳಿಗೆ (ಬಹುರಾಷ್ಟ್ರೀಯ ಕಂಪನಿಗಳು) ಹಬ್ಬದೂಟಕ್ಕೆ ಕರೆ ನೀಡಿದಂತೆ ಆಗಿದೆ. ಭಾರತದ ವಿಮಾ ಮಾರುಕಟ್ಟೆ ಅತ್ಯಂತ ದೊಡ್ಡ ಅವಕಾಶ ನೀಡುವಂತಹದ್ದು ಎಂದು ಅವು ಹೇಳುತ್ತಿವೆ. ಅಂತರರಾಷ್ಟ್ರೀಯ ವಿಮಾ ಮಂಡಳಿಯ ಅಧ್ಯಕ್ಷ ಗೊರ್ಡನ್ ಕೋನಿ ಭಾರತದಲ್ಲಿ ಇಂಗ್ಲಿಷ್ ಭಾಷೆ ಇರುವುದು ದೊಡ್ಡ ಪ್ರಮಾಣದಲ್ಲಿ ಮಧ್ಯಮ ವರ್ಗ ಇರುವುದು ಈ ವಿಮಾ ಮಾರುಕಟ್ಟೆಯ ವ್ಯಾಪ್ತಿಯನ್ನು ಹೆಚ್ಚಿಸಿದೆ ಎಂದಿದ್ದಾನೆ.

ಆಗಲೇ ಅಮೇರಿಕದ ವಿಮಾ ಕಂಪನಿಗಳು ಭಾರತದ ಅಧಿಕಾರಿಗಳೊಂದಿಗೆ ಮತ್ತು ಉದ್ಯಮಗಳೊಂದಿಗೆ ಮಾತುಕತೆ ಪ್ರಾರಂಭಿಸಿದ್ದಾರೆ.

ಪುರಾಣ ಓದಿ ಬದನೆಕಾಯಿ ತಿಂದವರು

ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಕರ್ನಾಟಕ ಮತ್ತು ಆಂಧ್ರ ಚುನಾವಣೆಗಳ ನಂತರ ಸಭೆ ಸೇರಿದಾಗ ಉದಾರೀಕರಣದ ಜೊತೆಗೆ ಜನಪ್ರಿಯ ಕಾರ್ಯಕ್ರಮಗಳೂ ಇರಬೇಕೆಂಬ ತೀರ್ಮಾನಕ್ಕೆ ಬಂದಿದೆ.

ಚುನಾವಣೆ ಪ್ರಚಾರ ಸಮಯದಲ್ಲಿ ವಿರೋಧ ಪಕ್ಷಗಳು ಅಗ್ಗದ ಜನಪ್ರಿಯ ಕಾರ್ಯಕ್ರಮಗಳನ್ನು ಘೋಷಿಸುತ್ತವೆ. ಈ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಸಾಧ್ಯವಿಲ್ಲ ಎಂದೆಲ್ಲ ಅಪಪ್ರಚಾರವನ್ನು ಕಾಂಗ್ರೆಸ್(ಐ) ಮಾಡಿತು. ಆದರೆ ಚುನಾವಣೆಯಲ್ಲಿ ಜನ ಕಾಂಗ್ರೆಸ್‌ಗೆ ಗೂಸ ನೀಡಿದರು.

ಅನಂತರದಲ್ಲಿ ಕಾಂಗ್ರೆಸ್‌ನ ಕೇಂದ್ರ ಹಣಕಾಸು ಮಂತ್ರಿ ಮನಮೋಹನ್ ಸಿಂಗರು ಇಂತಹ ಅಗ್ಗದ ಪ್ರಚಾರ ಕಾರ್ಯಕ್ರಮಗಳನ್ನು ಘೋಷಿಸುವುದರ ವಿರುದ್ಧ ಕಾನೂನು ಮಾಡಬೇಕೆಂದು ಅಪ್ಪಣೆಯನ್ನು ಕೊಡಿಸಿದ್ದರು. ಆದರೆ ಈಗ ಕಾಂಗ್ರೆಸ್ಸೇ ಅಂತಹ ಕಾರ್ಯಕ್ರಮಗಳು ಬೇಕೆನ್ನುತ್ತಿದೆ. ಆದರೆ ಇಂತಹ ಕಾರ್ಯಕ್ರಮಗಳನ್ನು ತಾವೇ ಘೋಷಿಸಿ ಲಾಭ ಪಡೆಯಬೇಕು ಎಂಬ ಒಳಬಯಕೆ ಬೇರೆ.

ಹೇಳೋದು ಪುರಾಣ ತಿನ್ನೋದು ಬದನೆ ಕಾಯಿ ಎಂದರೆ ಇದೇ ತಾನೆ?

ಚೀನಾ ಗ್ಯಾಟ್‌ನೊಳಕ್ಕೆ ಬರಲು ಅಮೇರಿಕ ಅಡ್ಡಗಾಲು

ಚೀನಾ ಗ್ಯಾಟ್ ಪ್ರವೇಶಿಸದಂತೆ ಅಮೇರಿಕ ಅಡ್ಡಗಾಲು ಹಾಕಿ ಯಶಸ್ವಿಯಾಗಿದೆ. ಮುಂದಿನ ವರ್ಷದಿಂದ ಗ್ಯಾಟ್ ಎಂಬುದು ವಿಶ್ವ ವ್ಯಾಪಾರ ಸಂಸ್ಥೆ (World Trade Organisation WTO) ಆಗಿ ಪರಿವರ್ತನೆ ಹೊಂದಲಿದೆ. ಈ ಸಂಸ್ಥೆಯ ಆರಂಭಿಕ ಸದಸ್ಯನಾಗಲು ಚೀನಾ ಈ ವರ್ಷದ ಕೊನೆಯೊಳಗೆ ಅಂದರೆ ಡಿಸೆಂಬರ್ ೯೪ರ ಕೊನೆಯೊಳಗೆ ಗ್ಯಾಟ್ ನ ಸದಸ್ಯತ್ವ ಪಡೆಯಬೇಕಾಗಿತ್ತು. ಆದರೆ ಅಮೇರಿಕ ತನ್ನ ಕುತರ್ಕಗಳಿಂದ ಅದು ಆಗದಂತೆ ತಡೆದಿದೆ. ಈಗಂತೂ ವಿಶ್ವ ವ್ಯಾಪಾರ ಸಂಸ್ಥೆಯ ಆರಂಭಿಕ ಸದಸ್ಯನಾಗುವುದು ಚೀನಾಕ್ಕೆ ಸಾಧ್ಯವಿಲ್ಲ.

ಚೀನಾ ಗ್ಯಾಟ್ ನ ಸದಸ್ಯತ್ವವನ್ನು ತನ್ನ ಷರತ್ತುಗಳ ಮೇಲೆ ಕೇಳಿತ್ತು. ಜಗತ್ತಿನಲ್ಲೆಲ್ಲ ಅತ್ಯಂತ ಹೆಚ್ಚು ಬೆಳವಣಿಗೆ ದರ ಹೊಂದಿರುವ ಚೀನಾ ತನ್ನ ಹಿತಾಸಕ್ತಿಗಳನ್ನು ಗಾಳಿಗೆ ತೂರಿ ಸಾಮ್ರಾಜ್ಯಶಾಹಿಗಳೆದುರು ಭಿಕ್ಷೆ ಬೇಡುವ ಪ್ರಮೇಯವೇನಿರಲಿಲ್ಲ. ತನ್ನ ಶಕ್ತಿಯ ಮೇಲೆ ಯಾರೊಂದಿಗೂ ಚೌಕಾಸಿ ಮಾಡಬಲ್ಲ ಈ ಸಮಾಜವಾದಿ ದೇಶ ಸಾಮ್ರಾಜ್ಯಶಾಹಿಗಳು ಹಾಕುವ ತಾಳಕ್ಕೆ ತಕ್ಕಂತೆ ಕುಣಿಯುವುದು ಸಾಧ್ಯವಿಲ್ಲವಲ್ಲ.

ಗ್ಯಾಟ್ ಸದಸ್ಯತ್ವವನ್ನು ಒಂದು ಅಭಿವೃದ್ಧಿಶೀಲ ದೇಶ ಎಂದು ತನ್ನನ್ನು ಪರಿಗಣಿಸಿ ನೀಡಬೇಕೆಂದು ಚೀನಾ ಕೇಳಿತ್ತು. ಯಾಕೆಂದರೆ ಅಭಿವೃದ್ಧಿಶೀಲ ದೇಶಗಳಿಗೆ ಗ್ಯಾಟ್ ನಲ್ಲಿ ಹಲವು ರಿಯಾಯಿತಿಗಳಿವೆ. ನಿಜಕ್ಕೂ ಅಭಿವೃದ್ಧಿಶೀಲ ದೇಶವಾದ ಚೀನಾ ಈ ರೀತಿ ಕೇಳುವುದು ತೀರ ಸಹಜವಾದದ್ದು ಮತ್ತು ಸಮಂಜಸವಾದದ್ದು ಕೂಡಾ.

ಆದರೆ ಅಮೇರಿಕ ಇದಕ್ಕೆ ಅಡ್ಡಗಾಲು ಹಾಕಿತು. ಚೀನಾ ಅಭಿವೃದ್ಧಿ ಹೊಂದಿರುವ ದೇಶ ಎಂದು ಪರಿಗಣಿಸಬೇಕು ಎಂಬುದು ಅಮೇರಿಕದ ನಿಲುವು. ಜನಸಂಖ್ಯೆಯ ಪ್ರಕಾರ ಜಗತ್ತಿನ ಅತ್ಯಂತ ದೊಡ್ಡ ದೇಶವಾದ ಚೀನಾ ಇನ್ನು ಕೆಲವೇ ವರ್ಷಗಳಲ್ಲಿ ಗ್ಯಾಟ್ ನ ಅತ್ಯಂತ ದೊಡ್ಡ ವ್ಯಾಪಾರಿ ದೇಶವಾಗಿ ಬಿಡುತ್ತದೆ ಎಂಬ ಆತಂಕ ಅಮೇರಿಕಕ್ಕೆ. ಮೂರನೇ ಜಗತ್ತಿನ ಒಂದು ದೇಶ ಇಂತಹ ಲಾಭ ಹೊಂದಲು ಈ ಸಾಮ್ರಾಜ್ಯಶಾಹಿ ದೇಶ ಬಿಟ್ಟೀತೆ?

ಇದಲ್ಲದೆ ಇನ್ನೊಂದು ಭಯವೂ ಅಮೇರಿಕಕ್ಕೆ ಇತ್ತು, ಇದೆ. ಚೀನಾ ಗ್ಯಾಟ್ ನೊಳಕ್ಕೆ ಬಂದರೆ ಅಭಿವೃದ್ಧಿಶೀಲ ದೇಶಗಳು ಮತ್ತು ಹಿಂದುಳಿದ ದೇಶಗಳಿಗೆ ನೇತೃತ್ವ ನೀಡಿ ಸಾಮ್ರಾಜ್ಯಶಾಹಿ ಶೋಷಣೆಯ ಕುತಂತ್ರಕ್ಕೆ ಅಡ್ಡ ಬರುತ್ತಿತ್ತು. ಚೀನಾ ವನ್ನು ಗ್ಯಾಟ್ ನಿಂದ ಹೊರಗಿಟ್ಟರೆ ಇಂತಹ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಅದಕ್ಕಾಗಿಯೇ ಚೀನಾವನ್ನು ಗ್ಯಾಟ್ ನ ಸದಸ್ಯತ್ವದಿಂದ ಹೊರಗಿಟ್ಟಿರುವುದು. ಇದರಿಂದ ಚೀನಾಕ್ಕೆ ಅಲ್ಪಸ್ವಲ್ಪ ತೊಂದರೆಯಾಗುವುದೇನೊ ನಿಜ. ಚೀನಾ ಪ್ರತಿಯೊಂದು ದೇಶದೊಡನೆಯೂ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಚೀನಾದ ಜೊತೆಗೆ ವ್ಯಾಪಾರ ಮಾಡದೇ ಇರಲು ಜಗತ್ತಿನ ದೇಶಗಳಿಗೆ ಸಾಧ್ಯವಿಲ್ಲ.

ಗ್ಯಾಟಾಯಣ





ಗಲಭೆಗಳ ಆರೋಪಿಗಳನ್ನು ಶಿಕ್ಷಿಸುವಂತೆ ಸಿಪಿಐ(ಎಂ) ಸತತವಾಗಿ ಒತ್ತಾಯಿಸುತ್ತಲೇ ಬಂದಿದೆ. ಇಷ್ಟು ದೀರ್ಘ ಅವಧಿಯ ನಂತರ ವಾದರೂ ಪ್ರಮುಖ ಆರೋಪಿಯೊಬ್ಬನ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆಯಾಗಿರು ವುದು ಒಂದು ಮಹತ್ವ ವಿದ್ಯಮಾನವಾಗಿದೆ. ತನಿಖೆ ಪ್ರಕ್ರಿಯೆಯನ್ನು ವಿಳಂಬಗೊಳಿಸದೆ ನ್ಯಾಯಾಲಯ ಶೀಘ್ರ ಇತ್ಯಾರ್ಥ ಪಡಿಸಿ ತಪ್ಪಿತಸ್ಥರನ್ನು ಶಿಕ್ಷಿಸಲಿ. ಇಂಥ ಕ್ರಮ ಸಿಕ್ಖರಲ್ಲಿ ಚಿಗುರಿರುವ ಅಭದ್ರತೆಯ ಭಾವನೆಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆಮಾಡುವಲ್ಲಿ ನೆರವಾಗುತ್ತದೆ.

ಶಿಕ್ಷೆಗೆ ಗುರಿಯಾಗದೆ ತಪ್ಪಿಸಿಕೊಂಡಿದ್ದಾನೆ. ಕಳೆದ 12 ವರ್ಷಗಳಿಂದಲೂ ಈ ಜಮೀನಿನಲ್ಲಿ ಅದನ್ನು ಖರೀದಿಸಿದ ಬಡವರು ಪುಕ್ಕಾ ಮನೆಗಳನ್ನು ಕಟ್ಟಿಕೊಂಡಿದ್ದರು.

ಮೊದಲು ಶಾರಾದಾರಾಂ ಎಂಬ ಈ ವಂಚಕನಿಂದ ಮೋಸ ಹೋದ ಜನರನ್ನು ಪ್ರಮುಖ ರಾಜಕೀಯ ಪಕ್ಷಗಳು ಮತ್ತು ಸ್ಥಳೀಯ ಶಾಸಕ ವಂಚಿಸಿದರು ಜಮೀನು ನಿಮ್ಮದೇ ಆಗಿರುತ್ತದೆ ಎಂದು ಅವರು ಆಶ್ವಾಸನೆ ನೀಡಿದ್ದರು. ಒಟ್ಟಿನಲ್ಲಿ ಕ್ರಿಮಿನಲ್, ರಾಜಕೀಯ ದಾದಾಗಳು ಮತ್ತು ಪೋಲೀಸರು ಶಾಮೀಲಾಗಿ ಮೊದಲು ಹಣವನ್ನು,

ಕಾಂಗ್ರೈ ಎಂ.ಪಿ. ವಿರುದ್ಧ ಚಾರ್ಜ್‌ಶೀಟ್

ಪ್ರಧಾನಿ ಇಂದಿರಾಗಾಂಧಿ ಹತ್ಯೆ ಹಿನ್ನೆಲೆಯಲ್ಲಿ ನಡೆದ ಸಿಖ್ ವಿರೋಧಿ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ (ಸಿಬಿಐ) ಕಾಂಗ್ರೆಸ್(ಐ) ಲೋಕಸಭಾ ಸದಸ್ಯ (ದೆಹಲಿ ಹೊರವಲಯ ಕ್ಷೇತ್ರ) ಸಜ್ಜನ್ ಕುಮಾರ್ ಮತ್ತು ಇತರ 12 ಜನರ ವಿರುದ್ಧ ದೋಷಾರೋಪ ಪಟ್ಟಿ (ಚಾರ್ಜ್ ಶೀಟ್) ಸಲ್ಲಿಸಿದೆ.

ಕೊಲೆ, ಲೂಟಿ ಮತ್ತು ದರೋಡೆ ಆರೋಪಗಳಿಗಾಗಿ ಇವರೆಲ್ಲರ ವಿರುದ್ಧ ನವದೆಹಲಿಯ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಐಪಿಸಿ 153-ಎ ಸೆಕ್ಷನ್ ಮೇರೆಗೆ ಚಾರ್ಜ್ ಶೀಟ್ ಸಲ್ಲಿಸಲಾಗಿದೆ.

1984ರಲ್ಲಿ ಸಿಖ್ ಭಯೋತ್ಪಾದಕರ ಗುಂಡಿಗೆ ಇಂದಿರಾಗಾಂಧಿ ಬಲಿಯಾದ ಬೆನ್ನಲ್ಲಿ ದೇಶದ ಹಲವೆಡೆ ಸಿಖ್ ವಿರೋಧಿ ಹಿಂಸಾಚಾರ ಭುಗಿಲೆದ್ದಿತ್ತು. ಇದಕ್ಕೆ ಬಹುತೇಕ ಕಾಂಗ್ರೆಸ್ (ಐ) ನಾಯಕರೇ ನೇತೃತ್ವ ವಹಿಸಿದ್ದು ಸುಸ್ಪಷ್ಟವಾಗಿತ್ತು. ಕಂಡಕಂಡಲ್ಲಿ ಮುಗ್ಧ ಸಿಕ್ಖರನ್ನು ಮಹಿಳೆ ಮಕ್ಕಳು, ಮುಗ್ಧರೆಂಬ ಭೇದವಿಲ್ಲದೆ ಕೊಚ್ಚಿಹಾಕುವ ಹೇಯ ಪ್ರಕರಣಗಳು ರಾಜಧಾನಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಡೆದಿದ್ದವು. ದೆಹಲಿಯ ಹೊರವಲಯದಲ್ಲಿ ನಡೆದ ಗಲಭೆಗಳಲ್ಲಿ ವ್ಯಕ್ತಿಯೊಬ್ಬನ ಪತ್ನಿಯಾದ ಅನ್ವರ್ ಕೌರ್ ಸಂಸತ್ ಸದಸ್ಯ ಸಜ್ಜನ್ ಮತ್ತಿತರರು ಆರೋಪಿಗಳೆಂದು ತನಿಖಾ ಎದುರು ಪ್ರಮಾಣ ಪತ್ರ ಸಲ್ಲಿಸಿದರು.

ಹಿಂಸಾಚಾರದ ಕಾಲಕ್ಕೆ ಧರ್ಮದ ಆಧಾರದ ಮೇಲೆ ಎರಡು ಗುಂಪುಗಳ ನಡುವೆ ವೈರ ಮತ್ತು ದ್ವೇಷಭಾವನೆಗೆ ಉತ್ತೇಜನ ನೀಡಿದ್ದಕ್ಕಾಗಿ ಪೋಲೆರೋಪಾ ಸಮಿತಿಯ ಶಿಫಾರಸುಗಳ ಮೇರೆಗೆ ಕ್ರಮ ಕೈಗೊಂಡಿರುವುದಾಗಿ ಸಿಬಿಐ ತಿಳಿಸಿದೆ.

ಗಲಭೆಗಳ ಬಗ್ಗೆ ಮೊದಲು ತನಿಖೆ ನಡೆಸಿದ ಜೈನ್-ಬ್ಯಾನರ್ಜಿ ಸಮಿತಿ ವರದಿಯನ್ನು ರದ್ದುಪಡಿಸಬೇಕೆಂಬ ಸಜ್ಜನ್ ಕುಮಾರ್ ವಾದವನ್ನು ದೆಹಲಿ ಹೈಕೋರ್ಟ್ 1990ರಲ್ಲಿ ಎತ್ತಿ ಹಿಡಿದಿತ್ತು. ಇದರಿಂದ ಕುಮಾರ್ ಭಾರೀ ಉತ್ತೇಜಿತರಾಗಿದ್ದರು. 1990 ಸೆಪ್ಟೆಂಬರ್‌ನಲ್ಲಿ ತನಿಖೆ ಹೊಣೆಯನ್ನು ಸಿಬಿಐಗೆ ವಹಿಸಲಾಗಿತ್ತು.

ಸಜ್ಜನ್ ಕುಮಾರ್ ಬಂಧನಕ್ಕೆಂದು ಸಿಬಿಐ ತಂಡ ಎರಡು ವರ್ಷಗಳ ಹಿಂದೆ ಅವರ ಮನೆಗೆ ಹೋಗಿದ್ದಾಗ ಸಾವಿರಾರು ಜನರು ಜಮಾಯಿಸಿ ಘೇರಾವ್ ಮಾಡಿದ್ದರಿಂದ ಸಿಬಿಐ ಅಧಿಕಾರಿಗಳು ಖಾಲಿ ಕೈಯಲ್ಲಿ ಮರಳಬೇಕಾಗಿತ್ತು.

ದೌರ್ಜನ್ಯ ಮುಚ್ಚಿ ಹಾಕುವ ಯತ್ನಕ್ಕೆ ಪ್ರತಿಭಟನೆ

ದೆಹಲಿಯಲ್ಲಿ ಹೊಸ ಅಶೋಕ ನಗರ ಪ್ರದೇಶದ 50ಕ್ಕೂ ಹೆಚ್ಚು ಮಹಿಳೆಯರು ಜನವಾದಿ ಮಹಿಳಾ ಸಮಿತಿ (ಜೆಎಂಎಸ್) ನೇತೃತ್ವದಲ್ಲಿ ಮುಖ್ಯಮಂತ್ರಿ ಮದನ್ ಲಾಲ್ ಖುರಾನಾ ಅವರ ಕಛೇರಿಗೆ ನುಗ್ಗಿ ತಮ್ಮ ಪ್ರದೇಶದಲ್ಲಿ 265 ಮನೆಗಳನ್ನು ಅಧಿಕಾರಿಗಳು ನೆಲಸಮ ಮಾಡುವಾಗ ಮಹಿಳೆಯರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯದ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಒತ್ತಾಯಿಸಿದರು.

ಮಹಿಳೆಯರ ಮೇಲೆ ಲೈಂಗಿಕ ಹಲ್ಲೆ ನಡೆದಿಲ್ಲ ಎಂದು ದೆಹಲಿ ಉಪರಾಜ್ಯಪಾಲರು ತಿಳಿಸಿದ್ದಾರೆಂದು ಮುಖ್ಯಮಂತ್ರಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಹಿಳೆಯರು, ತಾವು ನಡೆಸಿದ ಆಕ್ರಮಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿರುವ ಪೋಲೀಸರು ಸಲ್ಲಿಸಿದ ವರದಿಯನ್ನು ಉಪರಾಜ್ಯಪಾಲರು ಅವಲಂಬಿಸಿದ್ದಾರೆ ಎಂದು ಹೇಳಿದರು. ದೌರ್ಜನ್ಯ ಲಂಬಿಸಿದ್ದಾರೆ ಎಂದು ಹೇಳಿದರು. ದೌರ್ಜನ್ಯ ನಡೆಸಿದವರು ಅದನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿರುವುದರಿಂದ ನ್ಯಾಯಾಂಗ ತನಿಖೆ ಅಗತ್ಯ ಎಂದು ಪ್ರತಿಪಾದಿಸಿದರು.

ನಿಯೋಗದಲ್ಲಿ ಒಬ್ಬ ಮುದುಕಿಯೂ, ಒಂಭತ್ತು ವರ್ಷದ ಒಬ್ಬಳು ಬಾಲಕಿಯೂ ಇದ್ದರು. ಮನೆಗಳನ್ನು ಕೆಡವುದಾಗ ಈ ಇಬ್ಬರ ಮೇಲೂ ಲೈಂಗಿಕ ಹಲ್ಲೆ ನಡೆದಿತ್ತು.

ಮಹಿಳಾ ಪೋಲೀಸರು ಇದ್ದರೂ ಪುರುಷ ಪೋಲೀಸರೇ ಮುನ್ನುಗ್ಗಿ ಅಶೋಕ ನಗರ ಮಹಿಳೆಯರ ಮೇಲೆ ದೌರ್ಜನ್ಯವೆಸಗಿ ಲೈಂಗಿಕವಾಗಿಯೂ ಕಿರುಕುಳ ನೀಡಿದರೆಂದು ನಿಯೋಗ ವಿವರಿಸಿದರು.

ಲೈಂಗಿಕ ದುರಾಚಾರ ನಡೆದಿಲ್ಲವೆಂದು ದೆಹಲಿಯ ಹೆಚ್ಚುವರಿ ಪೋಲೀಸ್ ಕಮಿಷನರ್ ಹೇಳಿದ್ದಾರೆ. ಖಾಕಿ ಸಮವಸ್ತ್ರದಲ್ಲಿರುವ ಕ್ರಿಮಿನಲ್‌ಗಳನ್ನು ರಕ್ಷಿಸಲಿಕ್ಕಾಗಿ ಉನ್ನತಾಧಿಕಾರಿಗಳು ಸತ್ಯವನ್ನು ತಿರುಚಲು ಹೇಸುವುದಿಲ್ಲ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ.

ವಂಚನೆ

ಹೊಸ ಅಶೋಕ ನಗರ ಪ್ರದೇಶದ ಬಡವರನ್ನು ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ಸೇರಿಕೊಂಡು ಭೂ ಮಾಫಿಯಾಗಳು ವಂಚಿಸಿರುವುದು ಜೆಎಂಎಸ್ ಗಮನಕ್ಕೆ ಬಂದಿದೆ. ಈ ಬಡವರು ತಮ್ಮ ಇಡೀ ಜೀವಮಾನದಲ್ಲಿ ಗಳಿಸಿ ಉಳಿಸಿದ್ದನ್ನು ಸೇರಿಸಿ ಆನಂತರ ಜಮೀನು ಮತ್ತು ಮನೆಯನ್ನು ಲೂಟಿ ಮಾಡಿ, ಕೊನೆಯಲ್ಲಿ ದೌರ್ಜನ್ಯವೆಸಗಿ ಮಾನಭಂಗವನ್ನು ಮಾಡಿದರು.

ಮನೆಯನ್ನು ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡಿರುವ ಜನರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು, ಭಾವಚಿತ್ರ ಸಹಿತ ಮತದಾರರ ಗುರುತು ಚೀಟಿಯನ್ನು ನೀಡಬೇಕು, ಪಡಿತರ ಸಾಮಗ್ರಿಗಳನ್ನು ಪಡೆಯಲು ಅವಕಾಶ ನೀಡಬೇಕು ಎಂದೂ ನಿಯೋಗ ಆಗ್ರಹಿಸಿದೆ. ಜಮೀನು ವ್ಯವಹಾರಗಳಲ್ಲಿ ವ್ಯಾಪಕ ಮೋಸ ಮಾಡಿರುವವರನ್ನು ಬಂಧಿಸಿ ಅವರಿಗೆ ಶಿಕ್ಷೆ ವಿಧಿಸಬೇಕೆಂದೂ ಒತ್ತಾಯಿಸಿದೆ.

ಇಟ್ಟಿಗೆ ಕಾರ್ಮಿಕರ ಸಾಮೂಹಿಕ ಅತ್ಯಾಚಾರ

ಪೋಲೀಸರ ವೇಷ ಧರಿಸಿಕೊಂಡು ಬಂದ ದುಷ್ಕರ್ಮಿಗಳು ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುತ್ತಿದ್ದ 18 ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಕೆಲಸ ಮಾಡುತ್ತಿದ್ದ 18 ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಹೇಯ ಪ್ರಕರಣ ಉತ್ತರ ಪ್ರದೇಶದ ಆಲಿಘಡ ಜಿಲ್ಲೆಯ ನಗ್ಲಾವರ್ಸಿ ಗ್ರಾಮದಲ್ಲಿ ಸಂಭವಿಸಿದೆ.

ದುಷ್ಟರು ಹಾಕಿದ ಬೆದರಿಕೆಯಿಂದಾಗಿ ಮುಚ್ಚಿಹೋಗಲಿದ್ದ ಈ ಪ್ರಕರಣ ಜನವಾದಿ ಮಹಿಳಾ ಸಮಿತಿಯ ದಿಟ್ಟ ಪ್ರಯತ್ನದಿಂದಾಗಿ ಬೆಳಕಿಗೆ ಬಂದಿದೆ.

ನವೆಂಬರ್ 28ರಂದು ರಾತ್ರಿ ಕುಲುಮೆ ಬಳಿ ಬಂದ ದುಷ್ಕರ್ಮಿಗಳು ಮನೆಗಳನ್ನು ಶೋಧಿಸುವ ಹೆಸರಿನಲ್ಲಿ ಹತ್ತಿರದಲ್ಲೇ ಇದ್ದ ಕಾರ್ಮಿಕರ ಗುಡಿಸಲುಗಳಿಗೆ ನುಗ್ಗಿದರು. ಗಂಡಸರನ್ನೆಲ್ಲಾ ಒಂದೆಡೆ ಕುಳಿತುಕೊಳ್ಳುವಂತೆ ಬೆದರಿಕೆ ಹಾಕಿದ ಅವರು 18 ಮಹಿಳಾ ಕಾರ್ಮಿಕರ ಮಾನಗಳನ್ನು ಸೂರೆ ಮಾಡಿದರು. ಕುಣಿದರು, ನರ್ತಿಸಿದರು. ಪೋಲಿ ಜೋಕುಗಳನ್ನು ಹೇಳಿದರು. ಅವ್ಯಾಚ್ಯ ಶಬ್ದಗಳಿಂದ ಬೈಯ್ದರು. ಸುಮಾರು ಎರಡುವರೆ ಗಂಟೆ ಕಾಲ ಅವರ ಈ ಹೇಯ ಕೃತ್ಯ ನಡೆಯಿತು.

ಇಷ್ಟಲ್ಲದೆ ಅತ್ಯಾಚಾರಕ್ಕೊಳಗಾದ ಮಹಿಳೆಯರು ಮತ್ತು ಪುರುಷರು ಹಾಗೂ ಮಕ್ಕಳನ್ನು ಕೂಡಾ ಥಳಿಸಿದ ದುಷ್ಟರು ಇದನ್ನು ಪೋಲೀಸರಿಗೆ ತಿಳಿಸಿದರೆ ಘೋರ ಪರಿಣಾಮ ಎದುರಿಸಬೇಕಾಗುವುದೆಂದು ಬೆದರಿಕೆ ಹಾಕಿದರು.

ಆಂಧ್ರಪ್ರದೇಶ ಚುನಾವಣಾ ವಿಶ್ಲೇಷಣೆ:

ಕಾಂಗ್ರೈ ಸೋಲು ಅಭೂತಪೂರ್ವ- ಬಿಜೆಪಿಯೂ ಮೂಲೆಗುಂಪು

ಆಂಧ್ರಪ್ರದೇಶ ತೆಲುಗು ದೇಶಂ ಮತ್ತು ಎಡಪಕ್ಷಗಳ ಅಭೂತಪೂರ್ವ ಗೆಲುವು ಸಾಧಿಸಿವೆ. ಆದರೆ ಇದಕ್ಕೂ ಮುಖ್ಯವಾದದ್ದು ಕಾಂಗ್ರೆಸ್(ಐ)ನ ಅಭೂತ ಪೂರ್ವ ಸೋಲು. ಅದು ನಿಜಕ್ಕೂ 'ಚಾರಿತ್ರಿಕ'! ಮೊತ್ತಮೊದಲ ಬಾರಿಗೆ ಕರ್ನಾಟಕದಂತೆ ಆಂಧ್ರದಲ್ಲೂ ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷ ಸ್ಥಾನಗಳಿಸಲಾಗಲಿಲ್ಲ. ಆದರೆ ಆಂಧ್ರದಲ್ಲಿ ಈ ವಿಫಲತೆ ಇನ್ನಷ್ಟು ಶೋಚನೀಯ.

ತೆಲುಗು ದೇಶಂ ಹಾಗೂ ಎಡಪಕ್ಷಗಳು ಸುಮಾರಾಗಿ ಎಲ್ಲಾ ಜಿಲ್ಲೆಗಳಲ್ಲೂ ದೊಡ್ಡ ಅಂತರದಿಂದ ೧೦ರಿಂದ ೬೦ ಸಾವಿರ ಮತಗಳ ಅಂತರದಿಂದ ಗೆದ್ದರೆ, ಕಾಂಗ್ರೆಸ್(ಐ) ಹೆಚ್ಚಿನ ಜಿಲ್ಲೆಗಳಲ್ಲಿ ಸೊನ್ನೆಗಿಳಿದಿದೆ, ಅದರ ಗೆಲುವಿನ ಅಂತರವೂ ಕಮ್ಮಿ.

ತೆಲುಗು ದೇಶಂ ೧೯೮೫ ರಲ್ಲಿ ೨೦೨ ಸ್ಥಾನ ಗೆದ್ದಿದ್ದರೆ ಈಗ ೨೧೯ ಸ್ಥಾನಗಳನ್ನು ಗೆದ್ದಿದೆ. ಅದು ಸ್ಪರ್ಧಿಸಿದ್ದು ೨೫೨ರಲ್ಲಿ ಮಾತ್ರ. ಅಂದರೆ ಶೇ. ೮೬ ಸ್ಥಾನಗಳಲ್ಲಿ ಗೆದ್ದಂತಾಗಿದೆ. ಎಡಪಕ್ಷಗಳು ಒಟ್ಟಾಗಿ ಸ್ಪರ್ಧಿಸಿದ್ದು ೩೭ ಸ್ಥಾನಗಳನ್ನು ಗೆದ್ದದ್ದು ೩೪ ಸ್ಥಾನಗಳನ್ನು, ಅಂದರೆ ಸಫಲತೆಯ ದರ ಶೇ. ೯೨.೫

ವಿಜಯಭಾಸ್ಕರ ರೆಡ್ಡಿಯವರ ಕಾಂಗ್ರೈ ಮಂತ್ರಿ ಮಂಡಲದ ಮುಕ್ಕಾಲು ಪಾಲು ಮಂತ್ರಿಗಳಷ್ಟೇ ಅಲ, ಇಬ್ಬರು ಮಾಜಿ ಮುಖ್ಯಮಂತ್ರಿಗಳಾದ ಜನಾರ್ಧನ ರೆಡ್ಡಿ ಮತ್ತು ಭಾಸ್ಕರ ರಾವ್, ಮಾಜಿ ಸ್ಪೀಕರ್ ಶ್ರೀಪಾದ ರಾವ್ ಹಾಗೂ ಪ್ರಧಾನಿಗಳ ಪುತ್ರ ಡಾ. ಪಿ.ವಿ. ರಂಗರಾವ್ ಕೂಡಾ ಪರಾಭವವುಂಡರು.

ಚುನಾವಣೆ ಗೆದ್ದ ಪ್ರಮುಖ ಎಡಪಕ್ಷಗಳ ಮುಖಂಡರೆಂದರೆ ಹಿಂದಿನ ಅಸೆಂಬ್ಲಿಯಲ್ಲಿ ಸಿಪಿಐ(ಎಂ) ನಾಯಕರು ಹಾಗೂ ಉಪನಾಯಕರಾಗಿದ್ದ ಬಿ. ವೆಂಕಟೇಶ್ವರ ರಾವ್ ಮತ್ತು ಎಸ್.ರಾಘವರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ. ವೆಂಕಯ್ಯ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಪಿ. ರಾಮಯ್ಯ ಸಿಐಟಿಯು ರಾಜ್ಯ ಕಾರ್ಯದರ್ಶಿ ಅಬ್ದುಲ್ ಗಫೂರ್ ಮತ್ತು ಹಿಂದಿನ ಅಸೆಂಬ್ಲಿಯಲ್ಲಿ ಸಿಪಿಐನ ನಾಯಕರು ಹಾಗೂ ಉಪನಾಯಕರುಗಳಾಗಿದ್ದ ಪಿ. ನಾಗೇಶ್ವರರಾವ್ ಮತ್ತು ಮಹಮ್ಮದ್ ರಜಬ್ ಅಲಿ.

ಕಾಂಗ್ರೆಸ್(ಐ) ಸಿರಿವಂತರ ಭೂಮಾಲಕರ ಪಕ್ಷ ಎಂದು ಆಂಧ್ರದಲ್ಲಿ ಸಾಬೀತಾಗಿದೆ. ಕಳೆದ ಬಾರಿ ೪೧ ಮೀಸಲು ಸ್ಥಾನಗಳಲ್ಲಿ ೨೧ ಪಡೆದಿದ್ದ ಕಾಂಗ್ರೈ ಈ ಬಾರಿ ಕೇವಲ ೨ ಸ್ಥಾನಗಳನ್ನು ಗೆದ್ದಿದೆ.

ಗಮನಾರ್ಹ ಮುನ್ನಡೆ ಸಾಧಿಸುತ್ತಿದ್ದೇವೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿಯ ಬಲವೂ ೫ ರಿಂದ ೩ ಕ್ಕಿಳಿದಿದೆ. ಸುಮಾರಾಗಿ ಎಲ್ಲಾ ಸ್ಥಾನಗಳಿಗೆ ಅಭ್ಯರ್ಥಿಯನ್ನು ನಿಲ್ಲಿಸಿ 'ಮೂರನೇ ಶಕ್ತಿ' ಎಂದು ಹೇಳುತ್ತಿದ್ದ ಅದು ಮೂಲೆಗುಂಪಾಗಿದೆ.

ಕಾಂ. ರಾಜಶೇಖರ ರೆಡ್ಡಿ

ಭಾರತ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡರಾಗಿದ್ದ ಕಾಮ್ರೇಡ್ ರಾಜಶೇಖರ ರೆಡ್ಡಿ ಡಿಸೆಂಬರ್ ೧೩ ರಂದು ಹೈದರಾಬಾದಿನಲ್ಲಿ ನಿಧನರಾದರು. ಅವರಿಗೆ ೭೬ ವರ್ಷವಾಗಿದ್ದು, ಕೆಲ ಸಮಯದಿಂದ ಕ್ಯಾನ್ಸರ್ ನಿಂದ ನರಳುತ್ತಿದ್ದರು.

ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ೧೯೩೦ ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಕಾಂ. ರೆಡ್ಡಿ ಆಂಧ್ರಪ್ರದೇಶದಲ್ಲಿ ಪಕ್ಷ ಕಟ್ಟುವಲ್ಲಿ, ಮುಖ್ಯವಾಗಿ ಕಾರ್ಯಕರ್ತರಿಗೆ ರಾಜಕೀಯ-ಸೈದ್ಧಾಂತಿಕ ಶಿಕ್ಷಣ ನೀಡುವಲ್ಲಿ ತಮ್ಮ ಕೊಡುಗೆ ನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತೆಲಂಗಾಣಾ ರೈತರ ಸಶಸ್ತ್ರ ಹೋರಾಟದಲ್ಲಿ, ಇನ್ನಿತರ ಹಲವು ಹೋರಾಟಗಳಲ್ಲಿ ಅವರು ಜೈಲುವಾಸ ಅನುಭವಿಸಬೇಕಾಯಿತು. ಅವರು ಪಕ್ಷದ ಆಂಧ್ರಪ್ರದೇಶ ಘಟಕದ ಕಾರ್ಯದರ್ಶಿಯಾಗಿ, ನಂತರ ಸಿಪಿಐ ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿ ಹಾಗೂ ಕೇಂದ್ರ ಕಾರ್ಯದರ್ಶಿಮಂಡಳಿಯ ಸದಸ್ಯರಾಗಿದ್ದವರು. ಒಟ್ಟಾಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕಮ್ಯುನಿಸ್ಟ್ ಆಂದೋಲನಕ್ಕೆ ದುಡಿದವರು ಕಾಂ. ರಾಜಶೇಖರ ರೆಡ್ಡಿ.

ಕಾಂ. ರೆಡ್ಡಿಯವರ ನಿಧನದ ವಾರ್ತೆ ಕೇಳಿ ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾರಿಗೆ ಬರೆದ ಪತ್ರದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು ಆಂಧ್ರಪ್ರದೇಶದಲ್ಲಿ ಕಮ್ಯುನಿಸ್ಟ್ ಪಕ್ಷ ಕಟ್ಟುವಲ್ಲಿ ಹಾಗೂ ದೇಶದಲ್ಲಿ ಎಡ ಆಂದೋಲನವನ್ನು ಬಲಗೊಳಿಸುವಲ್ಲಿ ಕಾಂ. ರೆಡ್ಡಿಯವರ ಮಹತ್ವದ ಕೊಡುಗೆಗಳನ್ನು, ಪಾತ್ರವನ್ನು ನೆನಪಿಸಿಕೊಂಡಿದ್ದಾರೆ. ಸಿಪಿಐ(ಎಂ) ಪೊಲಿಟ್ ಬ್ಯೂರೋ ಪರವಾಗಿ ಕಾಂ. ರಾಜಶೇಖರ ರೆಡ್ಡಿಯವರ ಕುಟುಂಬಕ್ಕೆ ಹಾಗೂ ಸಿಪಿಐಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಮದುರ್ಗ..........

ಮಾಡುತ್ತಾ ಬಂದ ಆಡಳಿತ ವರ್ಗಕ್ಕೆ ಈ ಸೌಲಭ್ಯ ಕೊಡುವುದು ನುಂಗಲಾರದ ತುತ್ತಾಯಿತು. ಹೋರಾಟದ ಮೂಲಕ ಕಾರ್ಮಿಕರು ಗಳಿಸಿದ ಸಾಧನೆಗಳನ್ನು ಮೆಟ್ಟಿಹಾಕಲು ಬಾರಿ ಆಮಿಷ ಒಡ್ಡುವುದು. ನಾನಾ ಕುತಂತ್ರ ಬಳಸಿ ಹಾಗೂ ಭಾರೀ ದಬ್ಬಾಳಿಕೆಯಿಂದ ಸಂಘಟನೆ ಮುರಿದು ಹಾಕಲು ಆಡಳಿತ ವರ್ಗ ಪ್ರಯತ್ನ ನಡೆಸಿತು.

ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ ಪ್ರತಿಭಟಿಸಿ, ಕಾರ್ಮಿಕರು ಕೆಲಸಕ್ಕೆ ಸೇರಿದ ದಿನದಿಂದ ಅನ್ವಯವಾಗುವಂತೆ ಪ್ರಾವಿಡೆಂಟ್ ಫಂಡ್ ಯೋಜನೆ ಜಾರಿಗೆ ಒತ್ತಾಯಿಸಿ, ೧೯೯೨ ರಲ್ಲಿ ಕೆಲಸದಿಂದ ತೆಗೆದ ೧೩ ಜನರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಲು ಒತ್ತಾಯಿಸಿ ಕಳೆದ ಜೂನ್ ೨೬, ರಿಂದ ನಿಪ್ಪಾಣಿಯಲ್ಲಿ ಆಮರಣ ಉಪವಾಸ ಸತ್ಯಾಗ್ರಹ ನಡೆಯಿತು. ಈ ಸಂದರ್ಭದಲ್ಲಿ ಒಪ್ಪಂದವೊಂದು ನಡೆಯಿತು. ಇದುವರೆಗೂ ಈ ಒಪ್ಪಂದದ ಅಂಶಗಳು ಜಾರಿಯಾಗಿಲ್ಲ.

ಸಂಘಟನೆ ಮುರಿದು ಹಾಕಲು ಸಂಘದ ಸದಸ್ಯರಲ್ಲದವರಿಗೆ ಹೆಚ್ಚು ಕೆಲಸ ಕೊಡುವುದು ಸಂಘದ ಸದಸ್ಯರಿದ್ದವರ ಬೀಡಿಗಳು ಸರಿ ಇಲ್ಲ ಎಂದು ತಿರಸ್ಕರಿಸುವುದು, ಮನಸ್ಸಿಗೆ ಬಂದಾಗ ಕೆಲಸ ಕೊಡದಿರುವುದು ಶುರುವಾಯಿತು. ಜೊತೆಗೆ ಕಾರ್ಮಿಕರಿಗೆ ಆಮಿಷ ಒಡ್ಡಲು ಸಂಘ ಬಿಟ್ಟು ಬಂದವರಿಗೆ ಹೆಚ್ಚು ಕೆಲಸ ಕೊಡುವ ಸಲುವಾಗಿ ಬೇನಾಮಿ ಹೆಸರಿನಿಂದ ಎ.ಎಂ. ಬೀಡಿ ಫ್ಯಾಕ್ಟರಿ ಎಂಬ ಇನ್ನೊಂದು ಸಂಸ್ಥೆಯನ್ನು ಕಳೆದ ನಾಲ್ಕು ತಿಂಗಳಿಂದ ಆರಂಭಿಸಲಾಗಿದೆ. ಇದಕ್ಕೆ ಇದುವರೆಗೂ ಕಾನೂನು ರೀತ್ಯ ಅತ್ಯಗತ್ಯವಾದ ಲೇಬರ್ ಲೈಸನ್ಸ್ ಪಡೆದಿಲ್ಲ, ಕಾರ್ಮಿಕ ಇಲಾಖೆಯವರಿಗೆ ಈ ವಿಷಯ ಗೊತ್ತಿದ್ದೂ ಲಂಚಕೋರ ಅಧಿಕಾರಿಗಳು ಕ್ರಮ ವಹಿಸಿಲ್ಲ, ಇದನ್ನೆಲ್ಲ ಪ್ರತಿಭಟಿಸಿದ ೧೫ ಕಾರ್ಮಿಕರನ್ನು ಆಗಸ್ಟ್ ೧೯೯೪ ರಿಂದ ಕೆಲಸದಿಂದ ತೆಗೆಯಲಾಗಿದೆ.

ಎಷ್ಟೇ ದಬ್ಬಾಳಿಕೆ ಮಾಡಿದರೂ ಸಂಘಟನೆ ಮುರಿಯಲು ಅಸಾಧ್ಯವಾದಾಗ ನವೆಂಬರ್ ೧, ೧೯೯೪ ರಿಂದ ಕಾರ್ಮಿಕರಿಗೆ ಕೆಲಸ ನೀಡಿಲ್ಲ, ಈ ಅನ್ಯಾಯದ ವಿರುದ್ಧ ಡಿಸೆಂಬರ್ ೧೨, ೧೯೯೪ರಿಂದ ರಾಮದುರ್ಗ ತಹಶೀಲ್ದಾರರ ಕಛೇರಿ ಎದುರು ಮಹಿಳಾ ಕಾರ್ಮಿಕರು ಧರಣಿ ಸತ್ಯಾಗ್ರಹ, ಡಿಸೆಂಬರ್ ೧೨, ೧೯೯೪ರಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ.

ಕೆಲಸವಿಲ್ಲದೇ ಒಂದೂವರೆ ತಿಂಗಳಾದ್ದರಿಂದ ಉಪವಾಸ ಬಳಲಿದ್ದರೂ ಸಂಘಟನೆ ಮುರಿಯಬಾರದೆನ್ನುವ ಛಲದಿಂದ ಮಹಿಳೆಯರು ಧೀರ ಹೋರಾಟ ನಡೆಸಿದ್ದಾರೆ.

ರಾಮದುರ್ಗದ ಹಾಗೂ ಜಿಲ್ಲೆಯ ಎಲ್ಲ ಸಂಘ ಸಂಸ್ಥೆಗಳಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು ಈ ನ್ಯಾಯಬದ್ಧ ಹೋರಾಟ ವನ್ನು ಬೆಂಬಲಿಸಬೇಕೆಂದು ಬೆಳಗಾವಿ ಜಿಲ್ಲಾ ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷ ವಿ.ಪಿ.ಕುಲಕರ್ಣಿಯವರು ವಿನಂತಿಸಿಕೊಂಡಿದ್ದಾರೆ.

ಡಿ.ವೈ.ಎಫ್.ಐ. ನೂತನ ಘಟಕ

ಡಿ.ವೈ.ಎಫ್.ಐ. ಶ್ರೀರಾಮಪುರದ ಸಮಿತಿಯ ಸಂಘಟನೆಯನ್ನು ವಿಸ್ತರಿಸುವ ಸಲುವಾಗಿ ಡಿಸೆಂಬರ್ ೨೫, ೧೯೯೪ ರಂದು ಸ್ವತಂತ್ರನಗರದಲ್ಲಿ ನೂತನ ಘಟಕವನ್ನು ರಚಿಸಲಾಯಿತು. ಈ ಘಟಕದ ಅಧ್ಯಕ್ಷರಾಗಿ ರಾಜೇಂದ್ರನ್, ಉಪಾಧ್ಯಕ್ಷರಾಗಿ ಕುಮಾರ್, ಕಾರ್ಯದರ್ಶಿಯಾಗಿ, ವೇಲು, ಸಹಾಯಕ ಕಾರ್ಯದರ್ಶಿಯಾಗಿ ಎಂ. ಗೋಪಿ, ಖಜಾಂಚಿಯಾಗಿ ಬಾಬು ರವರನ್ನೊಳಗೊಂಡ ೧೪ ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಈ ಸಭೆಯಲ್ಲಿ ಸ್ಥಳೀಯ ಸಮಸ್ಯೆಗಳನ್ನು ಪಟ್ಟಿ ಮಾಡಿ ಹಂತ ಹಂತವಾಗಿ ಕಾರ್ಯಕ್ರಮ ರೂಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು.

ಈ ಸಭೆಗೆ ಸಿಪಿಐ(ಎಂ) ಶ್ರೀರಾಮಪುರ ಕಾರ್ಯದರ್ಶಿ ಕೋದಂಡರಾಮ್, ಶ್ರೀರಾಮಪುರ ಸಮಿತಿಯ ಅಧ್ಯಕ್ಷ ಮರಿಯಪ್ಪ, ಮತ್ತು ಜಿಲ್ಲಾ ಸಮಿತಿ ಸದಸ್ಯ ಸಿ. ಗೋಪಾಲ ಕೃಷ್ಣ ರವರು ಭಾಗವಹಿಸಿ ಸೂಕ್ತ ಮಾರ್ಗದರ್ಶನ ನೀಡಿದರು.

ಇಸ್ಲಾಮಿಕ್ ದೇಶಗಳ ಸಂಘಟನೆಯ ಏಳನೇ ಶೃಂಗ ಸಭೆ

ಮೂಲಭೂತವಾದಿ ಭಯೋತ್ಪಾದಕರ ವಿರುದ್ಧ ಜಂಟಿ ಹೋರಾಟಕ್ಕೆ ಕರೆ

ಮೊರಕ್ಕೊ ರಾಜಧಾನಿ ಕಾಸಾಬ್ಲಾಂಕಾದಲ್ಲಿ ಇತ್ತೀಚೆಗೆ ಇಸ್ಲಾಮಿಕ್ ದೇಶಗಳ ಸಂಘಟನೆಯ (OIC) 7ನೇ ಶೃಂಗಸಭೆ ನಡೆಯಿತು. ಈ ಸಂಘಟನೆಯಲ್ಲಿ ತುರ್ಕಿ, ಮೊರಕ್ಕೊ, ಅಲ್ಜೀರಿಯಾ, ಈಜಿಪ್ಟ್, ಎಲ್ಲಾ ಕೊಲ್ಲಿ ದೇಶಗಳು, ಪಾಕಿಸ್ತಾನ, ಮಲ್ಯೇಷ್ಯಾ, ಇಂಡೋನೇಷ್ಯಾದವರೆಗೆ ಮುಸ್ಲಿಂ ಬಹುಸಂಖ್ಯಾತವಾದ ೨೮ ದೇಶಗಳು ಸದಸ್ಯರಾಗಿವೆ. ಈ ಸಂಘಟನೆ ಹಲವಾರು ಅಂತರರಾಷ್ಟ್ರೀಯ ವಿಚಾರಗಳಲ್ಲಿ ತನ್ನ ಸದಸ್ಯ ದೇಶಗಳ ಒಮ್ಮತದ ಆಧಾರದ ಮೇಲೆ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತದೆ. ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಇಸ್ಲಾಂ ಧರ್ಮಾವಲಂಬಿ ಬಹುಸಂಖ್ಯಾತರಿರುವ ದೇಶ ಎಂಬ ಒಂದು ಅಂಶ ಬಿಟ್ಟರೆ, ಉಳಿದಂತೆ ಭಾರಿ ವೈಚಾರಿಕತೆ ಇರುವ ಈ ದೇಶಗಳ ನಡುವೆ ಒಮ್ಮತ್ರ ಬರುವುದೇ ಅಪರೂಪ. ಒಮ್ಮತ್ರ ರೂಪಿತವಾದರೂ ಸಂಘಟನೆಯ ನಿರ್ಣಯಕ್ಕೆ ಅಂತರರಾಷ್ಟ್ರೀಯವಾಗಿ ಪರಿಣಾಮಕಾರಿಯಾಗುವ ಶಕ್ತಿ ಇಲ್ಲ, ಆದರೂ ಓಐಸಿಯ ನಿರ್ಣಯಗಳಿಗೆ ಅದರದ್ದೇ ಆದ ಮಹತ್ವವಿರುತ್ತದೆ.

ಈ ಬಾರಿಯ ಶೃಂಗ ಸಭೆಯಲ್ಲಿ ಸುಮಾರು ೧೮೦ ವಿಷಯಗಳ ಬಗ್ಗೆ ಚರ್ಚಿಸಿ, ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ನಿರ್ಣಯಗಳಲ್ಲಿ ಹೆಚ್ಚಿನವು ನೈಜ ಪರಿಸ್ಥಿತಿಗೆ ಅನುಗುಣವಾಗಿದ್ದು, ಜಾರಿಗೆ ತರುವ ಸಾಧ್ಯತೆ ಇದ್ದವುಗಳಾಗಿದ್ದು ಒಂದು ವಿಶೇಷವಾಗಿತ್ತು. ಮುಖ್ಯವಾಗಿ ಮುಸ್ಲಿಂ ಮೂಲಭೂತವಾದಿಗಳ ಭಯೋತ್ಪಾದಕ ಕೃತ್ಯ ಹಾಗೂ ಬೋಸ್ನಿಯಾಗಳ ಬಗ್ಗೆ ಶೃಂಗಸಭೆ ಚರ್ಚಿಸಿತು. ಶೃಂಗಸಭೆ ಚರ್ಚಿಸಿದ ಇತರ ವಿಷಯಗಳಲ್ಲಿ ಕಾಶ್ಮೀರವೂ ಒಂದಾಗಿತ್ತು.

ಸಂಘಟನೆ ಅಂಗೀಕರಿಸಿದ ಪ್ರಮುಖ ನಿರ್ಣಯವೊಂದರ ಪ್ರಕಾರ, ಇನ್ನೊಂದು ದೇಶದ ಮುಸ್ಲಿಂ ಮೂಲಭೂತವಾದಿ ಇತರ ನಮೂನೆಯ ಭಯೋತ್ಪಾದಕ ಸಂಘಟನೆಗಳಿಗೆ, ತಮ್ಮ ದೇಶದಿಂದ ಅಥವಾ ಕಾರ್ಯನಿರ್ವಹಿಸಲು ಅವಕಾಶ ಕೊಡುವಂತಿಲ್ಲ, ಇತ್ತೀಚೆಗೆ ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕರನ್ನು ಇತರ ದೇಶಗಳ ಆಂತರಿಕ ವಿಷಯಗಳಲ್ಲಿ ಮಧ್ಯಪ್ರವೇಶ ಮಾಡುವ ಆ ದೇಶವನ್ನು ಬಲಹೀನ ಗೊಳಿಸುವ ಅಸ್ತ್ರವಾಗಿ ಬಳಗೊಳ್ಳಲಾಗುತ್ತಿತ್ತು. ಇಂತಹ ಧೋರಣೆಯ ಅಪಾಯಗಳು, ಈಗ ಹೆಚ್ಚಿನ ದೇಶಗಳಿಗೆ ಅರ್ಥವಾಗಿದ್ದು ಈ ಬಗ್ಗೆ ಮೇಲೆ ಹೇಳಿದ ನಿರ್ಣಯ ಮಂಡಿಸಲಾಗಿ ಅಂಗೀಕರವಾಯಿತು. ಈ ನಿರ್ಣಯವನ್ನು ಮೊರೊಕ್ಕೊ, ಈಜಿಪ್ತ್ ಹಾಗೂ ಅಲ್ಜೀರಿಯಾಗಳು ಮಂಡಿಸಿದ್ದವು. ಮುಸ್ಲಿಂ ಮೂಲಭೂತವಾದಿಗಳು ಹೆಚ್ಚಿನ ದೇಶಗಳಲ್ಲಿ ಪ್ರಮುಖ ವಿರೋಧಿ ರಾಜಕೀಯ ಶಕ್ತಿಯಾಗಿದೆ. ಆದರೆ ಎಲ್ಲಾ ದೇಶಗಳಲ್ಲಿ ಇದರ ಸ್ವರೂಪ ಒಂದೇ ತರಹವಿಲ್ಲ, ಸ್ಪಷ್ಟ ಸಾಮ್ರಾಜ್ಯಶಾಹಿ-ವಿರೋಧಿ ಹಾಗೂ ಪ್ರಜಾಸತ್ತಾತ್ಮಕ ನಿಲುಮೆ ತೆಗೆದುಕೊಂಡಿದ್ದ ಆಳುವ ಪಕ್ಷಗಳಿದ್ದ ಇಸ್ಲಾಮಿಕ್ ದೇಶಗಳಲ್ಲಿ (ಉದಾ: ಈಜಿಪ್ತ್, ಅಲ್ಜೀರಿಯಾ ಇತ್ಯಾದಿ), ಆ ಪಕ್ಷಗಳ ಆಡಳಿತ ಬುಡಮೇಲು ಮಾಡಲು ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳನ್ನು ಸಾಮ್ರಾಜ್ಯಶಾಹಿಯೇ ಕೆಲವು ಮುಸ್ಲಿಂ ದೇಶಗಳ ಸಹಾಯದಿಂದ ಹುಟ್ಟು ಹಾಕಿತ್ತು. ಆದರೆ ಸಾಮ್ರಾಜ್ಯಶಾಹಿ-ಕುಮ್ಮಕ್ಕಿನಿಂದ ಶೋಷಕ ಪಾಳೆಯಗಾರಿ ಶಕ್ತಿಗಳು ಆಳುತ್ತಿರುವ ಸಂಪ್ರದಾಯವಾದಿ ದೇಶಗಳಲ್ಲಿ, (ಉದಾ: ಸೌದಿ ಅರೇಬಿಯಾ, ಇತರ ಕೊಲ್ಲಿ ದೇಶಗಳು, ಇರಾನ್ ಇತ್ಯಾದಿ) ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಅಭಾವದಿಂದ ಮುಸ್ಲಿಂ ಮೂಲಭೂತವಾದಿ ಗುಂಪುಗಳು ಪ್ರಮುಖ ವಿರೋಧಿ ರಾಜಕೀಯ ಶಕ್ತಿ ಆಗಿವೆ.

ಬೋಸ್ನಿಯಾದ ಬಗೆಗಿನ ನಿರ್ಣಯದಲ್ಲಿ, ಆ ದೇಶಕ್ಕೆ ಆರ್ಥಿಕ ಬೆಂಬಲ ನೀಡುವ ಹಾಗೂ ಏಳು ದೇಶಗಳ ಪ್ರತಿನಿಧಿಗಳು ಐದು-ಯುರೋಪಿಯನ್ ದೇಶಗಳ ಜತೆ ಸೇರಿ ಒಂದು ಪರಿಹಾರ ರೂಪಿಸಬೇಕೆಂಬ ನಿರ್ಧಾರಕ್ಕೆ ಬಂತು. ಕಾಶ್ಮೀರದ ಬಗೆಗಿನ ನಿರ್ಣಯದಲ್ಲಿ ಪಾಕಿಸ್ತಾನದ ಜತೆ ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಸುವ ಬಗ್ಗೆ ಭಾರತದ ಮುತುವರ್ಜಿ ವಹಿಸಬೇಕೆಂದು ಹೇಳಲಾಗಿದೆ. ಕಾಶ್ಮೀರಿ ಭಯೋತ್ಪಾದಕರಿಗೆ ಪಾಕಿಸ್ತಾನ ನೀಡುವ ಬೆಂಬಲದ ಬಗ್ಗೆ ಏನೂ ಹೇಳಲಾಗಿಲ್ಲ, ಕಾಶ್ಮೀರದ ಹುರ್ರಿಯನ್ ಸಮ್ಮೇಳನದ ಇಬ್ಬರು ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸಿದ್ದರು.

ಇಟಲಿ ಪ್ರಧಾನಿ ರಾಜೀನಾಮೆ ಬಿಕ್ಕಟ್ಟು

ಇಟಲಿ ಪ್ರಧಾನಿ ರಾಜೀನಾಮೆ ನೀಡಿದ್ದು, ಆ ದೇಶದಲ್ಲಿ ಹೊಸ ರಾಜಕೀಯ ಬಿಕ್ಕಟ್ಟಿನ ಸರಣಿ ಆರಂಭವಾಗಿದೆ. ಏಳು ತಿಂಗಳ ಸಮ್ಮಿಶ್ರ ಸರ್ಕಾರ ಇಡೀ ಅವಧಿ ಬಾಳುವುದಿಲ್ಲ ಎಂಬುದು ಮೊದಲಿನಿಂದಲೂ ಸ್ಪಷ್ಟವಾಗಿತ್ತು. ಕಮ್ಯುನಿಸ್ಟರನ್ನು ಅಧಿಕಾರದಿಂದ ಹೊರಗಿಡುವುದೇ ಈ ರಂಗದ ಏಕಮಾತ್ರ ಉದ್ದೇಶವಾಗಿತ್ತು. ಅದು ಬಿಟ್ಟರೆ ಯಾವುದೇ ಸಮಾನ ಧೋರಣೆ, ಕನಿಷ್ಠ ಕಾರ್ಯಕ್ರಮ ಇಲ್ಲದ ರಂಗವಿದು. ಈ ರಂಗದ ಪ್ರಮುಖ ಪಕ್ಷಗಳೆಂದರೆ ಚುನಾವಣೆಯ ಕೆಲವೇ ವಾರಗಳ ಮುಂಚೆ ಹುಟ್ಟಿದ ಟೆಲಿವಿಷನ್ ಉದ್ಯಮದ 'ದೊರೆ'ಯವರ 'ಫೋರ್ಝಾ ಇಟಾಲಿಯಾ' ಪಕ್ಷ, ಫ್ಯಾಸಿಸ್ಟ್ ನೇಶನಲ್ ಅಲೆಯನ್ಸ್, ಹಾಗೂ ಪ್ರತ್ಯೇಕತಾವಾದಿ ನಾರ್ತನ್ ಲೀಗ್.

ಈಗ ನಾರ್ತನ್ ಲೀಗ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ತಂದಿತ್ತು. ಈ ಅವಿಶ್ವಾಸ ನಿರ್ಣಯವನ್ನು ಎದುರಿಸುವ ಬದಲು ಪ್ರಧಾನಿ ರಾಜೀನಾಮೆ ನೀಡಿದ್ದಾರೆ. ಪ್ರಧಾನಿಯವರ ಟೆಲಿವಿಷನ್ ಕಂಪನಿ ಲಂಚಕೋರತನ ಹಾಗೂ ತೆರಿಗೆಗಳ್ಳತನ ಮಾಡಿದೆ ಎಂಬ ಆಪಾದನೆ ಬಗ್ಗೆ ಪ್ರಧಾನಿ ಸ್ವತಃ ವಿಚಾರಣೆ ಎದುರಿಸುತ್ತಿದ್ದಾರೆ. ಪ್ರಧಾನಿ ಒಡೆತನದಲ್ಲಿರುವ ಮೂರು ಚಾನೆಲ್ ಗಳು ಸೇರಿದಂತೆ ಇಟಲಿಯ ಏಳು ಚಾನಲ್‌ಗಳ ಪುನರ್ಸಂಘಟನೆಗೆ ವಿರೋಧ ಪಕ್ಷಗಳು ಮಂಡಿಸಿದ ನಿರ್ಣಯವೊಂದರ ಪರವಾಗಿ, ಸರ್ಕಾರದ ವಿರುದ್ಧ ನಾರ್ತನ್ ಲೀಗ್ ಮತ ನೀಡಿದ್ದು, ಸರ್ಕಾರ ಬೀಳುವುದು ಹೆಚ್ಚು ಕಡಿಮೆ ಖಚಿತವಾಗಿತ್ತು.

ಬಂಡವಾಳಶಾಹಿ ಜತೆ ಭ್ರಷ್ಟಾಚಾರ ತಾಂಡವವಾಡುತ್ತಿರುವುದು ಸರ್ವೇ ಸಾಮಾನ್ಯ. ಆದರೆ ಇಟಲಿಯಲ್ಲಿ ಭ್ರಷ್ಟಾಚಾರ ಹಾಗೂ ಮಾಫಿಯಾ ರಾಜಕೀಯ ಎಲ್ಲಾ ದೊರೆಗಳನ್ನು ಮೀರಿ ಜನರು ಬೇಸತ್ತಾಗ ಪ್ರಧಾನಿಯವರ ಹೊಸ ಪಕ್ಷ 'ಸ್ವಚ್ಛ'ವಾಗಿ ಕಂಡಿದ್ದು, ಬೇಗನೇ ಭ್ರಮನಿರಸನವಾಗಿದೆ. ನಾರ್ತನ್ ಲೀಗ್ ವಿರೋಧ ಪಕ್ಷಗಳ ಜತೆ ಬದಲಿ ಸರ್ಕಾರ ರಚಿಸಲು ಪ್ರಯತ್ನಿಸುತ್ತಿದ್ದರೂ ಮರು ಚುನಾವಣೆಯ ಸಾಧ್ಯತೆಯೇ ಹೆಚ್ಚು.

ಭಯಗ್ರಸ್ತ ಕರಾಚಿಯ ರಕ್ತಸಿಕ್ತ ತಿಂಗಳು

ಪಾಕಿಸ್ತಾನದ ಸಿಂಧ್ ಪ್ರಾಂತ್ಯ ಕಾನೂನು ವ್ಯವಸ್ಥೆಯ ದೃಷ್ಟಿಯ ಅತ್ಯಂತ ತೀವ್ರ ಬಿಕ್ಕಟ್ಟಿನಿಂದ ಹಾದು ಹೋಗುತ್ತಿದೆ. ಅದರಲ್ಲೂ ಸಿಂಧ್ ನ ಮುಖ್ಯ ನಗರ ಹಾಗೂ ದೇಶದ ಕೈಗಾರಿಕಾ-ಆರ್ಥಿಕ ರಾಜಧಾನಿ ಕರಾಚಿಯಂತೂ ಅತ್ಯಂತ ಭಯಗ್ರಸ್ತ ನಗರ. ಡಿಸೆಂಬರ್ ತಿಂಗಳು ಒಂದರಲ್ಲೇ ನೂರಕ್ಕೂ ಹೆಚ್ಚು ಜನರು ಬೀದಿ ಹಿಂಸಾಚಾರದಲ್ಲಿ ಸತ್ತಿದ್ದಾರೆ. ಈ ವರ್ಷದಲ್ಲಿ ಈ ರೀತಿ ಸತ್ತವರ ಸಂಖ್ಯೆ ೬೫೦.

ಭಾರತ ವಿಭಜನೆಯಾದಾಗ ಬಿಹಾರ, ಉತ್ತರ ಪ್ರದೇಶ ಮುಂತಾದ ಪ್ರಾಂತ್ಯಗಳಿಂದ ಪಾಕಿಸ್ತಾನಕ್ಕೆ ಹೋದ ಉರ್ದು ಮಾತನಾಡುವವರನ್ನು ಆ ದೇಶದಲ್ಲಿ 'ಮೊಹಜಿರ್' ಎನ್ನುತ್ತಾರೆ. ಅವರು ಹೆಚ್ಚಾಗಿ ನೆಲೆಸಿರುವುದು ಸಿಂಧ್ ಪ್ರಾಂತ್ಯದಲ್ಲಿ, ಸಿಂಧ್ ಪ್ರಾಂತ್ಯದ ಬಹುಸಂಖ್ಯಾತ ಸಿಂಧಿಗಳಿಗೂ, ಅಲ್ಪ ಸಂಖ್ಯಾತ ಆದರು ಆರ್ಥಿಕವಾಗಿ, ಶಿಕ್ಷಣ-ಉದ್ಯೋಗಗಳಲ್ಲಿ ಪ್ರಬಲವಾಗಿರುವ ಮೊಹಜಿರರಿಗೂ ಘರ್ಷಣೆ ಮೊದಲಿನಿಂದಲೂ ಇತ್ತು. ಅವರ ರಾಜಕೀಯ ಪಕ್ಷ ಮೊಹಜಿರ್ ಕೌಮಿ ಮೂವ್ ಮೆಂಟ್ (MQM) ಜತೆ ದೇಶದ ಎರಡೂ ಪ್ರಮುಖ ರಾಜಕೀಯ ಪಕ್ಷಗಳು ರಾಜಕೀಯ ಆಟ ಆಡಿದ್ದಾರೆ. ಸಿಂಧಿ-ಮೊಹಜಿರ್ ಘರ್ಷಣೆಯನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದಾರೆ. ಇದರಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. MQM ಈಗ ಪ್ರತ್ಯೇಕ ಪ್ರಾಂತ್ಯಕ್ಕಾಗಿ ನಡೆಸುತ್ತಿರುವ ಚಳುವಳಿ ಇಬ್ಬರಿಗೂ ನುಂಗಲಾರದ ತುತ್ತಾಗಿದೆ.

ಹಲವು MQM ಸಶಸ್ತ್ರ ಗುಂಪುಗಳು ಬೀದಿಕಾಳಗಕ್ಕೆ ಇಳಿದಿದ್ದು, ಕರಾಚಿಯೇ ಏಕೆ, ಇಡೀ ಸಿಂಧ್ ಪ್ರಾಂತ್ಯದಲ್ಲಿ ಬೀದಿ ಹಿಂಸಾಚಾರ ಅವಿರತವಾಗಿ ಮುಂದುವರೆಯುತ್ತಿದೆ. ಇದು ಸಾಲದೆಂಬಂತೆ ಸುನ್ನಿ-ಷಿಯಾ ಮೂಲಭೂತವಾದಿಗಳ ನಡುವೆ ಸಶಸ್ತ್ರ ಗಲಭೆ ನಡೆದಿದೆ. ಸುನ್ನಿ ಮುಸ್ಲಿಮರು ಬಹುಸಂಖ್ಯಾತರಿರುವ ಪಾಕಿಸ್ತಾನವನ್ನು ಸುನ್ನಿ ದೇಶ. ಷಿಯಾಗಳು ಮುಸ್ಲಿಮರೇ ಅಲ್ಲ ಎಂದು ಘೋಷಿಸಬೇಕು ಎಂದು ಸುನ್ನಿ ಮೂಲಭೂತವಾದಿಗಳ ಬೇಡಿಕೆ. ಷಿಯಾ ಮೂಲಭೂತವಾದಿಗಳು ಇದನ್ನು ವಿರೋಧಿಸಿ ಚಳುವಳಿಗೆ ಇಳಿದಿದ್ದಾರೆ.

ಎಲ್ಲಾ ಬಲಪ್ರಯೋಗ ಮಾಡಿಯೂ ಹಿಂಸಾಚಾರ ತಡೆಯಲು ಸಾಧ್ಯವಾಗದಿರುವ ಬೆನಜಿರ್ ಸರ್ಕಾರ, ಭಾರತ ಈ ಹಿಂಸಾಚಾರವನ್ನು ಪ್ರಚೋದಿಸುತ್ತಿದೆ ಎಂದು ಆಪಾದಿಸುತ್ತಿದೆ.

ಬಲ್ಗೇರಿಯಾದಲ್ಲಿ ಸೋಶಲಿಸ್ಟರ ವಿಜಯ

ಬಲ್ಗೇರಿಯನ್ ಸೋಶಲಿಸ್ಟ್ ಪಾರ್ಟಿ (ಮಾಜಿ ಕಮ್ಯುನಿಸ್ಟ್ ಪಾರ್ಟಿ) ಇತ್ತೀಚೆಗೆ ಆ ದೇಶದಲ್ಲಿ ನಡೆದ ಮೂರನೇ ಸಾರ್ವತ್ರಿಕ ಚುನಾವಣೆಗಳಲ್ಲಿ ಜಯಗಳಿಸಿ, ಎರಡನೇ ಬಾರಿ ಸರ್ಕಾರ ರಚಿಸುವ ಶಕ್ತಿ ಗಳಿಸಿದೆ. ಸೋಶಲಿಸ್ಟ್ ಪಕ್ಷ ಶೇಕಡಾ 44 ರಷ್ಟು ಮತಗಳಿಸಿ ಸರ್ಕಾರ ರಚಿಸುವುದು ಖಚಿತವಾಗಿದೆ. ಕಮ್ಯುನಿಸ್ಟ್ ವಿರೋಧಿ ವಿರೋಧ ಪಕ್ಷಗಳ ರಂಗ ವಿ.ಡಿ.ಎಫ್. ಶೇಕಡಾ 24 ಮತಗಳಿಸಿ ಎರಡನೇ ಸ್ಥಾನದಲ್ಲಿ ತೀರಾ ಹಿಂದಿದೆ. ಇತರ ನಾಲ್ಕು ಪಕ್ಷಗಳು ಶೇಕಡಾ 4ರ ಆಸುಪಾಸಿನಲ್ಲಿ ಮತಗಳಿಸಿದ್ದು ಯಾವುದೇ ಸ್ಥಾನ ಗಳಿಸದೆ ಹೋಗಬಹುದು. ಬಲ್ಗೇರಿಯನ್ ಸಂವಿಧಾನದ ಪ್ರಕಾರ ಕನಿಷ್ಠ ಶೇಕಡಾ 4 ಮತಗಳಿಸದೆ ಪಾರ್ಲಿಮೆಂಟಿನಲ್ಲಿ ಯಾವುದೇ ಸೀಟುಗಳು ದೊರೆಯುವುದಿಲ್ಲ.

ಬಲ್ಗೇರಿಯಾದಲ್ಲಿ ತೀವ್ರವಾಗುತ್ತಿರುವ ಆರ್ಥಿಕ ಬಿಕ್ಕಟ್ಟು, ಮತ್ತು ದುರ್ಭರವಾಗುತ್ತಿರುವ ಜನರ ಜೀವನ ಪರಿಸ್ಥಿತಿ ಸೋಶಲಿಸ್ಟ್ ಪಕ್ಷವನ್ನ ಅಧಿಕಾರಕ್ಕೆ ತಂದಿದೆ. ಹಣದುಬ್ಬರ ಈ ವರ್ಷ ಇಮ್ಮಡಿಯಾಗಿದ್ದು, ಈಗ ಶೇಕಡಾ 120 ಆಗಿದೆ. ಕಲ್ಲಿದ್ದಲು, ವಿದ್ಯುತ್, ಲೋಹ, ಹಾಗೂ ಬಟ್ಟೆ ಮುಂತಾದ ಕೈಗಾರಿಕೆಗಳಲ್ಲಿ ಉತ್ಪಾದನೆ ಇಳಿಮುಖವಾಗಿದೆ. ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟಿರುವ ಪಿಂಚಣಿದಾರರು, ತಮ್ಮ ಪಿಂಚಣಿಯಲ್ಲಿ ಕುಟುಕು ಜೀವ ಹಿಡಕೊಂಡು ಬದುಕಿದ್ದಾರೆ ಅಷ್ಟೇ. ರಾಜಧಾನಿ ಸೋಫಿಯಾದಲ್ಲಿ ವಾರದಲ್ಲಿ ಮೂರು ದಿನ ಮಾತ್ರ ನೀರು ಇರುತ್ತದೆ. ಪೋಲೆಂಡ್, ಹಂಗರಿ, ರೊಮೇನಿಯಾಗಳಂತೆ ಪೂರ್ವ ಯುರೋಪಿನ ಈ ದೇಶದಲ್ಲೂ ಹಿಂದಿನ ಸಮಾಜವಾದಿ ಸಮಾಜದ ಜೀವನಮಟ್ಟ ಮತ್ತೆ ಸ್ಥಾಪಿಸಬಲ್ಲರು ಎಂಬ ದೃಷ್ಟಿಯಿಂದ ಸೋಶಲಿಸ್ಟರನ್ನು ಜನ ಅಧಿಕಾರಕ್ಕೆ ಆರಿಸಿದ್ದಾರೆ.

ಅಮೇರಿಕಾದೊಂದಿಗೆ ನಿಕಟ ಮಿಲಿಟರಿ 'ಸಹಕಾರ'ದ ಈ ಅನಾಹುತಕಾರೀ ದಾರಿ ಬೇಡ

ಭಾರತವನ್ನು ರಕ್ಷಣಾ ಸಹಕಾರದ ಬಲೆಯೊಳಗೆ ಮೆಲ್ಲಮೆಲ್ಲನೆ ಪೂರ್ಣವಾಗಿ ಸಿಗಿಸಿಕೊಳ್ಳುವ ಉದ್ದೇಶವನ್ನು ಅಮೇರಿಕನ್ನರು ಮೌನವಾಗಿ ಈಡೇರಿಸಿಕೊಳ್ಳುತ್ತಿದ್ದಾರೆ. ಭಾರತದ ಭದ್ರತೆಯನ್ನು ನಿರ್ಲಕ್ಷಿಸಿ ನರಸಿಂಹರಾವ್ ಸರಕಾರ ತೋರಿಸುತ್ತಿರುವ ಆತುರದಿಂದಾಗಿ ಅವರು ತಮ್ಮ ಗುರಿಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. 1992ರಿಂದ ಭಾರತ ಸರಕಾರ ಕಿಕ್ ಲೈಟರ್ ಪ್ರಸ್ತಾವಗಳನ್ನು ಒಪ್ಪಿಕೊಳ್ಳುತ್ತಿದೆ. ಹಿಂದೆ ಶಾಂತಸಾಗರ ಪ್ರದೇಶದಲ್ಲಿ ಅಮೇರಿಕನ್ ಸೇನಾಧಿಪತಿಯಾಗಿದ್ದ ಕಿಕ್ ಲೈಟರ್ ಹೆಸರಿನಲ್ಲಿ ಈ ಪ್ರಸ್ತಾವಗಳನ್ನು ಮುಂದಿಡಲಾಗಿತ್ತು, ಕಳೆದ ಮೂರು ವರ್ಷಗಳಲ್ಲಿ ಮೊದಲು ಎರಡೂ ಭೂ ಸೇನೆಗಳ ಮಟ್ಟದಲ್ಲಿ ನಂತರ ಜಲಸೇನೆ ಹಾಗೂ ವಾಯು ಸೇನೆಗಳ ಮಟ್ಟದಲ್ಲೂ, ಜಂಟಿ ಸಂಚಾಲನಾ ಸಮಿತಿಗಳು ಏರ್ಪಟ್ಟಿವೆ.

ಇತ್ತೀಚೆಗೆ ಅಮೇರಿಕಾದ ಸಶಸ್ತ್ರ ಪಡೆಗಳ ಕೇಂದ್ರ ಕಛೇರಿ 'ಪೆಂಟಗನ್' ಹಾಗೂ ಅಮೇರಿಕಾದ ರಕ್ಷಣಾ ಇಲಾಖೆಯ ಅಧಿಕಾರಿಗಳು ಭಾರತಕ್ಕೆ ಭೇಟಿ ನೀಡಿದ್ದರು. ಆಗ ರಾಜಕೀಯ ವಲಯಗಳು ವಿಧಾನಸಭಾ ಚುನಾವಣೆ ಹಾಗೂ ಅದರ ರಾಜಕೀಯ ಪರಿಣಾಮಗಳ ಬಗ್ಗೆ ಗಮನ ಕೇಂದ್ರೀಕರಿಸಿದ್ದರಿಂದ ಈ ಭೇಟಿ ಯಾರ ಗಮನಕ್ಕೂ ಬರಲಿಲ್ಲ, ಅಮೇರಿಕಾದ ಸೇನೆಯಲ್ಲಿ ಶಾಂತಸಾಗರ ವಿಭಾಗದ ಸೇನಾಧಿಪತಿ ಅಡ್ಮಿರಲ್ ರಿಚರ್ಡ್ ಮಾಕೆ ಹಾಗೂ ರಕ್ಷಣಾ ಉಪಕಾರ್ಯದರ್ಶಿ ವಾಲ್ಟರ್ ಸ್ಲೋಕೊಂಬ್ ಭೇಟಿ ನೀಡಿದ್ದರು. ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ವಿಲಿಯಂ ಪೆರಿಯವರ ಭೇಟಿಗೆ ಸಿದ್ಧತೆಯಾಗಿ ನಡೆದ ಭೇಟಿಗಳು ಇವು. ಪೆರಿಯವರ ಭಾರತ ಭೇಟಿಗೆ ಬಹಳ ಮಹತ್ವ ನೀಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಅಮೇರಿಕನ್ ಭೂ ಸೇನೆ ಹಾಗೂ ಜಲಸೇನೆ ನಿಯಮಿತವಾಗಿ ಭಾರತೀಯ ಭೂ ಸೇನೆ ಹಾಗೂ ಜಲಸೇನೆಯೊಂದಿಗೆ ಜಂಟಿ ಕವಾಯಿತು ನಡೆಸಿವೆ. ಮಾಕೆಯವರ ಭೇಟಿಯ ನಂತರ ಎರಡೂ ದೇಶಗಳ ವಾಯು ಸೇನೆಗಳೂ ಜಂಟಿ ಕವಾಯತು ನಡೆಸುವ ನಿರೀಕ್ಷೆಯಿದೆ. 1962ರಲ್ಲಿ ಭಾರತ-ಚೀನಾ ವಿವಾದದ ಸಮಯದಲ್ಲಿ ಅಮೇರಿಕಾ 'ವಿಮಾನ ನೆರಳು' ನೀಡಿತ್ತು, ಅದರ ನಂತರ ಇದು ಮೊದಲ ಜಂಟಿ ಪ್ರಯತ್ನ.

ಆರ್ಥಿಕ ನೀತಿಗಳನ್ನು ನಿರ್ಧರಿಸುವಲ್ಲಿ ಅಮೇರಿಕಾದ ಪ್ರಾಬಲ್ಯದ ಪರಿಣಾಮ ಬೇರೆಲ್ಲಾ ರಂಗಗಳಲ್ಲೂ ಕಾಣಲಾರಂಭಿಸಿದೆ. ದೇಶದ ರಕ್ಷಣಾವಲಯ ಇದರಲ್ಲಿ ಮುಖ್ಯವಾದುದು. ಭಾರತದ ಸ್ವತಂತ್ರ ಪರಮಾಣು ಹಾಗೂ ಕ್ಷಿಪಣಿ ಸಾಮರ್ಥ್ಯವನ್ನು ತಡೆಗಟ್ಟುವುದು ಹಾಗೂ ತನ್ನ ಶಸ್ತ್ರಾಸ್ತ್ರಗಳಿಗೆ ಮಾರುಕಟ್ಟೆ ಪಡೆಯಲು ಅಮೇರಿಕಾ 'ನಿಕಟ ರಕ್ಷಣಾ ಸಹಕಾರ' ಬಯಸುತ್ತಿದೆ, ನರಸಿಂಹರಾವ್ ಸರಕಾರ ಅದಕ್ಕೆ ಆತುರದಿಂದ ಹೂಂಗುಟ್ಟುತ್ತಿದೆ. ಇದನ್ನು ಬಲವಾಗಿ ವಿರೋಧಿಸಬೇಕು ಎಂದಿದೆ ಸಿಪಿಐ(ಎಂ) ಕೇಂದ್ರ ಸಮಿತಿ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'

ಮಿಲಿಟರಿ ವಲಯದಲ್ಲಿ ರಾಜಕೀಯ ಸಂಬಂಧಗಳು

ಸ್ಲೋಕೋಂಬ್ ತನ್ನ ಭೇಟಿಯ ಕಾಲದಲ್ಲಿ ಎರಡು ಸಶಸ್ತ್ರ ಪಡೆಗಳ ನಡುವೆ ಮಾತ್ರವಲ್ಲ ಇದನ್ನೂ ಮೀರಿ ಎರಡು ದೇಶಗಳ ರಕ್ಷಣಾ ಇಲಾಖೆಗಳ ನಡುವೆ ನಿಯಮಿತ ಸಂಪರ್ಕಗಳನ್ನು ಬೆಳೆಸುವ ಬಗ್ಗೆ ಮಾತನಾಡಿದರು. ಸೇನಾಪಡೆಗಳ ನಡುವಿನ ಸಹಕಾರವನ್ನು ಇನ್ನೂ ಮೇಲಕ್ಕೆ ಒಯ್ಯುವ ಉದ್ದೇಶಕ್ಕೆ ಅಧಿಕೃತ ರೂಪಕೊಡಲು ಜನವರಿಯಲ್ಲಿ ಅಮೇರಿಕನ್ ರಕ್ಷಣಾ ಕಾರ್ಯದರ್ಶಿಯ ಭೇಟಿಯನ್ನು ಏರ್ಪಡಿಸಲಾಗಿದೆ. ಅಂದರೆ ಇದರರ್ಥ ಮಿಲಿಟರಿ ವಲಯದಲ್ಲಿ ನಿಕಟ ರಾಜಕೀಯ ಸಂಬಂಧಗಳನ್ನು ಏರ್ಪಡಿಸಲಾಗುವುದು ಎಂದು.

ಭಾರತವನ್ನು ಈ ರೀತಿ ರಕ್ಷಣಾ ಸಂಬಂಧಗಳಲ್ಲಿ ನಿಕಟ ಸೆಳೆಯಲು ಅಮೇರಿಕಾ ಎರಡು ಕಾರಣಗಳಿಗಾಗಿ ಪ್ರಯತ್ನಿಸುತ್ತಿದೆ. ಮೊದಲನೆಯದಾಗಿ, ಭಾರತದ ಪರಮಾಣು ಮತ್ತು ಕ್ಷಿಪಣಿ ಸಾಮರ್ಥ್ಯಕ್ಕೆ ತಡೆ ಹಾಕಲು. "ಅಣು ಪ್ರಸರಣಕ್ಕೆ ಪ್ರತಿಕ್ರಮ" ಎಂಬೊಂದು ಹೊಸ ಪರಿಕಲ್ಪನೆಯನ್ನು ಕ್ಲಿಂಟನ್ ಸರಕಾರ ಈ ಉದ್ದೇಶದಿಂದ ರೂಪಿಸಿದೆ. ಸ್ವತಂತ್ರ ಸಾಮರ್ಥ್ಯವುಳ್ಳ ಒಂದು ಪ್ರಾದೇಶಿಕ ಸೈನಿಕ ಶಕ್ತಿಯಾದ ಭಾರತದ ಈ ಪರಿಕಲ್ಪನೆಯ ಪ್ರಮುಖ ಗುರಿ. ಅಮೇರಿಕಾದ ಒತ್ತಡದಿಂದಾಗಿ ರಾವ್ ಸರಕಾರ 'ಪೃಥ್ವಿ' ಸಮೀಪಗಾಮಿ ಕ್ಷಿಪಣಿ ಹಾಗೂ 'ಅಗ್ನಿ' ದೂರಗಾಮಿ ಕ್ಷಿಪಣಿಗಳನ್ನು ಎಲ್ಲಿ ಸ್ಥಾಪಿಸಲಾಗುವುದು ಎಂಬ ಬಗ್ಗೆ ಇನ್ನೂ ಸ್ಪಷ್ಟ ಉತ್ತರ ನೀಡಿಲ್ಲ.

ಶಸ್ತ್ರಾಸ್ತ್ರ ಉದ್ದಿಮೆಯ ಲಾಭಕ್ಕಾಗಿ

ಎರಡನೆಯದಾಗಿ, ಸೋವಿಯತ್ ಒಕ್ಕೂಟ ಕಳಚಿ ಹಾಕಿದ ನಂತರ ಅಮೇರಿಕಾ ವಿಶ್ವಾ ಅತೀ ದೊಡ್ಡ ಶಸ್ತ್ರಾಸ್ತ್ರ ಮಾರಾಟಗಾರ ದೇಶ

ಪುಟ 8 ಕ್ಕೆ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಸರಕಾರೀ ಬೇಜವಾಬ್ದಾರಿಯನ್ನು ನೆನಪಿಸಿಕೊಟ್ಟ ಜವಳಿ ಕಾರ್ಮಿಕರ ಸಂಸತ್ -ಚಲೋ

ಎಂಟು ತಿಂಗಳ ಹಿಂದೆ ಭಾರತ ಸರಕಾರ ಹೊಸ ಕೈಗಾರಿಕಾ ನೀತಿಯ ಬಗ್ಗೆ ಸಮಾಲೋಚನೆ ಹಾಗೂ ನಿರ್ಣಯ ಕೈಗೊಳ್ಳಲೆಂದು ರಚಿಸಿದ್ದ ತ್ರಿಪಕ್ಷೀಯ ಸಮಿತಿಯಲ್ಲಿ ರಾಷ್ಟ್ರೀಯ ಜವಳಿ ನಿಗಮದ (ಎನ್.ಟಿ.ಸಿ.ಯ) ಗಿರಣಿಗಳ ಬಗ್ಗೆ ಒಂದು ಸರ್ವಸಮ್ಮತ ಒಪ್ಪಂದ ಏರ್ಪಟ್ಟಿತ್ತು. ಆದರೆ ಎಂಟು ತಿಂಗಳಾದರೂ ಅದಿನ್ನೂ ಜ್ಯಾರಿಗೆ ಬಂದಿಲ್ಲ. ಇದು ಸರಕಾರದ ದಕ್ಷತೆಯ ಸಂಕೇತವೋ ಅಥವಾ ಬಡಜನರ ವಿರುದ್ಧವಾದ ಬೇಜವಾಬ್ದಾರಿಯ ಪ್ರದರ್ಶನವೋ? ಇನ್ನೂ ಒಂದು ಸಂಗತಿಯೆಂದರೆ ದೇಶದ ಪ್ರಧಾನ ಮಂತ್ರಿಗಳಿಗೂ ತಮ್ಮದೇ ಸರಕಾರ ಭಾಗವಹಿಸಿದ್ದ ಒಂದು ಒಪ್ಪಂದದ ಬಗ್ಗೆ ಏನೂ ಗೊತ್ತಿಲ್ಲವಂತೆ.

ಡಿಸೆಂಬರ್ 15 ರಂದು ದೇಶಾದ್ಯಂತದಿಂದ ಕೊರೆಯುವ ಚಳಿಯನ್ನು ಎದುರಿಸಿ 10 ಸಾವಿರಕ್ಕೂ ಹೆಚ್ಚು ಜವಳಿ ಕಾರ್ಮಿಕರು ದೆಹಲಿಗೆ ಬಂದಾಗ ದೇಶದ ಸರಕಾರ ಹಾಗೂ ಪ್ರಧಾನ ಮಂತ್ರಿಗಳ ಬೇಜವಾಬ್ದಾರಿತನ ಅವರ ಅರಿವಿಗೆ ಬಂತು.

ಎನ್.ಟಿ.ಸಿ. ಗಿರಣಿಗಳನ್ನು ಕುರಿತಂತೆ ಎಂಟಂಶಗಳ ಸರ್ವಸಮ್ಮತ ಒಪ್ಪಂದ ಜ್ಯಾರಿಯೂ ಸೇರಿದಂತೆ ಆರು ಬೇಡಿಕೆಗಳನ್ನು ಮುಂದಿಟ್ಟು ಜವಳಿ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ ನೀಡಿದ ಕರೆಗೆ ಓಗೊಟ್ಟು ಇವರು ದಿಲ್ಲಿಗೆ ಬಂದಿದ್ದರು. ಇಂಟಕ್, ಎ.ಐ.ಟಿ.ಯು.ಸಿ, ಸಿ.ಐ.ಟಿ.ಯು, ಹೆಚ್.ಎಂ.ಎಸ್. ಬಿ.ಎಂ.ಎಸ್, ಹಾಗೂ ಎನ್.ಎಲ್.ಬಿ ಈ ಜಂಟಿ ಕ್ರಿಯಾ ಸಮಿತಿಯನ್ನು ರಚಿಸಿಕೊಂಡಿವೆ. ಡಿಸೆಂಬರ್ 15 ರ ರ್‍ಯಾಲಿಯಲ್ಲಿ ಯು.ಟಿ.ಯು.ಸಿ. ಕೂಡಾ ಭಾಗವಹಿಸಿತ್ತು.

ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ತಮಿಳುನಾಡು, ಕರ್ನಾಟಕ, ಆಂಧ್ರ ಪ್ರದೇಶ, ಕೇರಳ, ಪಶ್ಚಿಮ ಬಂಗಾಳ, ಒರಿಸ್ಸಾ, ಉತ್ತರ ಪ್ರದೇಶ,ಪಂಜಾಬ್, ದಿಲ್ಲಿ ಹಾಗೂ ಹರ್‍ಯಾಣದ ಜವಳಿ ಕಾರ್ಮಿಕರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಅಸ್ಸಾಂ ನಿಂದಲೂ ಕೆಲವು ಕಾರ್ಮಿಕರು ಬಂದಿದ್ದರು. ಮಹಿಳಾ ಕಾರ್ಮಿಕರು ಅಪಾರ ಸಂಖ್ಯೆಯಲ್ಲಿದ್ದರು.

ಸಿಐಟಿಯುನ ಕುಡುಗೋಲು-ಸುತ್ತಿಗೆಯಿರುವ ಕೆಂಬಾವುಟ, ಎ.ಐ.ಟಿ.ಯು.ಸಿ. ಕೆಂಬಾವುಟಗಳೊಂದಿಗೆ, ಇಂಟಕ್‌ನ ತ್ರಿವರ್ಣ, ಬಿ.ಎಂ.ಎಸ್. ಕೇಸರಿ ಬಾವುಟಗಳು, ಗಾಂಧೀವಾದಿ ಕಾರ್ಮಿಕ ಸಂಘಟನೆಯಾದ ಮಜ್ದೂರ್ ಮಹಾಜನ (ಎನ್.ಎಲ್.ಓ.)ನ ಗಾಂಧಿ ಟೊಪ್ಪಿಗೆಗಳು ಒಟ್ಟಾಗಿ ಐ.ಎಂ.ಎಫ್.-ವಿಶ್ವ ಬ್ಯಾಂಕ್- ಗ್ಯಾಟ್ ಗಳ ವಿರುದ್ಧ, ನರಸಿಂಹರಾವ್ ಸರಕಾರದ ಜನ-ವಿರೋಧಿ, ಕಾರ್ಮಿಕ-ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಹಾಕುತ್ತಾ ಸಾಗಿದ್ದ ಮೆರವಣಿಗೆಯ ದೃಶ್ಯ ಕಾರ್ಮಿಕ ಐಕ್ಯತೆಯ ಅಪೂರ್ವ ದೃಶ್ಯಗಳಲ್ಲೊಂದಾಗಿತ್ತು. ಐದು ಕಿ.ಮೀ. ದೂರದ ಮೆರವಣಿಗೆಯ ನಂತರ ಸಾರ್ವಜನಿಕ ಸಭೆಯ ಮೊದಲು ಜಂಟಿ ಕ್ರಿಯಾ ಸಮಿತಿಯ ನಿಯೋಗವೊಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಆರು ಬೇಡಿಕೆಗಳನ್ನು ವಿವರಿಸಿತು. ಈ ನಿಯೋಗದಲ್ಲಿ ಸಿಐಟಿಯು ಪರವಾಗಿ ಪಿ.ಕೆ. ಗಂಗೂಲಿ, ವಿ.ಜೆ.ಕೆ. ನಾಯರ್ ಹಾಗೂ ಸುಭಾಷಿಣಿ ಅಲಿ ಇದ್ದರು. ಅಲ್ಲದೆ ಹಲವು ಸಂಸತ್ ಸದಸ್ಯರೂ ಜತೆಗಿದ್ದರು. ಈ ಸಮಯದಲ್ಲೇ ಪ್ರಧಾನ ಮಂತ್ರಿಗಳ, ಅವರ ಸರ್ಕಾರದ ಬೇಜವಾಬ್ದಾರಿ ಎಂತಹ ಮಟ್ಟಕ್ಕೆ ಹೋಗಿದೆ ಎಂದು ತಿಳಿದು ಬಂತು. ಏಕೆಂದರೆ ಜವಳಿ ಕಾರ್ಮಿಕರ ಪ್ರತಿನಿಧಿಗಳ ಯಾವ ಪ್ರಶ್ನೆಗೂ ಪ್ರಧಾನ ಮಂತ್ರಿಗಳ ಬಳಿ ಉತ್ತರವೇ ಇರಲಿಲ್ಲ. ಎನ್.ಟಿ.ಸಿ. ಗಿರಣಿಗಳ ಬಗ್ಗೆ ಒಪ್ಪಂದದ ಬಗ್ಗೆ ಗೊತ್ತೆ ಇಲ್ಲವಂತೆ!

ಈ "ಅಜ್ಞಾನ"ವನ್ನು ಕಾರ್ಮಿಕರು ಅರ್ಥ ಮಾಡಿಕೊಳ್ಳಬಲ್ಲರು. ಏಕೆಂದರೆ ಈ ಎಂಟಂಶಗಳ ಸರ್ವಸಮ್ಮತ ಒಪ್ಪಂದ ಈಗಿನ ಐ.ಎಂ.ಎಫ್. ನಿರ್ದೇಶಿತ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳ ಬುಡಕ್ಕೇ ಏಟು ನೀಡಿದ್ದ ಒಪ್ಪಂದ. "ಖಾಸಗೀಕರಣ ಇಲ್ಲ", "ಕ್ಲೋಶರ್ ಇಲ್ಲ" ಹಾಗೂ ರಿಟ್ರೆಂಚ್‌ಮೆಂಟ್ ಇಲ್ಲ" ಎಂಬುದು ಈ ಒಪ್ಪಂದದ ಮೂರು ಪ್ರಮುಖ ಅಂಶ-ವಿಶ್ವಬ್ಯಾಂಕ್ -ಐ.ಎಂ.ಎಫ್. ಬಯಸಿದಂತೆ ಸರಕಾರ ಖಾಸಗೀಕರಣ, ರಿಟ್ರೆಂಚ್‌ಮೆಂಟ್‌ನ ದಾರಿ ಹಿಡಿದಿರುವಾಗ ಬಿ.ಐ.ಎಫ್.ಆರ್.ಗೆ ಉದ್ದಿಮೆಗಳನ್ನು ಮುಚ್ಚಿಸುವ ಪೂರ್ಣ ಅಧಿಕಾರ ನೀಡಿರುವ ನೀತಿಗಳನ್ನು ಅನುಸರಿಸಿರುವಾಗ ಇಂತಹ ಒಪ್ಪಂದ ಆಗಿರುವುದು ಐ.ಎಂ.ಎಫ್‌ನ ಅಣತಿಯಂತೆ ಕೆಲಸ ಮಾಡುವ ಹಣಕಾಸು ಮಂತ್ರಿಗಳಿಗೆ ಕಿರಿಕಿರಿ ಯುಂಟು ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಇಷ್ಟೇ ಅಲ್ಲ, 1974ರಲ್ಲಿ ಎನ್.ಟಿ.ಸಿ. ಯನ್ನು ರಚಿಸಿದಾಗ ಭಾರತ ಸರಕಾರ ತಾನು ವಹಿಸಿಕೊಂಡ 15 ಗಿರಣಿಗಳನ್ನು (ಮುಂಬೈಯ 13 ಹಾಗೂ ಕಾನ್‌ಪುರದ 2 ಗಿರಣಿಗಳು) ರಾಷ್ಟ್ರೀಕರಿಸಿರಲಿಲ್ಲ. ಈಗ ಕಾರ್ಮಿಕ ಸಂಘಟನೆಗಳು ಸರಕಾರ ಈ 15 ಗಿರಣಿಗಳನ್ನು ರಾಷ್ಟ್ರೀಕರಿಸಲು ಒಪ್ಪುವಂತೆ ಮಾಡಿದವು. ಇಲ್ಲವಾದರೆ ಈ ಗಿರಣಿಗಳನ್ನು ಆಧುನಿಕರಿಸಿ ಖಾಸಗಿಯವರಿಗೆ ನೀಡುವ ಹುನ್ನಾರ ಇತ್ತು. ಇದು ವಿಫಲವಾದದ್ದು ಈ ಒಪ್ಪಂದದ ಕೇಂದ್ರ ಮಂತ್ರಿ ಮಂಡಳದ ಒಪ್ಪಿಗೆ ಇನ್ನೂ ಪಡೆಯದಿರಲು ಕಾರಣ. ಕಾನೂನು ಇಲಾಖೆ ಈ 15ಗಿರಣಿಗಳ ರಾಷ್ಟ್ರೀಕರಣ ಹಾಗೂ ಆಧುನೀಕರಣ ಮತ್ತು 'ಖಾಸಗೀಕರಣ ಇಲ್ಲ' ಎಂಬ ಅಂಶಗಳ ಒಪ್ಪಿಗೆ ನೀಡಿದ್ದರೂ ಹಣಕಾಸು ಮಂತ್ರಿಗಳು ಈ ಎರಡು ಅಂಶಗಳ ಬಗ್ಗೆ ಆಕ್ಷೇಪ ಎತ್ತಿದ್ದರು ಎಂದು ತಿಳಿದು ಬಂದಿದೆ. ಆದರೆ ಜಂಟಿ ಕ್ರಿಯಾ ಸಮಿತಿಯ ನಿಯೋಗ ಪ್ರಧಾನಿಗಳಿಗೆ ಮನವಿ ಸಲ್ಲಿಸಿ ವಿವರಿಸಿದ ಮೇಲೆ ಅದೇ ದಿನ ಸಂಜೆ ಜವಳಿ ಮಂತ್ರಿಗಳನ್ನು ನಿಯೋಗ ಭೇಟಿಯಾದಾಗ ಈ ಎರಡು ಅಂಶಗಳನ್ನು ಕೇಂದ್ರ ಮಂತ್ರಿಮಂಡಲ ಅನುಮೋದನೆಗೆ ನೀಡಿರುವುದಾಗಿ ಪ್ರಧಾನಿಗಳು ಭರವಸೆ ನೀಡಿದ್ದಾರೆಂದು ಜವಳಿ ಮಂತ್ರಿಗಳು ತಿಳಿಸಿದರು.

ಜಂಟಿ ಕ್ರಿಯಾ ಸಮಿತಿಯ ನಿಯೋಗ ಪ್ರಧಾನಿಗಳೊಡನೆ ಈ ಒಪ್ಪಂದದ ಬಗ್ಗೆಯಲ್ಲದೆ ಜವಳಿ ಕಾರ್ಮಿಕರ ಮುಖ್ಯವಾಗಿ ಪವರ್ ಲೂಮ್ ಹಾಗೂ ಕೈಮಗ್ಗ ಕಾರ್ಮಿಕರ ದುಸ್ಥಿತಿಯ ಬಗ್ಗೆ ಈ ವಲಯದಲ್ಲಿ ಕನಿಷ್ಠ ಕೂಲಿ, ಸಮಾಜಿಕ ಕಾನೂನುಗಳು ಹಾಗೂ ಕಾರ್ಮಿಕ ಶಾಸನಗಳ ಪಾಲನೆಯಾಗದಿರುವ ಬಗ್ಗೆ, ಸಂಬಳ ಕೊಡುವುದರಲ್ಲಿ ಅನಿಯಮಿತತೆ, ಹೆಚ್ಚೆಚ್ಚು ಗಿರಣಿಗಳು ರೋಗಗ್ರಸ್ತವಾಗಿ ಮುಚ್ಚುತ್ತಿರುವುದರ ಬಗ್ಗೆ ವಿವರಿಸಿತು.

ಪ್ರಧಾನಿಗಳ, ಜವಳಿ ಮಂತ್ರಿಗಳ ಭರವಸೆಯನ್ನೇ ನಂಬಿ ಕೂರುವಂತಿಲ್ಲ ಎಂದು ಅರಿತಿರುವ ಜಂಟಿ ಕ್ರಿಯಾ ಸಮಿತಿ ಡಿಸೆಂಬರ್ 13ರ ಸಂಜೆಯೇ ತುರ್ತು ಸಭೆ ನಡೆಸಿತು. ಜನವರಿ 7 ರಂದು ಮುಂಬೈಯಲ್ಲಿ ನಡೆಯಲಿರುವ ಜಂಟಿ ಕ್ರಿಯಾ ಸಮಿತಿಯ ವಿಸ್ತೃತ ಸಭೆಯಲ್ಲಿ ಮುಂದಿನ ಕಾರ್ಯಾಚರಣೆಗಳ ಕಾರ್ಯಕ್ರಮವನ್ನು ರೂಪಿಸಲಾಗುವುದು ಎಂದು ತಿಳಿದು ಬಂದಿದೆ.

ಅನಾಹುತಕಾರಿ ದಾರಿ ಬೇಡ......

ಪುಟ 7 ರಿಂದ

ವಾಗಿ ಬಿಟ್ಟಿದೆ. ಶೀತ ಸಮರ ಮುಗಿಯಿತು ಎಂದೆಲ್ಲಾ ಹೇಳಲಾಗುತ್ತಿದೆ. ಆದರೆ ಈ ಮುಖವಾಡದ ಹಿಂದಿರುವ ವಾಸ್ತವ ಸಂಗತಿಯೆಂದರೆ ಅಮೇರಿಕಾ ಹಿಂದೆಂದಿಗಿಂತಲೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ರಫ್ತು ಮಾಡುತ್ತಿದೆ. 1993ರ ಒಂದು ವರ್ಷದಲ್ಲೇ ಅದು 33 ಶತಕೋಟಿ ಡಾಲರುಗಳಷ್ಟು ರಫ್ತು ವ್ಯಾಪಾರ ಈ ಶಸ್ತ್ರಾಸ್ತ್ರಗಳಿಂದ ಮಾಡಿದೆ. ಅಮೇರಿಕಾದ ರಕ್ಷಣಾ ಖರ್ಚಿನಲ್ಲಿ ಕಡಿತದಿಂದಾಗಿ ಅಲ್ಲಿನ ಬಹುರಾಷ್ಟ್ರೀಯ ಶಸ್ತ್ರಾಸ್ತ್ರ ತಯಾರಕ ಕಂಪೆನಿಗಳು ರಫ್ತುಗಳನ್ನೇ ಅವಲಂಬಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ "ಪೆಂಟಗನ್" ಮತ್ತು ಅಮೇರಿಕಾದ ಮಿಲಿಟರಿ ಕೈಗಾರಿಕಾಕೂಟ ಭಾರತಕ್ಕೆ ಹೆಚ್ಚೆಚ್ಚು ಶಸ್ತ್ರಾಸ್ತ್ರಗಳನ್ನು ಮಾರಬಯಸುತ್ತಿದೆ.

ಭಾರತವನ್ನು ತನ್ನ ಜಾಗತಿಕ ಸಮರ ಕಕ್ಷೆಯಲ್ಲಿ ಸೆಳೆದು, ಭಾರತದ ಪರಮಾಣು ಹಾಗೂ ಕ್ಷಿಪಣಿ ಸಾಮರ್ಥ್ಯವನ್ನು ಕುಂಠಿತಗೊಳಿಸಲಾಗುತ್ತಿದೆ ಎಂದು ಖಾತ್ರಿ ಮಾಡಿಕೊಂಡು ನಂತರ ಭಾರತದ ಮಾರುಕಟ್ಟೆಯನ್ನು ವಿದೇಶೀ ಶಸ್ತ್ರಾಸ್ತ್ರಗಳಿಗೆ ತೆರೆಯುವಂತೆ ಮಾಡಬೇಕೆಂದು ಅಮೇರಿಕನ್ ಆಡಳಿತದ ಆಶಯ. "ನಾವು ಜಾಗರೂಕತೆಯಿಂದ ಸ್ವಲ್ಪ-ಸ್ವಲ್ಪ ರಕ್ಷಣಾ ಮಾರಾಟ ಹೆಚ್ಚಿಸುತ್ತಿದ್ದೇವೆ ಹಾಗೂ ಜಂಟಿ ತಂತ್ರಜ್ಞಾನ ಅಭಿವೃದ್ಧಿಯ ಅವಕಾಶ ಹುಡುಕುತ್ತಿದ್ದೇವೆ" ಎಂದು ಭಾರತದಲ್ಲಿ ಅಮೇರಿಕಾದ ರಾಯಭಾರಿ ಹೇಳಿರುವುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು.

ಅರ್ಥಹೀನ 'ಸಹಕಾರ'

ಇದು ಈಗಾಗಲೇ ಭಾರತದ ರಕ್ಷಣಾ ಹಾಗೂ ಮಿಲಿಟರಿ ವ್ಯವಸ್ಥೆಯಲ್ಲಿ ಅಮೇರಿಕಾ ಎಷ್ಟು ಆಳವಾಗಿ ಒಳಹೊಕ್ಕಿದೆ ಎಂಬುದರತ್ತ ಬೊಟ್ಟು ಮಾಡುತ್ತದೆ. ಸ್ವಾತಂತ್ರ್ಯಾನಂತರ ಯಾವ ದೇಶದೊಂದಿಗೂ ಭಾರತ ಇಂತಹ ನಿಕಟ ಮಿಲಿಟರಿ ಸಂಬಂಧಗಳನ್ನು ಏರ್ಪಡಿಸಿಕೊಂಡಿರಲಿಲ್ಲ.ರಾವ್ ಸರಕಾರ ಈಗ ಅದಕ್ಕೆ ಅವಕಾಶ ನೀಡಿದೆ. ಸೋವಿಯತ್ ಒಕ್ಕೂಟದೊಂದಿಗೆ ಕೂಡಾ ನಮ್ಮ ರಕ್ಷಣಾ ಸಹಕಾರ ಮಿಲಿಟರಿ ಉಪಕರಣಗಳನ್ನು ಖರೀದಿಸುವುದು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಸಿಬ್ಬಂದಿ ತರಬೇತಿಯ ಮಟ್ಟಿಗೇ ಸೀಮಿತವಾಗಿತ್ತು. ಈಗ ಆರ್ಥಿಕ ನೀತಿ-ನಿರ್ಧಾರದಲ್ಲಿ ಅಮೇರಿಕಾದ ಪ್ರಾಬಲ್ಯ ಪರಿಣಾಮ ಬೇರೆಲ್ಲಾ ರಂಗಗಳಲ್ಲೂ ಕಾಣುತ್ತಿದೆ. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಸರತ್ತು ನಡೆಸುವ ಅಮೇರಿಕಾ ತಂತ್ರ ಹಾಗೂ ಪಾಕಿಸ್ತಾನದೊಂದಿಗೆ ಅಮೇರಿಕ ಮಿಲಿಟರಿ ಸಂಬಂಧಗಳ ಹಿನ್ನೆಲೆಯಲ್ಲಿ ಅಮೇರಿಕಾದೊಂದಿಗೆ ರಕ್ಷಣಾ ಸಹಕಾರವನ್ನು ಹೆಚ್ಚಿಸುವ ಪ್ರಸ್ತಾಪ ಭಾರತದ ರಕ್ಷಣಾ ಹಿತಾಸಕ್ತಿಗಳಿಗೆ ಮಾರಕ. ಹೊಸ ಅಂತರರಾಷ್ಟ್ರೀಯ ಸನ್ನಿವೇಶದಲ್ಲಿ ಸಾಮಾನ್ಯ ವಿನಿಮಯ ಹಾಗೂ ಸಮಾಲೋಚನೆಗಳೇ ಸಾಕೆಂಬ ಸನ್ನಿವೇಶ ಇರುವಾಗ ನಿಕಟ ಮಿಲಿಟರಿ ಸಹಕಾರಕ್ಕೆ ಪ್ರಯತ್ನಿಸುವಲ್ಲಿ ಏನೂ ಅರ್ಥವಿಲ್ಲ.

ರಾವ್ ಸರಕಾರ ಈ ಅನಾಹುತಕಾರಿ ದಾರಿ ಬಿಡಬೇಕು ಎಂದು ಭಾರತದ ಸ್ವತಂತ್ರ ವಿದೇಶಾಂಗ ನೀತಿ ಹಾಗೂ ಸಾರ್ವಭೌಮತೆಗೆ ಒತ್ತು ನೀಡುವ ಎಲ್ಲಾ ರಾಜಕೀಯ ಶಕ್ತಿಗಳು ಹಾಗೂ ನಾಗರಿಕರು ಒಂದು ಬಲವಾದ ಒತ್ತಾಯ ಹಾಕಬೇಕು.

ಕಳೆದ ವಾರ

- ಕೆ.ವಿ

ಕೊನೆಗೂ ಕಳಂಕಿತರಲ್ಲಿ ಮೂವರ ನಿರ್ಗಮನ, ಅವರ ಬೆನ್ನ ಹಿಂದೆಯೇ ಅರ್ಜುನ್ ಸಿಂಗ್ ರಾಜೀನಾಮೆ ಪತ್ರಿಕೆಗಳ ಮುಖಪುಟಗಳ ಸಂಪಾದಕೀಯಗಳನ್ನು ಆವರಿಸಿದವು. ಕರ್ನಾಟಕದಲ್ಲಿ ಜನತಾದಳ ಸರ್ಕಾರದ ಆಡಳಿತ ಆರಂಭವಾಯಿತು. ಹೊಸ ವಿಧಾನಸಭೆ ಅಸ್ತಿತ್ವಕ್ಕೆ ಬಂತು. ಈ ನಡುವೆ ಮೃತ್ಯುವಿನೊಂದಿಗೆ ಹಲವು ದಿನಗಳ ಕಾಲ ಸೆಣಸಿದ ಮಾಜಿ ರಾಷ್ಟ್ರಪತಿ ಜೈಲ್ ಸಿಂಗ್ ನಿಧನದ ಸುದ್ದಿಯೂ ಬಂತು.

ಕೊನೆಗೂ ಅನಿವಾರ್ಯವಾಯ್ತು

"ಕಳಂಕಿತ ಸಚಿವರನ್ನು ಸಂಪುಟದಿಂದ ಕೈಬಿಡುವುದು ಪ್ರಧಾನಿ ನರಸಿಂಹರಾವ್‌ಗೆ ಅನಿವಾರ್ಯವೇ ಆಗಿತ್ತು, ಆದರೆ ಈ ಕ್ರಮಕ್ಕಾಗಿ ನರಸಿಂಹರಾವ್ ಶಭಾಸ್ ಪಡೆಯುವುದು ಮಾತ್ರ ಸಾಧ್ಯವಿಲ್ಲ" ಎಂದು **ಪ್ರಜಾವಾಣಿ** ಹೇಳಿದೆ (ಡಿ.24)

ಈ ಕ್ರಮದ ವಿಳಂಬದಿಂದಾಗಿ "ಅವರ ನಿರ್ಗಮನದಿಂದ ಪಕ್ಷದ ಹಾಗೂ ಅದರ ಮುಖಂಡತ್ವದ ಬಿಂಬ ಮಾತ್ರ ಉತ್ತಮಗೊಂಡಿಲ್ಲ" ಎಂದು **ಟೈಂಸ್ ಆಫ್ ಇಂಡಿಯಾ** (ಡಿ.24) ಕೂಡಾ ಅಭಿಪ್ರಾಯಪಟ್ಟಿದೆ.

ಚುನಾವಣೆಯಲ್ಲಿ ಮಣ್ಣು ಮುಕ್ಕಿಲ್ಲದಿದ್ದರೆ ಈ ಮೂವರು 'ದೇಶದ ಸೇವೆಯಲ್ಲೇ' ಮುಂದುವರಿಯುತ್ತಿದ್ದರು, ಅವರಲ್ಲೊಬ್ಬರು ತಮ್ಮ ಹೊಲಸು ಬಾಯಿ ತೆರೆಯುತ್ತಲೇ ಇರುತ್ತಿದ್ದರು ಎಂದು ಈ ಸಂಪಾದಕೀಯ ಹೇಳಿದೆ.

"ಕಳಂಕಿತ ಸಚಿವರ ರಾಜೀನಾಮೆ ಪಡೆಯುವುದು ಅವರಿಗೆ ತಕ್ಕ ಶಿಕ್ಷೆಯೆಂದು ಭಾವಿಸಲಾಗದು.... ಆರೋಪಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿ ಅವರಿಗೆ ಸೂಕ್ತ ದಂಡನೆ ವಿಧಿಸುವುದೊಂದೇ ಭ್ರಷ್ಟಾಚಾರದಿಂದ ಕಲುಷಿತವಾದ ರಾಜಕಾರಣಕ್ಕೆ ಕನಿಷ್ಠ ಒಂದು ಚಿಕ್ಕ ಚುಚ್ಚುಮದ್ದಾದರೂ ಆದೀತು" ಎಂದು ಪ್ರಜಾವಾಣಿ(ಡಿ.24) ಅಭಿಪ್ರಾಯ ಪಟ್ಟಿದೆ.

"ಈ ಕಳಂಕಿತರಿಗೆ ತಮ್ಮನ್ನು ಯಾರೂ ಮುಟ್ಟಲು ಸಾಧ್ಯವಿಲ್ಲವೆಂಬ ಅಹಂಭಾವ ಹೇಗೆ ಬಂತು" ಎಂಬುದು 'ಇನ್ನೂ ಬಯಲಾಗದ ರಹಸ್ಯ' ಎಂದು **ಟೈಂಸ್ ಆಫ್ ಇಂಡಿಯಾ** ಹೇಳಿರುವುದನ್ನು ಒಪ್ಪದಿರಲು ಸಾಧ್ಯವಿಲ್ಲ.

★★★★★★★

ಅರ್ಜುನ್ ಸಿಂಗ್ ರಾಜೀನಾಮೆ ಕಾಂಗ್ರೆಸನ್ನು ಉಳಿಸಬಲ್ಲುದೇ?

"ಕೇಂದ್ರ ಸರಕಾರ ಎದುರಿಸುತ್ತಿರುವ ಅತ್ಯಂತ ನಾಜೂಕಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡಿದಾಗ ಅರ್ಜುನ್ ಸಿಂಗ್ ರಾಜೀನಾಮೆ ರಾಜಕೀಯ ಕಂಪನಗಳನ್ನು ಉಂಟುಮಾಡದೆ ಇರದು ಎನ್ನುವುದು ನಿಜ" ಎಂದು **ಪ್ರಜಾವಾಣಿ** (ಡಿ. 26) ಹೇಳಿದರೆ **"ಅರ್ಜುನ್ ಸಿಂಗ್ ತಮ್ಮ ಕುರ್ತೇಟನಿಂದ ಕಾಂಗ್ರೆಸ್ಸಿನಲ್ಲಿನ ಒಳಜಗಳದ ತೀವ್ರತೆಯನ್ನು ಹೆಚ್ಚಿಸಿರುವುದು ನಿಜ"** ಎಂದು **ಕನ್ನಡ ಪ್ರಭ**(ಡಿ. 25) ಹೇಳಿದೆ. ಆ ಒಳಜಗಳದಲ್ಲಿ ಯಾರೂ ಗೆದ್ದರೂ ಅವರ ದಾರಿ ಸುಗಮವಾಗಲಿಕ್ಕಿಲ್ಲ ಎಂದೂ ಅದು ಭಾವಿಸುತ್ತದೆ.

"ಕಾಂಗ್ರೆಸ್ ಪಕ್ಷವನ್ನು ಜನ ತಿರಸ್ಕರಿಸಲಾರಂಭಿಸಿದುದಕ್ಕೆ ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಅಯೋಧ್ಯೆ ದುರಂತ ಹಾಗೂ ಪ್ರಸಕ್ತ ಆರ್ಥಿಕ ನೀತಿ ಕಾರಣವೆಂದೇ ಅವರು ನುಡಿದಿರುವರು. ಸರ್ಕಾರದ ವಿರುದ್ಧ ಆರೋಪ ಪಟ್ಟಿಯನ್ನೇ ಅರ್ಜುನ್ ಸಿಂಗ್ ಸಲ್ಲಿಸಿದ್ದಾರೆಂದರೂ ತಪ್ಪಾಗದು" ಎಂದು **ಸಂಯುಕ್ತ ಕರ್ನಾಟಕ** (ಡಿ.27)ದ ಅಭಿಪ್ರಾಯ.

ಇಂಡಿಯನ್ ಎಕ್ಸ್ ಪ್ರೆಸ್(ಡಿ.26) ಕೂಡಾ ಅವರ ರಾಜೀನಾಮೆ ಪತ್ರ ಪ್ರತಿಪಕ್ಷಗಳು ಸರಕಾರದ ಬಗ್ಗೆ ಮಾಡಿರುವ ಟೀಕೆಗಳ ಸಾರಾಂಶವಿದ್ದಂತಿದೆ ಎನ್ನುತ್ತಾ "ಒಂದೇ ವ್ಯತ್ಯಾಸವೆಂದರೆ ಹೀಗೆ ಸರಕಾರವನ್ನು ಟೀಕಿಸಿ ನಂತರ ಅದರಲ್ಲಿ ಭರವಸೆಯಿಡಿ ಎಂದು ವಿರೋಧ ಪಕ್ಷಗಳು ಹೇಳುವುದಿಲ್ಲ. ಆದರೆ ಅರ್ಜುನ್ ಸಿಂಗ್ ಹೇಳುತ್ತಾರೆ" ಎಂದಿದೆ.

ಇದಕ್ಕೆ ಮೊದಲು ಅರ್ಜುನ್ ಸಿಂಗ್‌ರ ರಾಜೀನಾಮೆ ಬೆದರಿಕೆಯ ಬಗ್ಗೆ ಬರೆಯುತ್ತಾ 'ಕಳಂಕಿತ ಮಂತ್ರಿಗಳ ಬಗ್ಗೆ ಪ್ರಧಾನ ಮಂತ್ರಿಗಳ ಅಸಹಾಯಕತೆ ಬಗ್ಗೆ ಸಿಟ್ಟು ತೋರುತ್ತಾ ಅನಂತರ ಬೊಫೋರ್ಸ್ ಗಾಥೆಯಲ್ಲಿ ಸಿಲುಕಿದವರನ್ನು ಸಹಿಸಿಕೊಳ್ಳುವ ಪ್ರಯತ್ನ ಸಾಧುವಲ್ಲ" ಎಂದು ಆ ಪತ್ರಿಕೆಯು ಇನ್ನೊಂದು ಸಂಪಾದಕೀಯ (ಡಿ. 23) ಅಭಿಪ್ರಾಯಪಟ್ಟಿತ್ತು.

"ಅರ್ಜುನ್ ಸಿಂಗ್‌ರ ಸವಾಲಿನಲ್ಲಿ 1989ರಲ್ಲಿ ವಿ.ಪಿ.ಸಿಂಗ್‌ರ ಸವಾಲಿನಲ್ಲಿದ್ದ ನೈತಿಕ ಭಾವನೆಯ ಅಂಶ ಇಲ್ಲ. ಅರ್ಜುನ್‌ಸಿಂಗ್ ಪ್ರತಿಷ್ಠೆ ವಿ.ಪಿ.ಸಿಂಗ್‌ರಂತಿಲ್ಲ" ಎಂದು ಟೈಂಸ್ ಆಫ್ ಇಂಡಿಯಾ (ಡಿ.26) ಕೂಡಾ ಅಭಿಪ್ರಾಯಪಟ್ಟಿದೆ.

★★★★★★★

ಕೋಮುವಾದಿಗಳ ಬಗ್ಗೆ ಮುನ್ನೆಚ್ಚರಿಕೆ ಬೇಕೆಂಬ ಅರಿವು

ಕಳೆದ ಅಕ್ಟೋಬರ್‌ನಲ್ಲಿ ನಡೆದ ಉರ್ದು ವಾರ್ತೆ ವಿರೋಧಿ ಗಲಭೆ, ಹಿಂಸಾಚಾರಗಳ ಹಿಂದೆ ಮೂಲಭೂತವಾದಿ ಶಕ್ತಿಗಳ ಕೈವಾಡವಿದೆ ಎಂದೂ ಈ ಚಳುವಳಿ ಕೋಮುಬಣ್ಣ ಪಡೆದು ಗಲಭೆಗಳು ಸಿಡಿಯಲು ಹಿಂದೂ ಜಾಗರಣ ವೇದಿಕೆ, ಬಿಜೆಪಿ ಹಾಗೂ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಮುಂತಾದ ಶಕ್ತಿಗಳೇ ಕಾರಣ ಎಂದು ಪೀಪಲ್ಸ್ ಡೆಮಾಕ್ರಟಿಕ್ ಫೋರಂ ಮತ್ತು ಖ್ಯಾತ ಸಮಾಜ ವಿಜ್ಞಾನಿ ಅಸ್ಗರ್ ಅಲಿ ಇಂಜಿನಿಯರ್ ನೇತೃತ್ವದ 'ಸೆಂಟರ್ ಫಾರ್ ಸ್ಟಡಿ ಸೊಸೈಟಿ ಅಂಡ್ ಸೆಕ್ಯುಲರಿಸಂ ವೇದಿಕೆ ನಡೆಸಿದ ತನಿಖೆಗಳೆರಡೂ ಖಚಿತ ಮಾಡಿವೆ.

ಈ ಬಗ್ಗೆ ಸಂಪಾದಕೀಯ ಟಿಪ್ಪಣಿ ಮಾಡುತ್ತಾ ಹಿಂದೆ ರಾಮನಗರ ಗಲಭೆಗಳಲ್ಲೂ ಇಂತಹುದೇ ಶಕ್ತಿಗಳೇ ಕಾರಣ ಎಂದು ನ್ಯಾಯಾಂಗ ತನಿಖೆಯಿಂದ ತಿಳಿದು ಬಂದದನ್ನು ನೆನಪಿಸುತ್ತಾ ಪ್ರಜಾವಾಣಿ (ಡಿ. 27) "ಕೋಮುವಾದಿ ಶಕ್ತಿಗಳ ಚಟುವಟಿಕೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಇನ್ನಾದರೂ ಸಾಧ್ಯವಾಗಬೇಕು" ಎಂದಿದೆ. "ಭಾಷಾ ಚಳುವಳಿ ಪ್ರಗತಿವಾದಿಯಾಗಿರಬೇಕು ಹಾಗೂ ಜಾತ್ಯತೀತ ಸ್ವರೂಪ ಪಡೆದಿರಬೇಕೆಂಬ ಸಲಹೆಯನ್ನು ಭಾಷಾ ಚಳುವಳಿ ನಾಯಕರು ಗಂಭೀರವಾಗಿ ಪರಿಗಣಿಸಬೇಕು" ಎಂದೂ ಅದು ಸಲಹೆ ಮಾಡಿದೆ.

ಕರ್ನಾಟಕದಲ್ಲಿ ಬಿಜೆಪಿಗೆ ಇಂತಹ ರಾಜಕೀಯದಿಂದ ಬಹುಶಃ ತಕ್ಷಣದ ಲಾಭ ದೊರೆತಿದೆ. ಆದರೆ ಇದು ಕೇವಲ ತಾತ್ಕಾಲಿಕ ಎಂದು ಅದಕ್ಕೆ ಗುಜರಾತ್‌ನ ನಗರಸಭಾ ಚುನಾವಣೆಗಳು ಮತ್ತೊಮ್ಮೆ ನೆನಪಿಸಿವೆ.

ಗುಜರಾತ್ ಮುಂದೆ ದೇಶದ ಹೊಸ ಪ್ರವೃತ್ತಿಯ ಹರಿಕಾರ ಎಂದು ಬೀಗುತ್ತಿರುವ ಬಿಜೆಪಿ ಭ್ರಮೆಯಲ್ಲಿರುವಂತಿದೆ ಎಂದು ಟೈಂಸ್ ಆಫ್ ಇಂಡಿಯಾ (ಡಿ. 27) ಭಾವಿಸುತ್ತದೆ. ಅಲ್ಲಿನ ನಗರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ನಿರೀಕ್ಷಿಸಿದಷ್ಟು ಕಳಪೆ ಪ್ರದರ್ಶನ ನೀಡದಿರುವುದು, ಹಾಗೂ ಬಿಜೆಪಿ ತನ್ನ ನಿರೀಕ್ಷೆಯನ್ನು ತಲುಪದಿರುವುದರ ಬಗ್ಗೆ ಟಿಪ್ಪಣಿ ಮಾಡುತ್ತಾ ಅದು ಹೀಗೆ ಹೇಳಿದೆ.

"ಬಿಜೆಪಿಗೆ ಇದೊಂದು ಹಿನ್ನಡೆ" ಎಂದು ಇಂಡಿಯನ್ ಎಕ್ಸ್ ಪ್ರೆಸ್ ಕೂಡಾ ಹೇಳಿದೆ (ಡಿ. 28) ಹಿಂದೆ ತನ್ನ ಕೈಯಲ್ಲಿದ್ದ ಮೂರು ಮಹತ್ವದ ನಗರಸಭೆಗಳನ್ನು ಅದೀಗ ಕಳೆದುಕೊಂಡಿರುವುದು ಬಿಜೆಪಿ ಆಡಳಿತದ ನಗರಸಭೆಗಳ ಕಳಪೆ ಅಥವಾ ಕೆಲವೊಮ್ಮೆ ಅತ್ಯಂತ ಅರುಚಿರತ ಕೆಲಸಗಳಿಂದಾಗಿ" ಎಂದು ಅದು ಟಿಪ್ಪಣಿ ಮಾಡಿದೆ. ಈ ಹಿನ್ನಡೆ ಹಾಗೂ ಕೆಲವು ದಿನಗಳ ಹಿಂದೆ ರಾಜಸ್ಥಾನ,ಮಧ್ಯಪ್ರದೇಶ ನಗರಸಭಾ ಚುನಾವಣೆಗಳ ಸೋಲಿಂದ ಬಿಜೆಪಿ ರಾಷ್ಟ್ರೀಯ ಮುಖಂಡತ್ವ ಏನು ಪಾಠ ಕಲಿಯುತ್ತದೆಂದು ಕಾದು ನೋಡಬೇಕಾಗಿದೆ ಎಂದು ಅದು ಹೇಳಿದೆ.

ಕರ್ನಾಟಕದಲ್ಲಿ ಬಿಜೆಪಿಯ ಪ್ರಚಾರದ ಬಗ್ಗೆ ಆರ್.ಎಸ್.ಎಸ್. ಮುಖಂಡತ್ವ ನಿರಾಸೆ ವ್ಯಕ್ತಪಡಿಸಿತ್ತಂತೆ -ಫಲಿತಾಂಶಗಳು ಬರುವ ಮೊದಲು. ಈಗ ಗುಜರಾತ್‌ನ ಹಿನ್ನಡೆಗೆ ಆರ್.ಎಸ್.ಎಸ್. ಪ್ರಚಾರ ಶೈಲಿಯೇ ಕಾರಣ ಎಂದು ದೂಷಿಸಲಾಗುತ್ತಿದೆಯಂತೆ?

★★★★★★★

ಶೇಷನ್‌ರಿಗೆ ಕಿವಿಯಿದೆಯೇ?

"ಗುರುತಿನ ಚೀಟಿಯನ್ನು ಕಾರಣವಾಗಿಟ್ಟುಕೊಂಡು (ರಾಷ್ಟ್ರಪತಿ ಆಳ್ವಿಕೆಗೆ ಕಾರಣವಾಗುವಂತಹ) ಅನಿವಾರ್ಯ ಪರಿಸ್ಥಿತಿಯನ್ನು ಸೃಷ್ಟಿಸುವುದು ಉಚಿತವೇ ಎಂಬುದನ್ನು ಶೇಷನ್ ಆಲೋಚಿಸುವುದು ಒಳ್ಳೆಯದು. ಸ್ವತಂತ್ರ ಭಾರತದಲ್ಲಿ ಗುರುತಿನ ಚೀಟಿ ಇಲ್ಲದೇ ಚುನಾವಣೆಗಳು ನಡೆದಿವೆ. ಅವೆಲ್ಲ ಭ್ರಷ್ಟ ಸುಧಾರಣೆಗಳು, ಅಲ್ಲಿ ಜನಾಭಿಪ್ರಾಯ ಸರಿಯಾಗಿ ಪ್ರತಿಬಿಂಬಿತವಾಗಲಿಲ್ಲ ಎಂದು ಶೇಷನ್ ಕೂಡಾ ಹೇಳಲು ಸಾಧ್ಯವೇ" ಎಂದಿದೆ ಕನ್ನಡಪ್ರಭ (ಡಿ. 28)

"ತನ್ನ ನಿರ್ಣಯಕ್ಕೆ ಮತ್ತೆ-ಮತ್ತೆ ಸವಾಲೊಡ್ಡುವಂತೆ, ನ್ಯಾಯಾಲಯದ ಪ್ರತಿಕೂಲ ತೀರ್ಪುಗಳಿಂದ ಅವು ಅಪಮೌಲ್ಯಗೊಳ್ಳುವಂತೆ ಆಗದಿರುವುದು ಮುಖ್ಯ ಚುನಾವಣಾ ಆಯುಕ್ತರ ಹಿತಾಸಕ್ತಿಯಿಂದಲೇ, ಆ ಸ್ಥಾನಕ್ಕೆ ಇರುವ ಉಚ್ಚ ಸಾಂವಿಧಾನಿಕ ಸ್ಥಾನ-ಮಾನದ ದೃಷ್ಟಿಯಿಂದಲೇ ಒಳ್ಳೆಯದು" ಎಂದು 'ಹಿಂದೂ ದೈನಿಕ' (ಡಿ. 27) ಕೂಡಾ ಸಲಹೆ ಮಾಡಿದೆ. ಶೇಷನ್‌ರಿಗೆ ಕೇಳಿಸುತ್ತಿದೆಯೇ?